ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 11 ಬುಧವಾರ 2023

ಸಂಪುಟ: 43 | ಸಂಚಿಕೆ: 265 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಬಿಜೆಪಿಯ ಪಾಪದ ಪುರಾಣ...

ಪ್ರದೇಶ ಕಾಂಗ್ರೆಸ್‌ನಿಂದ ಕಳೆದ 3 ವರ್ಷದ ಬಿಜೆಪಿ ಆಳ್ವಿಕೆಯಲ್ಲಿನ ಹಗರಣಗಳ ಪಟ್ಟಿ ಬಿಡುಗಡೆ

■ ಯಡಿಯೂರಪ್ಪ ಕಾಲದಲ್ಲಿ ಆರಂಭವಾದ ಭ್ರಷ್ಟಾಚಾರ ಬೊಮ್ಮಾಯಿ ಕಾಲದಲ್ಲಿ ಬ್ರಹ್ಮಾಂಡ
■ ಆಪರೇಷನ್ ಕಮಲದ ಮೂಲಕ ಅಧಿಕಾರಕ್ಕೆ ಬಂದು ಭ್ರಷ್ಟಾಚಾರ ಸಾಗರದಲ್ಲಿ ಮುಳುಗಿದ್ದಾರೆ

ಬೆಂಗಳೂರು, ಜ.10(ಕೆಎಂಶಿ)–ಮೈತ್ರಿ ಸರ್ಕಾರ ಪತನಗೊಂಡ ನಂತರ ಅಧಿಕಾರಕ್ಕೆ ಬಂದ ಬಿ.ಎಸ್.ಯಡಿಯೂರಪ್ಪ, ಆನಂತರ ಬಸವರಾಜ ಬೊಮ್ಮಾಯಿ ಕರ್ನಾಟಕವನ್ನು ಭ್ರಷ್ಟಾಚಾರದ ಕೂಪಕ್ಕೆ ತಳ್ಳಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಕಳೆದ ಮೂರೂವರೆ ವರ್ಷಗಳ ಆಡಳಿತದಲ್ಲಿ ನಡೆದಿರುವ ಹಗರಣಗಳನ್ನು ಬಿಜೆಪಿಯ ಪಾಪದ ಪುರಾಣ ಎಂದು ಪಟ್ಟಿ ಮಾಡಿ, ಪುಸ್ತಕವನ್ನು ಇಂದಿಲ್ಲಿ ಬಿಡುಗಡೆ ಮಾಡಿದೆ.

ಆರೋಪದ ಪಟ್ಟಿ ಬಿಡುಗಡೆ ಮಾಡಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅನೈತಿಕ ಮಾರ್ಗದ ಮೂಲಕ ರಚನೆಯಾದ ಸರ್ಕಾರ. ರಾಜ್ಯದ ಬೊಕ್ಕಸವನ್ನು ಲೂಟಿ ಮಾಡುವುದರಲ್ಲಿ ನಿರತವಾಗಿದೆ ಎಂದು ದೂರಿದರು. 2018ರಲ್ಲಿ ಇವರಿಗೆ ಜನ ಪೂರ್ಣ ಪ್ರಮಾಣದಲ್ಲಿ ಆಶೀರ್ವಾದ ಮಾಡಿರಲಿಲ್ಲ, 104 ಸ್ಥಾನಗಳಲ್ಲಿ ಮಾತ್ರ ಗೆದ್ದಿದ್ದರು. ಆ ನಂತರ ಆಪರೇಷನ್ ಕಮಲದ ಮೂಲಕ ಅನೈತಿಕ ಮಾರ್ಗದಲ್ಲಿ ಈ ಸರ್ಕಾರ ರಾಜ್ಯದ ಮೇಲೆ ▶ 8ನೇ ಪುಟಕ್ಕೆ



ಬದಲಾವಣೆ ಮಾಡೋಣ; ನಮ್ಮೊಂದಿಗೆ ಕೈಜೋಡಿಸಿ...

ಬಿಜೆಪಿಯ ಪಾಪದ ಪುರಾಣವನ್ನು ಜನರ ಮುಂದೆ ಇಡಬೇಕು, ಮುಂದೆ ನಾವು ಮಾಡುವ ಬದಲಾವಣೆ ಜನರಿಗೆ ತಿಳಿಸಲು ಗ್ಯಾರಂಟಿ ಯಾತ್ರೆ ಮಾಡುತ್ತೇವೆ. ನಾವು ನಮ್ಮ ಭರವಸೆಗಳಿಗೆ ಗ್ಯಾರಂಟಿ ನೀಡುತ್ತೇವೆ. ಕಾರಣ, ನಾವು ಬಸವಣ್ಣನವರ ನಾಡಿನಲ್ಲಿದ್ದು ನಾವು ನುಡಿದಂತೆ ನಡೆಯುತ್ತೇವೆ. ▶ 8ನೇ ಪುಟಕ್ಕೆ

ಇಂದಿನಿಂದ ಕಾಂಗ್ರೆಸ್ ಬಸ್ ಯಾತ್ರೆ: ಸಿದ್ದರಾಮಯ್ಯ, ಡಿಕೆಶಿ ನೇತೃತ್ವ

ಬೆಂಗಳೂರು: ವಿಧಾನಸಭೆ ಚುನಾವಣೆ ಪೂರ್ವ ತಯಾರಿ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ನಾಳೆಯಿಂದ 20 ದಿನಗಳ ಪ್ರಜಾಧ್ವನಿ ರಥಯಾತ್ರೆ ಆರಂಭಿಸಲಿದ್ದು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಜಂಟಿ ಪ್ರವಾಸ ತೆರಳಲಿದ್ದಾರೆ.

ಇಂದು ಬೆಳಗ್ಗೆ ಕೆಪಿಸಿಸಿ ಕಚೇರಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದ ಮಾಜಿ ಸಿಎಂ ಸಿದ್ದರಾಮಯ್ಯ, ಕಾಂಗ್ರೆಸ್ ಬಸ್ ಯಾತ್ರೆಗೆ ಎರಡು ಗುಂಪುಗಳು ರಚನೆಯಾಗಲಿವೆ. ಒಂದು ಗುಂಪು ನನ್ನ ನೇತೃತ್ವದಲ್ಲಿ ಮತ್ತೊಂದು ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ. ವಿಧಾನಸಭೆ ಚುನಾವಣೆಗೂ ಮುನ್ನ ರಾಜ್ಯದ ಎಲ್ಲಾ 224 ಕ್ಷೇತ್ರಗಳಲ್ಲೂ ಯಾತ್ರೆ ನಡೆಯಲಿದೆ ಎಂದು ಸಿದ್ದರಾಮಯ್ಯ ಹೇಳಿದರು. ಅಂತೆಯೇ ಇದೇ ವೇಳೆ ಬಿಜೆಪಿ ವಿರುದ್ಧ ಚಾರ್ಜ್‌ಶೀಟ್ ▶ 8ನೇ ಪುಟಕ್ಕೆ

ಚಾಮುಂಡಿಬೆಟ್ಟದ ದೇವಿಕೆರೆ ಅಭಿವೃದ್ಧಿ ಕಾಮಗಾರಿಗೆ

ಮೈಸೂರು ರಾಜವಂಶಸ್ಥರ ತಡೆ

● ಮಾಹಿತಿ ನೀಡದೇ ಕಾಮಗಾರಿ ನಡೆಸುತ್ತಿರುವುದಕ್ಕೆ ವಕೀಲರ ಮೂಲಕ ಆಕ್ಷೇಪ ● ದೇವಿಕೆರೆಯೂ ಸೇರಿದಂತೆ ಸುತ್ತಮುತ್ತಲ ಆಸ್ತಿ ರಾಜವಂಶಸ್ಥರ ಒಡೆತನದಾದ್ದರಿಂದಲೇ ಈ ಬೆಳವಣಿಗೆ ಸಾಧ್ಯತೆ



ಮೈಸೂರು,ಜ.10(ಎಂಟಿವೈ)– ಚಾಮುಂಡಿಬೆಟ್ಟದ ದೇವಿಕೆರೆ ಅಭಿವೃದ್ಧಿ ಕಾಮಗಾರಿಗೆ ಮೈಸೂರು ರಾಜಮನೆತನ ತಡೆಯೊಡ್ಡಿದೆ. ದೇವಿಕೆರೆಯೂ ಸೇರಿದಂತೆ ಸುತ್ತಮುತ್ತಲ ಆಸ್ತಿ ರಾಜವಂಶಸ್ಥರಿಗೆ ಸೇರಿದ್ದಾಗಿದ್ದು, ಅನುಮತಿ ಪಡೆಯದೇ ಕೆರೆ ಅಭಿವೃದ್ಧಿ ಮಾಡಬಾರದು ಎಂದು ತಮ್ಮ ವಕೀಲರ ಮೂಲಕ ತಡೆಹಿಡಿಯಲಾಗಿದೆ. ಸಣ್ಣ ನೀರಾವರಿ ಇಲಾಖೆಯಿಂದ 7.50 ಕೋಟಿ ರೂ. ವೆಚ್ಚದಲ್ಲಿ ದೇವಿಕೆರೆ ಅಭಿವೃದ್ಧಿ ಕಾಮಗಾರಿ ಆರಂಭಿಸಲಾಗಿದ್ದು, ಕೆರೆಯಲ್ಲಿರುವ ನೀರನ್ನು ಪೂರ್ಣ ಪ್ರಮಾಣದಲ್ಲಿ ಹೊರಹಾಕಿ ಹೂಳೆತ್ತಲಾಗುತ್ತಿತ್ತು. ಕಳೆದ 7–8 ದಶಕದಿಂದಲೂ ಕೊಳಚೆ ನೀರಿನೊಂದಿಗೆ ಕೆರೆಗೆ ಸೇರಿದ್ದ ಹೂಳನ್ನು ಮೇಲೆತ್ತಲಾಗುತ್ತಿದ್ದು, ಆ ಮೂಲಕ ಕೆರೆಗೆ ಕಾಯಕಲ್ಪ ನೀಡಲು ನೀರಾವರಿ ಇಲಾಖೆ ಮುಂದಾಗಿತ್ತು.

ದೇವಿಕೆರೆ ಅಭಿವೃದ್ಧಿ ಕಾಮಗಾರಿ ಕುರಿತಂತೆ 'ಮೈಸೂರು ಮಿತ್ರ'ನ ಜ.10ರ ಸಂಚಿಕೆಯ ಮುಖಪುಟದಲ್ಲಿ 'ಚಾಮುಂಡಿ ಬೆಟ್ಟದ ದೇವಿಕೆರೆ ಪುನರ್‌ಜೀವನಗೊಳಿಸುವ ಕಾರ್ಯ ಆರಂಭ' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು.

ಕೆರೆ ಅಭಿವೃದ್ಧಿ ಕಾಮಗಾರಿ ಮಾಹಿತಿ ಅರಿತ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರು ತಮ್ಮ ವಕೀಲರ, ಚಾಮುಂಡಿಬೆಟ್ಟದ ದೇವಿಕೆರೆ ಬಳಿ ಕಳುಹಿಸಿ, ಕೆರೆ ಅಭಿವೃದ್ಧಿ ಕಾಮಗಾರಿ ಸ್ಥಗಿತಗೊಳಿಸುವಂತೆ ಸೂಚನೆ ನೀಡಿದ್ದಾರೆ. ವಕೀಲರು ಸ್ಥಳಕ್ಕೆ ಬಂದು ಅರಮನೆ ಆಕ್ಷೇಪ ತಿಳಿಸುತ್ತಿದ್ದಂತೆ ಅಭಿವೃದ್ಧಿ ಕಾಮಗಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಕಾಮಗಾರಿ ಸ್ಥಗಿತಗೊಳಿಸುವಂತೆ ಸೂಚಿಸಿಲ್ಲ, ಮಾಹಿತಿ ಪಡೆದಿದ್ದಾರೆ

"ದೇವಿಕೆರೆ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದ್ದ ವೇಳೆ ಇಂದು ಬೆಳಗ್ಗೆ ಮೈಸೂರು ಅರಮನೆಯಿಂದ ರಾಜವಂಶಸ್ಥರ ವಕೀಲರು ಆಗಮಿಸಿ, ಅಭಿವೃದ್ಧಿ ವಿಚಾರಕ್ಕೆ ಸಂಬಂಧಿಸಿದಂತೆ ಅರಮನೆ ಗಮನಕ್ಕೆ ತರದೇ ಕಾಮಗಾರಿ ನಡೆಸುತ್ತಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಗುತ್ತಿಗೆದಾರರು ತಿಳಿಸಿದ್ದಾರೆ. ಅಲ್ಲದೆ, ರಾಜವಂಶಸ್ಥರನ್ನು ಸಂಪರ್ಕಿಸುವಂತೆಯೂ ತಿಳಿಸಿದ್ದಾರೆ. ಕಾಮಗಾರಿಯನ್ನು ನಿಲ್ಲಿಸುವಂತೇನೂ ತಿಳಿಸಿಲ್ಲ. ಹಿರಿಯ ಅಧಿಕಾರಿಗಳು ಈ ಸಂಬಂಧ ಮಾತನಾಡಲಿದ್ದಾರೆ.

– ಡಿ.ಎನ್.ರಮೇಶ್,
ಸಹಾಯಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ

ರಾಜವಂಶಸ್ಥರ ಆಕ್ಷೇಪಕ್ಕೆ ಕಾರಣ: ಚಾಮುಂಡಿಬೆಟ್ಟದ ದೇವಿಕೆರೆ ಸೇರಿದಂತೆ ಸುತ್ತಮುತ್ತಲ ಆಸ್ತಿ ರಾಜಮನೆತನಕ್ಕೆ ಸೇರಿದ್ದಾಗಿದೆ ಎಂದು ರಾಜಮನೆತನ ಹಕ್ಕೊತ್ತಾಯ ಮಾಡುತ್ತಾ ಬಂದಿದೆ. ಹಾಗಾಗಿ ದೇವಿಕೆರೆ ಅಭಿವೃದ್ಧಿಗೂ ಅನುಮತಿ ಪಡೆಯದೇ ಇರುವುದು ರಾಜವಂಶಸ್ಥರ ಆಕ್ಷೇಪಕ್ಕೆ ಕಾರಣವಾಗಿದೆ. ಚಾಮುಂಡೇಶ್ವರಿ ದೇವಾಲಯದಲ್ಲಿ ನಡೆಯುವ ಧಾರ್ಮಿಕ ಆಚರಣೆಗಳಲ್ಲಿ ದೇವಿಕೆರೆಯೂ ಪ್ರಧಾನ ಪಾತ್ರವಹಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ಕೆರೆ ಅಭಿವೃದ್ಧಿಗೂ ಮುನ್ನ ತಮ್ಮ ಗಮನಕ್ಕೆ ತರದಿರುವುದು ಹಾಗೂ ತಮ್ಮನ್ನು ▶ 6ನೇ ಪುಟಕ್ಕೆ

ಬೆಂಗಳೂರಲ್ಲಿ ಮೆಟ್ರೋ ಪಿಲ್ಲರ್ ಕುಸಿದು ತಾಯಿ–ಮಗು ಸಾವು

ಮೃತರ ಕುಟುಂಬಕ್ಕೆ ಸಿಎಂ ಪರಿಹಾರ ನಿಧಿಯಿಂದ ತಲಾ 10 ಲಕ್ಷ, ಬಿಎಂಆರ್‌ಸಿಎಲ್‌ನಿಂದ 20 ಲಕ್ಷ ರೂ. ಪರಿಹಾರ



ಬೆಂಗಳೂರು, ಜ.10– ನಾಗವಾರ ಬಳಿ ನಿರ್ಮಾಣ ಹಂತದ ಮೆಟ್ರೋ ಪಿಲ್ಲರ್ ದಿಢೀರ್ ಕುಸಿದುಬಿದ್ದ ಪರಿಣಾಮ ಮೃತಪಟ್ಟ ತಾಯಿ ಹಾಗೂ ಎರಡು ವರ್ಷದ ಮಗು ದುರಂತ ಸಾವಿಗೀಡಾಗಿದ್ದಾರೆ. ಇವರ ಕುಟುಂಬಸ್ಥರಿಗೆ ಸಿಎಂ ಪರಿಹಾರ ನಿಧಿಯಿಂದ ತಲಾ 10 ಲಕ್ಷ ರೂಪಾಯಿ ಹಾಗೂ ಬಿಎಂಆರ್‌ಸಿಎಲ್‌ನಿಂದ 20 ಲಕ್ಷ ರೂ. ಪರಿಹಾರವನ್ನು ಪ್ರಕಟಿಸಲಾಗಿದೆ. ಎಚ್‌ಬಿಆರ್ ಲೇಔಟ್ ▶ 6ನೇ ಪುಟಕ್ಕೆ

ದೇವಾಲಯಗಳ ಗಂಟೆ ಕಳವು: ನಾಲ್ವರು ಕಳ್ಳರ ಬಂಧನ

ಬಂಧಿತರು ಮೈಸೂರಿನ ಒಂದೇ ಕುಟುಂಬ ಸದಸ್ಯರು

● 10 ಲಕ್ಷ ರೂ. ಮೌಲ್ಯದ 750 ಕೆಜಿ ನಾನಾ ಲೋಹದ ಗಂಟೆ, ಕಾರು ವಶ
● ಪಿರಿಯಾಪಟ್ಟಣ, ಹಾಸನ, ಮೈಸೂರು, ಚಾ.ನಗರದಲ್ಲೂ ಗಂಟೆ ಕಳವು

ಮಡಿಕೇರಿ, ಜ.10– ಕೊಡಗಿನ ವಿವಿಧ ದೇವಾಲಯಗಳಲ್ಲಿ ನಡೆದಿದ್ದ ಗಂಟೆ ಕಳವು ಪ್ರಕರಣವನ್ನು ಭೇದಿಸಿರುವ ಕೊಡಗು ಪೊಲೀಸರ ವಿಶೇಷ ತಂಡ, ನಾಲ್ವರು ಅಂತರ ಜಿಲ್ಲಾ ಕಳ್ಳರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಮೈಸೂರು ಕೆಸರೆ ನಿವಾಸಿಗಳಾದ ಅಮ್ಜದ್ ಅಹಮದ್(37), ಸಮೀವುಲ್ಲಾ ಅಲಿಯಾಸ್ ಸಮಿ(22), ಜುಲ್ಫೀಕರ್ ಅಲಿಯಾಸ್ ಜುಲ್ಲು(36) ಮತ್ತು ಹೈದರ್(36) ಬಂಧಿತ ಆರೋಪಿಗಳು. ಇವರಿಂದ 10 ಲಕ್ಷ ರೂ. ಮೌಲ್ಯದ 750 ಕೆ.ಜಿ. ತೂಕದ ವಿವಿಧ ಮಾದರಿ ಲೋಹದ ಗಂಟೆಗಳು ಹಾಗೂ ಕೃತ್ಯಕ್ಕೆ ಬಳಸಿದ್ದ ಕಾರನ್ನು ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಮಲ್ಲೀರ ಎ. ಅಯ್ಯಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


8 ಪ್ರಕರಣಗಳು ದಾಖಲು: ಕಳೆದ 2022ನೇ ಸಾಲಿನ ಫೆಬ್ರವರಿ ತಿಂಗಳಿಂದ



ಅಕ್ಟೋಬರ್‌ವರೆಗೆ ದೇವಾಲಯಗಳ ಗಂಟೆ ಕಳವು ಕುರಿತು ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಟ್ಟು 8 ಪ್ರಕರಣಗಳು ದಾಖಲಾಗಿದ್ದವು. ಗೋಣಿಕೊಪ್ಪ ಮಾಯಮುಡಿ ಕಮಟೆ ಶ್ರೀ ಮಹದೇವ ದೇವಾಲಯ, ಪೊನ್ನಂಪೇಟೆ ನಿಟ್ಟೂರು ಕಾರ್ಮಾಡುವಿನ ಕಾಲ ಭೈರವೇಶ್ವರ ದೇವಾಲಯ, ಬಿಳೂರು ಕಲ್ಲುಗುಡಿ ಈಶ್ವರ ದೇವಸ್ಥಾನ, ಬೆಸಗೂರಿನ ಮಹಾದೇವ ದೇವಸ್ಥಾನ, ಶ್ರೀ ದುರ್ಗಿ ದೇವಸ್ಥಾನ, ಹಳ್ಳಿಗಟ್ಟಿನ ಭದ್ರಕಾಳಿ ದೇವಾಲಯ, ವಿರಾಜಪೇಟೆಯ ಕರಡ ಮಲೆತಿರಿಕೆ ▶ 8ನೇ ಪುಟಕ್ಕೆ

ಸ್ಯಾಂಟ್ರೋ ರವಿ ದಂಧೆ ಪ್ರಕರಣ

ಮೈಸೂರಲ್ಲಿ ತನಿಖಾ ಪ್ರಗತಿ ಪರಿಶೀಲಿಸಿದ ಎಡಿಜಿಪಿ ಅಲೋಕ್‌ಕುಮಾರ್



ಅಂಡಮಾನ್‌ನಲ್ಲಿ ಸ್ಯಾಂಟ್ರೋ ರವಿ?

ಈ ನಡುವೆ ಸ್ಯಾಂಟ್ರೋ ರವಿ ಅಂಡಮಾನ್‌ನಲ್ಲಿ ಅಡಗಿದ್ದಾನೆ ಎಂಬ ಮಾಹಿತಿಯ ಜಾಡು ಹಿಡಿದಿರುವ ಪೊಲೀಸರ ಒಂದು ತನಿಖಾ ತಂಡ ಅಲ್ಲಿಗೂ ತೆರಳಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ. ತನ್ನ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಬೇರೆ ಮೊಬೈಲ್‌ನಿಂದ ಕಾರ್ಯಾಚರಣೆ ನಡೆಸುತ್ತಿರುವ ಆತ, ದಿನದಿಂದ ದಿನಕ್ಕೆ ಸ್ಥಳ ಬದಲಾವಣೆ ಮಾಡುತ್ತಿದ್ದು, ಗುರುತು ಸಿಗದಂತೆ ವೇಷ ಬದಲಾಯಿಸಿಕೊಂಡು ಅಡಗಿದ್ದಾನೆ ಎಂದು ಹೇಳಲಾಗುತ್ತಿದೆ.

ಮೈಸೂರು, ಜ.10(ಆರ್‌ಕೆ)–ರಾಜ್ಯವನ್ನೇ ತಲ್ಲಣಗೊಳಿಸಿರುವ ಸ್ಯಾಂಟ್ರೋ ರವಿ ವೇಶ್ಯಾವಾಟಿಕೆ ಹಾಗೂ ಅಕ್ರಮ ಚಟುವಟಿಕೆ ದಂಧೆ ಕುರಿತಂತೆ ಕಾನೂನು–ಸುವ್ಯವಸ್ಥೆ ವಿಭಾಗದ ಅಪರ ಪೊಲೀಸ್ ಮಹಾನಿರ್ದೇಶಕ (ಎಡಿಜಿಪಿ) ಅಲೋಕ್‌ಕುಮಾರ್ ಅವರು ಇಂದು ಮೈಸೂರಲ್ಲಿ ತನಿಖಾ ಪ್ರಗತಿ ಪರಿಶೀಲನೆ ನಡೆಸಿದರು. ಬೆಂಗಳೂರಿನಿಂದ ಮಧ್ಯಾಹ್ನ 12.40 ಗಂಟೆಗೆ ಮೈಸೂರಿಗೆ ಆಗಮಿಸಿದ ಅವರನ್ನು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಡಿಸಿಪಿಗಳಾದ ಎಂ.ಎಸ್. ಗೀತಾ ಪ್ರಸನ್ನ, ಶಿವರಾಜ್, ನಜರ್‌ಬಾದ್‌ನಲ್ಲಿರುವ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಪುಷ್ಪಗುಚ್ಛ ನೀಡಿ, ಸ್ವಾಗತಿಸಿದರು. ▶ 6ನೇ ಪುಟಕ್ಕೆ

ಶೀಘ್ರ ಸ್ಯಾಂಟ್ರೋ ರವಿ ಬಂಧನ

ಮೈಸೂರಲ್ಲಿ ಎಡಿಜಿಪಿ ವಿಶ್ವಾಸ

ಮೈಸೂರು, ಜ.10(ಆರ್‌ಕೆ)–ತಲೆಮರೆಸಿಕೊಂಡಿರುವ, ವೇಶ್ಯಾವಾಟಿಕೆಯೂ ಸೇರಿದಂತೆ ಇನ್ನಿತರೆ ಅಕ್ರಮ ದಂಧೆಕೋರ ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿಯನ್ನು ಶೀಘ್ರವೇ ಬಂಧಿಸುವುದಾಗಿ ಕಾನೂನು–ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಇಂದಿಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.


ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಇಂದು ಸ್ಯಾಂಟ್ರೋ ರವಿ ಪ್ರಕರಣ ಸಂಬಂಧ ಸ್ಥಳೀಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಾಹಿತಿ ಸಂಗ್ರಹಿಸಿದ ಅವರು, ದೂರುದಾರರಾದ ಸಂತ್ರಸ್ತೆಯನ್ನು ವಿಚಾರಣೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಮೈಸೂರು, ಮಂಡ್ಯ, ರಾಮನಗರ ಹಾಗೂ ಬೆಂಗಳೂರು ನಗರಗಳಲ್ಲಿ ಶೋಧ ಕಾರ್ಯ ನಡೆಯುತ್ತಿದೆ. ಪ್ರಕರಣ ದಾಖಲಾಗಿ 8 ದಿನ ಕಳೆದಿದೆ. ಇಷ್ಟರಲ್ಲೇ ಆತನ ಬಂಧನವಾಗಬೇಕಿತ್ತು. ತಂತ್ರಜ್ಞಾನವಿದ್ದರೂ, ಕೆಲವೊಮ್ಮೆ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಾಗ ಪತ್ತೆ ಮಾಡುವುದು ಕಷ್ಟವಾಗುತ್ತದೆ. ಆರೋಪಿಗಾಗಿ ನಮ್ಮ ಪೊಲೀಸರು ತೀವ್ರ ▶ 6ನೇ ಪುಟಕ್ಕೆ



ಕಾನೂನು–ಸುವ್ಯವಸ್ಥೆ ಎಡಿಜಿಪಿ ಅಲೋಕ್ ಕುಮಾರ್ ಅವರಿಗೆ ಮೈಸೂರು ಪೊಲೀಸ್ ಆಯುಕ್ತ ಬಿ.ರಮೇಶ್ ಮಂಗಳವಾರ ಸ್ಯಾಂಟ್ರೋ ರವಿ ಪ್ರಕರಣ ಸಂಬಂಧ ಸಂಪೂರ್ಣ ಮಾಹಿತಿ ನೀಡಿದರು. ಎಸ್ಪಿ ಸೀಮಾ ಲಾಟ್ಕರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಸ್ಯಾಂಟ್ರೋ ರವಿ ವಿರುದ್ಧ ಸಮಗ್ರ ತನಿಖೆ

ಆತನ ಎಲ್ಲಾ ಆಸ್ತಿಗಳ ಜಪ್ತಿಗೂ ಮುಖ್ಯಮಂತ್ರಿ ಸೂಚನೆ



ಬೆಂಗಳೂರು, ಜ. 10 (ಕೆಎಂಶಿ)–ಅತ್ಯಾಚಾರ ಆರೋಪಿ ಹಾಗೂ ರಾಜಕಾರಣಿಗಳ ನಿಕಟ ಸಂಪರ್ಕ ಹೊಂದಿರುವ ಸ್ಯಾಂಟ್ರೋ ರವಿ ವಿರುದ್ಧ ಸಮಗ್ರ ತನಿಖೆಗೆ ಆದೇಶ ಮಾಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆತನ ಎಲ್ಲಾ ರೀತಿಯ ಆಸ್ತಿಪಾಸ್ತಿ ಜಪ್ತಿ ಮಾಡುವಂತೆ ಗೃಹ ಇಲಾಖೆಗೆ ಆದೇಶ ಮಾಡಿದ್ದಾರೆ. ಯುವಜನೋತ್ಸವ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ಯಾಂಟ್ರೋ ರವಿ ಅಕ್ರಮ ಚಟುವಟಿಕೆಗೆ ಇಪ್ಪತ್ತು ವರ್ಷಗಳ ಇತಿಹಾಸವಿದೆ. ಹಿಂದೆಲ್ಲಾ ಯಾವ ಯಾವ ಸರ್ಕಾರಗಳಿದ್ದವು, ಯಾರ ಸಂಬಂಧವಿತ್ತು ಎಂಬ ಬಗ್ಗೆ ತನಿಖೆಯಲ್ಲಿ ಸತ್ಯ ಹೊರ ಬರಲಿದೆ ಎಂದರು. ತನ್ನ ಉಳಿವಿಗಾಗಿ ಇಲ್ಲ ಸಲ್ಲದ ಆರೋಪಗಳನ್ನು ಆಡಳಿತ ನಡೆಸುವವರ ವಿರುದ್ಧ ವ್ಯವಸ್ಥಿತವಾಗಿ ಪ್ರಹಾರ ಮಾಡಲಾಗುತ್ತಿದೆ. ಇದಕ್ಕೆ ಪ್ರತಿಪಕ್ಷಗಳ ನಾಯಕರು ಧ್ವನಿಗೂಡಿಸಿದ್ದಾರೆ. ಯಾವುದು ಸತ್ಯ, ▶ 6ನೇ ಪುಟಕ್ಕೆ

ವಕೀಲರ ಸಂಪರ್ಕದಲ್ಲಿದ್ದರೆ ಪೊಲೀಸರಿಗೇಕೆ ಸಿಕ್ಕಿಲ್ಲ...!?

ಎಡಿಜಿಪಿಗೆ ಅಹವಾಲು ಸಲ್ಲಿಕೆ ಬಳಿಕ ಸ್ಯಾಂಟ್ರೋ ರವಿ ಪತ್ನಿ, ಸಂತ್ರಸ್ತೆ ಮಾಧ್ಯಮಗಳಿಗೆ ಪ್ರತಿಕ್ರಿಯೆ

ಮೈಸೂರು, ಜ.10(ಆರ್‌ಕೆ)–ವಕೀಲರೊಂದಿಗೆ ನಿರಂತರ ಸಂಪರ್ಕದಲ್ಲಿರುವ ಆರೋಪಿ ಸ್ಯಾಂಟ್ರೋ ರವಿ ಪೊಲೀಸರಿಗೇಕೆ ಸಿಗುತ್ತಿಲ್ಲ? ಇದು ಪತ್ರಕರ್ತರಲ್ಲಿ ದೂರುದಾರೆ, ಸಂತ್ರಸ್ತೆಯ ಅತ್ಯಂತ ಕುತೂಹಲಕಾರಿ ಪ್ರಶ್ನೆ.

ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಎಡಿಜಿಪಿ ಅಲೋಕ್ ಕುಮಾರ್ ಮುಂದೆ ವಿಚಾರಣೆಗೆ ಹಾಜರಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸ್ಯಾಂಟ್ರೋ ರವಿ ಪತ್ನಿ, ಎಡಿಜಿಪಿ ಅಲೋಕ್‌ಕುಮಾರ್ ಅವರು ಬೆಂಗಳೂರಿನಿಂದ ಬಂದು ಪ್ರಕರಣ ಸಂಬಂಧ ವಿಚಾರಣೆ ನಡೆಸಿರುವುದರಿಂದ ನನಗೆ ನ್ಯಾಯ ಸಿಗುತ್ತದೆ ಎಂಬ ಭರವಸೆ ಇದೆ. ನಾನು ಆತನಿಂದ ಅನುಭವಿಸಿದ ನಾನಾ ರೀತಿಯ ಕಿರುಕುಳ, ಯಾತನೆಯನ್ನು ಎಳೆ–ಎಳೆಯಾಗಿ ವಿವರಿಸಿದ್ದೇನೆ ಎಂದರು. ಪ್ರಕರಣ ದಾಖಲಾಗಿ ಇಷ್ಟು ದಿನಗಳಾದರೂ, ಆರೋಪಿಯನ್ನು ಬಂಧಿಸಿಲ್ಲ.

ಆತ ತಲೆಮರೆಸಿಕೊಂಡಿದ್ದಾನೆಂದು ಹೇಳುತ್ತಿದ್ದಾರೆ. ವಕೀಲರಿಗೆ ಸಿಗುತ್ತಿರುವ ಆತ ಪೊಲೀಸರಿಗೆ ಸಿಗುತ್ತಿಲ್ಲ ಎಂದರೆ ಹೇಗೆ. ▶ 6ನೇ ಪುಟಕ್ಕೆ

ಮೈಲ್ಯಾಕ್ ಅಧ್ಯಕ್ಷ ಆರ್.ರಘುಗೆ ರಾಜ್ಯ ಸಚಿವ ಸ್ಥಾನಮಾನ


ಆರ್.ರಘು ಕೌಟಿಲ್ಯ

ಮೈಸೂರು, ಜ.10– ಮೈಸೂರಿನ ಮೈಲ್ಯಾಕ್ಸ್ ಅಧ್ಯಕ್ಷ ಆರ್.ರಘು ಕೌಟಿಲ್ಯ ಅವರಿಗೆ ರಾಜ್ಯ ಸಚಿವ ಸ್ಥಾನಮಾನ ನೀಡಿ, ರಾಜ್ಯ ಸರ್ಕಾರದ ಅಧೀನ ಕಾರ್ಯದರ್ಶಿ ಟಿ.ವಿ. ಸುನಂದಮ್ಮ ಆದೇಶ ಹೊರಡಿಸಿದ್ದಾರೆ.

ಇತ್ತೀಚೆಗಷ್ಟೇ ಮೈಲ್ಯಾಕ್ ಸಂಸ್ಥೆ ಅಮೃತ ಮಹೋತ್ಸವ ಆಚರಿಸಿಕೊಂಡಿತ್ತು. ಈ ಹಿಂದೆಯೂ ದೇವರಾಜ ಅರಸು ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದಾಗಲೂ ಆರ್.ರಘು ಕೌಟಿಲ್ಯ ಅವರಿಗೆ ರಾಜ್ಯ ಸಚಿವ ಸ್ಥಾನಮಾನ ಕಲ್ಪಿಸಲಾಗಿತ್ತು.

ಮಿಸ್ ವರ್ಲ್ಡ್‌ವೈಡ್ –2022 ಸ್ಪರ್ಧೆಯಲ್ಲಿ ಬೆಸ್ಟ್ ಟ್ಯಾಲೆಂಟ್ ರನ್ನರ್ ಅಪ್ ಆಗಿ ಅನುಪಮಾ ರಾವ್



ಮೈಸೂರು,ಜ.10–ಇತ್ತೀಚೆಗೆ ಸಿಂಗಾಪೂರದಲ್ಲಿ ನಡೆದ ಮಿಸ್ ವರ್ಲ್ಡ್‌ವೈಡ್–2022 ಇಂಟರ್‌ನ್ಯಾಷನಲ್ ಸೌಂದರ್ಯ ಸ್ಪರ್ಧೆಯಲ್ಲಿ ದಕ್ಷಿಣ ಏಷಿಯಾ ಪ್ರತಿನಿಧಿಸಿದ್ದ ಮೈಸೂರಿನ (ಮಧ್ಯದಲ್ಲಿರುವವರು) ಅನುಪಮಾ ರಾವ್ ಅವರು ಬೆಸ್ಟ್ ಟ್ಯಾಲೆಂಟ್ ರನ್ನರ್ ಅಪ್ ಆಗಿ ಹೊರಹೊಮ್ಮಿದ್ದಾರೆ. ಇಂಡೋನೇಷಿಯಾದ ಬಾಟಮ್ ವ್ಯೂ ಬೀಚ್ ರೆಸಾರ್ಟ್‌ನಲ್ಲಿ ನಡೆದ ಸ್ಪರ್ಧೆಯ ಟ್ಯಾಲೆಂಟ್ ಸುತ್ತಿನಲ್ಲಿ ವಿಶ್ವದ ವಿವಿಧ ಮೂಲಗಳಿಂದ ಸುಮಾರು 37 ಪ್ರದರ್ಶಕರು ಭಾಗವಹಿಸಿದ್ದು, ಅವರಲ್ಲಿ ಅನುಪಮಾ ರಾವ್ ರನ್ನರ್ ಅಪ್ ಆಗಿದ್ದಾರೆ.

ಅನುಪಮಾ ರಾವ್, ಭರತನಾಟ್ಯದ ಭಾರತೀಯ ಶಾಸ್ತ್ರೀಯ ನೃತ್ಯದಲ್ಲಿ ಗುರುತಿಸಿಕೊಂಡು, ಸಿಂಗಾಪೂರ್‌ನಲ್ಲಿ ನಡೆದ ಗ್ರ್ಯಾಂಡ್ ಫಿನಾಲೆಯ ಮುಖ್ಯ ವೇದಿಕೆಯಲ್ಲಿ ಪ್ರದರ್ಶನ ನೀಡಿದರು. ಅನುಪಮಾ ರಾವ್ ಮೈಸೂರಿನ ಭೂಷಣ್ ಪ್ರದರ್ಶಕ ಕಲೆಗಳು ಮತ್ತು ದೃಶ್ಯ ಪ್ರಸ್ತುತಿ ಅಕಾಡೆಮಿಯ ಆಚಾರ್ಯ ಬದರಿ ದಿವ್ಯ ಭೂಷಣ್ ಮತ್ತು ಅಂಜನಾ ಭೂಷಣ್ ಅವರ ಶಿಷ್ಯೆ. ಇತ್ತೀಚೆಗೆ ಮುಂಬೈನ ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯ ಮಂಡಲ್‌ನಿಂದ ನಾಟ್ಯ ವಿಶಾರದ ಪರೀಕ್ಷೆಯನ್ನು ಮುಗಿಸಿದ್ದಾರೆ.

21 ವರ್ಷದ ಮಗಳ ತಾಯಿಯಾಗಿರುವ ಇವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ)ದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಲವಾರು ಪ್ರಶಸ್ತಿಗಳು ಇವರಿಗೆ ಸಂದಿವೆ. ಇವರು ಮೈಸೂರಿನ ಕುವೆಂಪುನಗರದ ನಿವಾಸಿಯಾಗಿದ್ದಾರೆ.

ಚಾಮುಂಡೇಶ್ವರಿಯಲ್ಲಿ ಬಿಜೆಪಿ ಗೆಲುವಿನ ವಿಶ್ವಾಸ

‘ಬೂತ್ ವಿಜಯ ಅಭಿಯಾನ’ದಲ್ಲಿ ಅರುಣ್‌ಕುಮಾರ್‌ಗೌಡ



ಮೈಸೂರು, ಜ.10– ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ ಶಾಸಕರಾಗಿ ಆಯ್ಕೆಯಾಗುವುದು ನಿಶ್ಚಿತ ಎಂದು ಪಕ್ಷದ ಮುಖಂಡ ಎನ್.ಅರುಣ್‌ಕುಮಾರ್‌ಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಧನಗಳ್ಳಿ ಗ್ರಾಪಂ ವ್ಯಾಪ್ತಿಯ ಯಡಹಳ್ಳಿ ಗ್ರಾಮದಲ್ಲಿ ‘ಬೂತ್ ವಿಜಯ ಅಭಿಯಾನ’ದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿಪಡಿಸುವಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದ ಜನಪ್ರತಿನಿಧಿಗಳು ವಿಫಲರಾಗಿದ್ದಾರೆ. ಆದ್ದರಿಂದ ಈ ಬಾರಿ ಬಿಜೆಪಿಗೆ ಅವಕಾಶ ಕಲ್ಪಿಸಿಕೊಡಲು ಮತದಾರರು ನಿಶ್ಚಯಿಸಿದ್ದಾರೆ ಎಂದು ತಿಳಿಸಿದರು.

ಪ್ರಧಾನಿ ಮೋದಿ ಅವರನ್ನು ಇಡೀ ವಿಶ್ವವೇ ಒಪ್ಪಿದೆ. ಸರ್ವರ ಅಭಿವೃದ್ಧಿಗಾಗಿ ಹಂತ ಹಂತವಾಗಿ ಜಾರಿಗೆ ತಂದ ಕಾರ್ಯಕ್ರಮಗಳ ಬಗ್ಗೆ ಜನರಿಗೆ ತಿಳಿದಿದೆ. ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಹಾಗೂ ಹಿಂದಿನ ಸಿಎಂ ಬಿ.ಎಸ್.ಯಡಿಯೂರಪ್ಪನವರು ಸಾಕಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಿ ಅದರ ಪರಿಣಾಮ ಜನರ ಅರಿವಿಗೆ ಬಂದಿದೆ. ಚಾಮುಂಡೇಶ್ವರಿ ಕ್ಷೇತ್ರದ ಯುವ ಸಮುದಾಯವೂ ಬಿಜೆಪಿ ಬೆಂಬಲಕ್ಕೆ ಮುಂದಾಗಿರುವುದು ಸಂತಸದ ಸಂಗತಿ. ಎಲ್ಲರ ಸಹಕಾರ, ಬೆಂಬಲದಿಂದ ಕ್ಷೇತ್ರದಲ್ಲಿ ಕಮಲ ಅರಳುವುದಂತೂ ಸತ್ಯ ಎಂದು ವಿಶ್ವಾಸದಿಂದ ನುಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಎಸ್.ಡಿ.ಮಹೇಂದ್ರ, ಮುಖಂಡರಾದ ಜಗದೀಶ್‌ಗೌಡ, ಗೋಪಾಲ್‌ಗೌಡ, ಗುರೂರು ಶಿವು, ಯಡಳ್ಳಿ ಷಣ್ಮುಖ, ಬೀರಿಹುಂಡಿ ಸೋಮಶೇಖರ್, ಕೃಷ್ಣದೇವ, ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಚೇತನ್, ಶಿವಲಿಂಗೇಗೌಡ, ನಂಜುಂಡಸ್ವಾಮಿ, ಕೆಂಚಪ್ಪ, ಮಹದೇವಪ್ಪ, ಯಡಳ್ಳಿ ಗ್ರಾಮದ ಬೂತ್ ಅಧ್ಯಕ್ಷ ಸಚ್ಚಿದಾನಂದ ಮತ್ತಿತರರು ಉಪಸ್ಥಿತರಿದ್ದರು.

ಜೆಎಸ್‌ಎಸ್ ನೇರ ಸಂದರ್ಶನ ಫೋನ್–ಇನ್ ಇಂದು


ಷಡಕ್ಷರಿಮೂರ್ತಿ

ಮೈಸೂರು,ಜ.10–ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಜೆಎಸ್‌ಎಸ್ ರೇಡಿಯೋ 91.2FM, ಸಮುದಾಯ ಬಾನುಲಿ ಕೇಂದ್ರವು ನಾಳೆ (ಜ.11) ಬೆಳಗ್ಗೆ 11.30ರಿಂದ 12.30ರವರೆಗೆ ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕ ಷಡಕ್ಷರಿಮೂರ್ತಿ ಅವರ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮ ಆಯೋಜಿಸಿದೆ.

ಷಡಕ್ಷರಿಮೂರ್ತಿ ಅವರೊಂದಿಗೆ ವೈದ್ಯಕೀಯ ಸೇವೆಗಳು, ಕಾಲು ಬಾಯಿ ಜ್ವರ, ಚರ್ಮರೋಗ ಹಾಗೂ ಇತರೆ ರೋಗಗಳನ್ನು ತಡೆಗಟ್ಟಲು ಇರುವ ಚಿಕಿತ್ಸೆಗಳು, ಚುಚ್ಚುಮದ್ದುಗಳು ಹಾಗೂ ಪಶು ಸಂಗೋಪನಾ ಇಲಾಖೆಯಲ್ಲಿರುವ ಇತರೆ ಸೇವಾ ಸೌಲಭ್ಯಗಳು, ಯೋಜನೆಗಳ ಕುರಿತು ಯಾವುದೇ ಪ್ರಶ್ನೆ ಅಥವಾ ಸಲಹೆಗಳು ಇದ್ದಲ್ಲಿ ದೂರವಾಣಿ ಸಂಖ್ಯೆ: 8296725912, 0821–2546563 ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಕನ್ನಡದ ಖ್ಯಾತ ಲೇಖಕಿ ಸಾರಾ ಅಬೂಬಕ್ಕರ್ ನಿಧನ



ಮಂಗಳೂರು, ಜ.10– ಕನ್ನಡ ಖ್ಯಾತ ಲೇಖಕಿ ಸಾರಾ ಅಬೂಬಕ್ಕರ್ ನಿಧನರಾಗಿದ್ದಾರೆ. ಅವರಿಗೆ 86 ವರ್ಷ ವಯಸ್ಸಾಗಿತ್ತು. ವಯೋಸಹಜ ಕಾರಣದಿಂದ ಅವರು ಮಂಗಳವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಅವರು ಮಂಗಳೂರಿನ ಹ್ಯಾಟ್ ಹಿಲ್ ಬಳಿ ನೆಲೆಸಿದ್ದು, ನಾಲ್ವರು ಪುತ್ರರು, ಅಪಾರ ಬಂಧುಗಳನ್ನು ಅಗಲಿದ್ದಾರೆ. ಅವರು ಗಡಿನಾಡು ಕಾಸರಗೋಡಿನ ಮಲಯಾಳಂ ಮಾತನಾಡುವ ಕುಟುಂಬದಲ್ಲಿ ವಕೀಲರಾದ ಪಿ ಅಹಮದ್ ಮತ್ತು ಝೈನಬಿ ಅವರಿಗೆ ಜೂನ್ 30, 1936 ರಂದು ಜನಿಸಿದರು.

ಬೆಳೆಯುವಾಗಲೆ ಅವರು ಮಹಿಳಾ ಸಮಾನತೆ, ಮಹಿಳಾ ಸಬಲೀಕರಣದ ಚಿಂತನೆ ಹೊಂದಿದ್ದರು. ಮೊದಲ ಕಾದಂಬರಿ ‘ಚಂದ್ರಗಿರಿಯ ತೀರದಲ್ಲಿ’ ಜನಪ್ರಿಯವಾಗಿ ಗಮನ ಸೆಳೆದಿತ್ತು. ಸುಮಾರು 10 ಕಾದಂಬರಿ, 6 ಕಥಾ ಸಂಕಲನಗಳು, 5 ಬಾನುಲಿ ನಾಟಕ, ಲೇಖನ, ಪ್ರವಾಸ ಕಥನದೊಂದಿಗೆ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರು. ಅವರ ಪಾರ್ಥಿವ ಶರೀರವನ್ನು ಮಂಗಳೂರಿನ ಹಾಥಿಲ್‌ನಲ್ಲಿರುವ ಅವರ ನಿವಾಸದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು.

ಡಾ.ಅಂಬೇಡ್ಕರ್, ದಲಿತರ ಸ್ಮರಿಸುವ ಬಿಜೆಪಿಯದು ಬರೀ ಬೂಟಾಟಿಕೆ ರಾಜಕಾರಣ

● ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ ವಾಗ್ದಾಳಿ ● ಸಂವಿಧಾನ ಬದಲಾಯಿಸಲೇ ನಾವಿದ್ದೇವೆ ಎಂಬುವರಿಂದ ‘ಸಂವಿಧಾನ ಮಂತ್ರ’


ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಮಾತನಾಡುತ್ತಿರುವುದು.

ಮೈಸೂರು, ಜ.10(ಎಂಟಿವೈ)– ಚುನಾವಣೆ ಸಂದರ್ಭದಲ್ಲಿ ಮಾತ್ರ ಬಿಜೆಪಿ ದಲಿತರನ್ನು ಹಾಗೂ ಡಾ. ಬಿ.ಆರ್.ಅಂಬೇಡ್ಕರ್ ಅವರನ್ನು ಸ್ಮರಿಸುವ ಬೂಟಾಟಿಕೆ ರಾಜಕಾರಣ ಆರಂಭಿಸಿ, ಧೃತರಾಷ್ಟ್ರ ಪ್ರೇಮ ತೋರಿಸುತ್ತದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ವಾಗ್ದಾಳಿ ನಡೆಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಮೊದಲಿಂದಲೂ ದಲಿತ ವಿರೋಧಿ ಧೋರಣೆ ಅನುಸರಿಸುತ್ತಲೇ ಬಂದಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶಕ್ಕೆ ಕೊಡುಗೆ ನೀಡಿರುವ ಸಂವಿಧಾನವನ್ನೇ ಬದಲಿಸಲು ಸಂಚು ನಡೆಸುತ್ತಿರುವ ಬಿಜೆಪಿಗರು ಚುನಾವಣೆ ಸಮೀಪಿಸುತ್ತಿದ್ದಂತೆಯೇ ದಲಿತರ ಬಗ್ಗೆ ಓಲೈಕೆಯ ರಾಜಕಾರಣ ಆರಂಭಿಸುತ್ತಾರೆ. ಸಚಿವರೊಬ್ಬರು ಸಂವಿಧಾನ ಬದಲಿಸುವುದೇ ನಮ್ಮ ಮುಂದಿನ ಗುರಿ ಎಂದು ಬಹಿರಂಗವಾಗಿ ಪಕ್ಷದ ಅಜೆಂಡಾವನ್ನು ಹೇಳಿದ್ದರೂ ಪಕ್ಷದ ವರಿಷ್ಠರು ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಹಂತಹಂತವಾಗಿ ದಲಿತರು, ಶೋಷಿತ ಸಮುದಾಯದವರ ಮೇಲೆ ದೌರ್ಜನ್ಯ ಎಸಗುತ್ತಲೇ ಬಂದಿದ್ದಾರೆ. ಆದರೆ, ಮುಂಬರುವ ಚುನಾವಣೆಯಲ್ಲಿ ದಲಿತ ಮತದಾರರನ್ನು ಓಲೈಸಿಕೊಳ್ಳಲು ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ದಲಿತ ಜಪ ಮಾಡಲಾರಂಭಿಸಿದ್ದಾರೆ ಎಂದು ಕಿಡಿಕಾರಿದರು.

ಮಹಾಭಾರತದಲ್ಲಿ ಧೃತರಾಷ್ಟ್ರನು, ಭೀಮನ ಮೇಲೆ ಮನದೊಳಗೆ ದ್ವೇಷವನ್ನು ಇಟ್ಟುಕೊಂಡು, ಮೇಲ್ನೋಟಕ್ಕೆ ಪ್ರೀತಿ ತೋರಿಸುತ್ತಾನೆ. ದಲಿತರ ಬಗ್ಗೆ ಬಿಜೆಪಿಯ ವರ್ತನೆಯೂ ಅದೇ ಆಗಿದೆ. ದಲಿತರನ್ನು ಅಪ್ಪಿಕೊಳ್ಳುವ ಆಸೆ ತೋರುತ್ತಾ, ಅವರನ್ನು ನಾಶ ಮಾಡಲು ಸಂಚು ರೂಪಿಸುತ್ತಿದೆ. ಚುನಾವಣೆ ಬಂದಾಗ ದಲಿತರನ್ನು ಸ್ಮರಿಸುವುದು, ಅಧಿಕಾರಕ್ಕೆ ಬಂದ ಮೇಲೆ ಅವರನ್ನು ಶೋಷಿಸುವುದು ಬಿಜೆಪಿ ಸಂಸ್ಕೃತಿ. ದಲಿತರು ಎಚ್ಚರ ವಹಿಸಬೇಕು ಎಂದರು.

ಪರಿಶಿಷ್ಟ ಜಾತಿಗೆ ಮೀಸಲಾತಿ ಪ್ರಮಾಣ ಶೇ.2ರಷ್ಟು, ಪರಿಶಿಷ್ಟ ಪಂಗಡಕ್ಕೆ ಶೇ.5ರಷ್ಟು ಹೆಚ್ಚಳ ಮಾಡುವ ನಿಲುವಿಗೆ ಸರ್ವಾನುಮತದಿಂದ ಕಾಂಗ್ರೆಸ್ ಕೂಡ ಒಪ್ಪಿಗೆ ನೀಡಿದೆ. ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ 200 ದಿನ ವಾಲ್ಮೀಕಿ ಶ್ರೀಗಳು ಪ್ರತಿಭಟನೆ ಮಾಡಿದರು. ಚುನಾವಣೆ ಸಮೀಪಿಸುತ್ತಿರುವುದನ್ನು ಮನಗಂಡು ಮೀಸಲಾತಿ ಹೆಚ್ಚಳ ಮಾಡಲಾಗಿದೆ. ಆದರೆ, ಮೀಸಲಾತಿ ಹೆಚ್ಚಳವನ್ನು ಇಂದಿಗೂ ಅಧಿಕೃತಗೊಳಿಸಿಲ್ಲ. ಸಂಸತ್‌ನಲ್ಲಿ 9ನೇ ಶೆಡ್ಯೂಲ್‌ಗೆ ಸೇರಿಸಿದರೆ ಮಾತ್ರ ಮಾನ್ಯತೆ ದೊರೆಯುತ್ತದೆ. ಇಲ್ಲದಿದ್ದರೆ ಮೀಸಲಾತಿ ಹೆಚ್ಚಳ ನಿರ್ಧಾರಕ್ಕೆ ಮಾನ್ಯತೆ ಸಿಗುವುದಿಲ್ಲ. ಮೂರು ದಿನದ ಹಿಂದೆ ಸಂಸತ್‌ನಲ್ಲಿ ಸಚಿವ ನಾರಾಯಣ ಸ್ವಾಮಿ ಅವರು ಹೇಳಿಕೆ ನೀಡಿ, ಮೀಸಲಾತಿಯನ್ನು ಶೇ.50ಕ್ಕಿಂತ ಹೆಚ್ಚು ಮಾಡುವ ಪ್ರಸ್ತಾಪವಿಲ್ಲ ಎಂದಿದ್ದಾರೆ. ಈ ಹಿನ್ನೆಲೆಯಲ್ಲಿ ಮೀಸಲಾತಿ ಹೆಚ್ಚಳಕ್ಕೆ ಮಾನ್ಯತೆ ದೊರಕಿಸಬೇಕು. ಇಲ್ಲದಿದ್ದರೆ ಕೋತಿ ಬೆಣ್ಣೆ ತಿಂದು ಮೇಕೆ ಬಾಯಿಗೆ ಸವರಿದಂತಾಗುತ್ತದೆ ಎಂದರು.

ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ಪ್ರಜಾಪ್ರಭುತ್ವ ವಿರೋಧಿ ಕಾನೂನುಗಳು ಮತ್ತು ಡಾ.ಅಂಬೇಡ್ಕರ್ ಅವರಿಗೆ ಮಾಡಿರುವ ಸಾಲು ಸಾಲು ಅವಮಾನಗಳು ನಮ್ಮ ಮುಂದಿದೆ. ಬಿಜೆಪಿ ಅಂಬೇಡ್ಕರ್ ಅವರನ್ನು ಒಬ್ಬ ವ್ಯಕ್ತಿಯಾಗಿ ಮಾತ್ರ ನೋಡುತ್ತಿದೆ. ನಾವು ಅವರನ್ನು ಒಂದು ವ್ಯಕ್ತಿತ್ವವಾಗಿ, ಜ್ಞಾನವಾಗಿ ಕಾಣುತ್ತಿದ್ದು, ಕಾಂಗ್ರೆಸ್ ಸಂವಿಧಾನದ ಆಶಯ ಪಾಲಿಸುತ್ತಾ ಅದನ್ನು, ಪ್ರಜಾಪ್ರಭುತ್ವವನ್ನು ಜೀವಂತವಾಗಿ ಇಟ್ಟಿದ್ದೇವೆ. ಕಾಂಗ್ರೆಸ್ ಎಂದಿಗೂ ದಲಿತರನ್ನು ವೋಟ್ ಬ್ಯಾಂಕ್‌ಗೆ ಸೀಮಿತಗೊಳಿಸಿಲ್ಲ. ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಜಾರಿಗೆ ತಂದ ಬಡತನ ನಿರ್ಮೂಲನೆ, ಉಳುವವನೇ ಭೂಮಿಯ ಒಡೆಯ’ ಕಾನೂನನ್ನು ವಿರೋಧಿಸಿದವರು ಯಾರು. ಇಂದು ದಲಿತರ ಭೂಮಿಯನ್ನು ಕಸಿದುಕೊಳ್ಳಲು ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದವರು ಯಾರು. ಮೀಸಲಾತಿ ಪದ್ಧತಿಯನ್ನು ಅರ್ಥಹೀನ ಮಾಡಲು ಖಾಸಗೀಕರಣ ನೀತಿಯನ್ನು ಅನುಸರಿಸುತ್ತಿರುವವರು ಯಾರು ಎಂದು ಧ್ರುವನಾರಾಯಣ್ ಪ್ರಶ್ನಿಸಿದರು.

ಸಿಎಂ ಬಸವರಾಜ ಬೊಮ್ಮಾಯಿ ಅವರು ನಾನೊಬ್ಬ ಅಂಬೇಡ್ಕರ್‌ವಾದಿ ಎಂದು ಹೇಳಿಕೊಂಡಿದ್ದಾರೆ. ಆದರೆ, ಅಂಬೇಡ್ಕರ್ ಆಶಯಗಳನ್ನು ನಿಮ್ಮ ಆಡಳಿತದಲ್ಲಿ ಈಡೇರಿಸಿದ್ದೀರಾ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ತಿರುಗೇಟು ನೀಡಿದರು.

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ 6,83,823 ಕೇಂದ್ರ ಸರ್ಕಾರಿ ಉದ್ಯೋಗಗಳು ಖಾಲಿ ಇದೆ. ಇದರಲ್ಲಿ 2019ರವರೆಗೆ ಎಸ್ಸಿ 1,713, ಎಸ್ಟಿಗೆ ಸೇರಿದ 2530 ಹುದ್ದೆಗಳು ಖಾಲಿ ಇದೆ. ಕಳೆದ 3 ವರ್ಷಗಳಲ್ಲಿ ಇದರ ಪ್ರಮಾಣ ಹೆಚ್ಚಾಗಿದೆ. ಬಿಜೆಪಿ ಮೊದಲು ಈ ಹುದ್ದೆಗಳನ್ನು ಭರ್ತಿ ಮಾಡಿ ದಲಿತರ ಮೇಲಿನ ಪ್ರೀತಿಯನ್ನು ಸಾಬೀತುಪಡಿಸಲಿ ಎಂದು ಧ್ರುವನಾರಾಯಣ್ ಸವಾಲು ಹಾಕಿದರು.

ರಾಜ್ಯದಲ್ಲಿ ದಲಿತ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಿಲ್ಲ. ಇದರಿಂದ ಉನ್ನತ ಶಿಕ್ಷಣದಿಂದ ವಂಚಿತರನ್ನಾಗಿಸುವ ಹುನ್ನಾರ ನಡೆಸಲಾಗುತ್ತಿದೆ. ಹಾಸ್ಟೆಲ್‌ಗಳಲ್ಲಿ ದಲಿತ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಭತ್ಯೆಯನ್ನೂ ಕಡಿತಗೊಳಿಸಲಾಗಿದೆ. ದಲಿತ ಮಕ್ಕಳ ಹಾಸ್ಟೆಲ್‌ಗೆ ಮೀಸಲಾಗಿದ್ದ ಸರ್ಕಾರಿ ಭೂಮಿಯನ್ನು ರಾಷ್ಟ್ರೋತ್ಥಾನ ಸಂಸ್ಥೆಗೆ ಉಚಿತವಾಗಿ ನೀಡಲಾಗಿದೆ ಎಂದು ಆರೋಪಿಸಿದರು.

ಇತ್ತೀಚೆಗೆ ಮೈಸೂರಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಸಿ.ಟಿ.ರವಿ ಸುಳ್ಳುಗಳಿಂದ ಕೂಡಿರುವ ಹೇಳಿಕೆ ನೀಡಿದ್ದಾರೆ. ಅವರಿಗೆ ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ಗೌರವವಿದ್ದರೆ, ನಮ್ಮ ದೇಶ ಜಾತ್ಯತೀತ ರಾಷ್ಟ್ರ ಎಂದು ಬಹಿರಂಗವಾಗಿ ಒಪ್ಪಿಕೊಳ್ಳಲಿ. ಧರ್ಮ–ಧರ್ಮಗಳನ್ನು ಎತ್ತಿ ಕಟ್ಟುವುದು, ದ್ವೇಷದ ವಿಷ ಬೀಜ ಬಿತ್ತುವುದನ್ನು ಬಿಟ್ಟು, ಎಲ್ಲ ಜಾತಿ, ಧರ್ಮಗಳ ಬಗ್ಗೆ ಮಮತೆ, ಕರುಣೆ, ಪ್ರೀತಿ ಬೆಳಸಿಕೊಳ್ಳಲಿ. ಅಂಬೇಡ್ಕರ್ ಜಾತ್ಯಾತೀತ ಸಿದ್ಧಾಂತವನ್ನು ಎತ್ತಿ ಹಿಡಿದಿದ್ದರು. ಅದೇ ಮಾದರಿಯಲ್ಲಿ ಸಿ.ಟಿ.ರವಿ ತೆರಳುವುದಾಗಿ ತಿಳಿಸಲಿ ಎಂದು ಹೇಳಿದರು.

ಮೀಸಲಾತಿ ರಕ್ಷಣಾ ಪಡೆ ಮಾಡಬೇಕೆಂದಿರುವ ಬಿಜೆಪಿಯ ಡಿ.ಎಸ್.ವೀರಯ್ಯ ಹೇಳಿಕೆ ಹಾಸ್ಯಾಸ್ಪದವಾಗಿದೆ. ಬಿಜೆಪಿಯಲ್ಲಿ ಸಿಎಂ ಹುದ್ದೆ ಕೇಳುವ ಕಾಲ ದೂರವಿಲ್ಲ’ ಎಂದು ಛಲವಾದಿ ನಾರಾಯಣಸ್ವಾಮಿ ಹೇಳುವ ಮೂಲಕ ಬಿಜೆಪಿಯಲ್ಲಿ ದಲಿತ ಸಿಎಂ ಹುದ್ದೆ ಕೇಳಲು ಇದು ಸೂಕ್ತ ಸಂದರ್ಭವಲ್ಲ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ಬಿಜೆಪಿಯಲ್ಲಿ ದಲಿತರು ಸಿಎಂ ಹುದ್ದೆ ಕೇಳುವ ಕಾಲವೇ ಇನ್ನೂ ಬಂದಿಲ್ಲ ಎಂದು ಟೀಕಿಸಿದರು. ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಎಂಎಲ್ಸಿ ಆರ್.ಧರ್ಮಸೇನಾ, ವಕ್ತಾರ ಹೆಚ್.ಎ.ವೆಂಕಟೇಶ್ ಇದ್ದರು.

ಸಿದ್ದರಾಮಯ್ಯ ವರುಣಾದಿಂದಲೇ ಸ್ಪರ್ಧಿಸಲಿ ಎಂಬುದು ನಮ್ಮ ಇಚ್ಛೆ

ಮಾಜಿ ಸಿಎಂ ಸಿದ್ದರಾಮಯ್ಯ ವರುಣಾ ಕ್ಷೇತ್ರದಿಂದಲೇ ಸ್ಪರ್ಧಿಸಲಿ ಎಂಬುದು ನಮ್ಮ ಇಚ್ಛೆಯಾಗಿತ್ತು. ಹಾಗಾಗಿ ವರುಣಾ ಕ್ಷೇತ್ರದಿಂದಲೇ ಸ್ಪರ್ಧಿಸುವಂತೆ ಕೋರಿದ್ದೇವೆ. ಆದರೆ, ಕೋಲಾರದಿಂದ ಸ್ಪರ್ಧಿಸುವುದಾಗಿ ಹೇಳಿಕೆ ನೀಡಿದ್ದಾರೆ. ಹೈಕಮಾಂಡ್ ಒಪ್ಪಿದರೆ ಮಾತ್ರ ಕೋಲಾರದಿಂದ ಸ್ಪರ್ಧಿಸುವುದಾಗಿ ಹೇಳಿದ್ದಾರೆ. ಸಿದ್ದರಾಮಯ್ಯ ರಾಜ್ಯ ನಾಯಕರು. ಅವರು ಕೋಲಾರ ಸೇರಿದಂತೆ ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ಗೆಲ್ಲುತ್ತಾರೆ. ಈ ಹಿಂದೆ ಐದು ವರ್ಷ ಮುಖ್ಯಮಂತ್ರಿಯಾಗಿ ಹಲವು ಜನಪ್ರಿಯ ಯೋಜನೆ ಅನುಷ್ಠಾನಗೊಳಿಸಿ, ಎಲ್ಲಾ ಬಡ ಜನರಿಗೆ ನೆರವಾಗಿದ್ದರು. ಭ್ರಷ್ಟಾಚಾರ ರಹಿತ ಆಡಳಿತ ನೀಡಿದ್ದರು.

–ಧ್ರುವನಾರಾಯಣ್, ಕೆಪಿಸಿಸಿ ಕಾರ್ಯಾಧ್ಯಕ್ಷ

ವಚನಗಳ ಸತತ ಅಧ್ಯಯನದಿಂದ ಅವುಗಳ ತಾತ್ಪರ್ಯ ಅರಿಯಲು ಸಾಧ್ಯ



ಮೈಸೂರು,ಜ.10(ಎಸ್‌ಪಿಎನ್)– ನಮ್ಮ ಗುರಿಗಳು ಏನೇ ಇರಲಿ. ದಿನನಿತ್ಯ ಒಂದು ವಚನವನ್ನು ಪಠಿಸಿದರೆ, ನಮ್ಮ ಮನಸ್ಸು ಸಮಾಜದಲ್ಲಿ ಒಳಗೊಳ್ಳುವಿಕೆಯತ್ತ ವಾಲುತ್ತದೆ ಎಂದು ಹಿರಿಯ ಸಾಹಿತಿ ರಾಜಶೇಖ ಜಮದಂಡಿ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ 2ನೇ ಹಂತದಲ್ಲಿರುವ ಜೆಎಸ್‌ಎಸ್ ಪಿಯು ಕಾಲೇಜಿನಲ್ಲಿ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶರಣರ ಕುರಿತು ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಭಾಷಣ ಹಾಗೂ ವೇಷ ಭೂಷಣ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಹಾಗೂ ‘ಜ್ಞಾನವೇ ಕ್ರಿಯೆ, ಕ್ರಿಯೆಯೇ ಜ್ಞಾನ’ ವಿಷಯ ಕುರಿತು ಮಾತನಾಡಿದರು.

ನಾವು ನಿತ್ಯ ಮಾಡುವ ಕಾಯಕದಲ್ಲಿ ಪರಕಾಯ ಪ್ರವೇಶ ಮಾಡಿದಾಗ ಮಾತ್ರ. ಆ ವೃತ್ತಿಗೆ ನ್ಯಾಯ ಒದಗಿಸಬಹುದು. ಈ ನಿಷ್ಠೆಯನ್ನು 12ನೇ ಶತಮಾನದ ಶರಣರಲ್ಲಿ ಕಾಣಬಹುದಿತ್ತು. ಅಲ್ಲದೆ, ಶರಣರು ಶಾಲೆಗೆ ಹೋಗಿ ಅಕ್ಷರ ಕಲಿತವರಲ್ಲ. ಬದಲಾಗಿ ತಮ್ಮ ವೃತ್ತಿಯ ಅನುಭವ ಹಾಗೂ ಸಮಾಜದಿಂದ ಪಡೆದ ಅರಿವಿನಿಂದ ವಚನಗಳನ್ನು ರಚಿಸಿ ಇಂದಿಗೂ ಜನಪ್ರಿಯರಾಗಿದ್ದಾರೆ ಎಂದು ಹೇಳಿದರು.

ವೇದಿಕೆಯಲ್ಲಿ ಜೆಎಸ್‌ಎಸ್ ಪ್ರೌಢಶಾಲೆ ಮುಖ್ಯಶಿಕ್ಷಕಿ ವಿ.ನಾಗೇಶ್, ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎ.ಆರ್.ಕಾಂತರಾಜು, ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಸೇರಿದಂತೆ ಇತರರಿದ್ದರು.

ಜನನ–ಮರಣ ನೋಂದಣಿ ಶೇ.100ರಷ್ಟು ಸಾಧನೆ: ಆರೋಗ್ಯಾಧಿಕಾರಿಗಳಿಗೆ ಡಿಸಿ ಸೂಚನೆ



ಮೈಸೂರು,ಜ.10–ಜನನ–ಮರಣ ಘಟನೆ ಸಂಭವಿಸಿದ 21 ದಿನದೊಳಗೆ ನೋಂದಾಯಿಸಿ ಮೊದಲ ಪ್ರಮಾಣ ಪತ್ರವನ್ನು ಉಚಿತವಾಗಿ ನೀಡಬೇಕು. ಜನನ ಮರಣ ನೋಂದಣಿಯನ್ನು ಶೇ.100ರಷ್ಟು ಸಾಧಿಸಿ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ನಾಗರಿಕ ನೋಂದಣಿ ಪದ್ಧತಿ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾಗರಿಕ ನೋಂದಣಿ ದಾಖಲೆ, ಜನನ–ಮರಣದ ಕಾನೂನು ದಾಖಲಾತಿಗಳನ್ನು ಪಡೆದು ಸಂರಕ್ಷಿಸಬೇಕು. ಎಲ್ಲಾ ಆಸ್ಪತ್ರೆಗಳಲ್ಲಿಯೂ ಗರ್ಭಿಣಿಯರ ಮಾಹಿತಿ ವರದಿಯಾದ ಬಳಿಕ ಮುಂಚಿತವಾಗಿಯೇ ದಾಖಲಾತಿಗಳನ್ನು ಪಡೆದು ಮಗುವಿನ ಜನನದ ನಂತರ 21 ದಿನದೊಳಗೆ ಜನನ ನೋಂದಣಿ ಮಾಡಿಸಬೇಕು. ಜನನದ ಸಂದರ್ಭದಲ್ಲೇ ಜನನ ಪ್ರಮಾಣ ಪತ್ರ ದೊರಕುವಂತೆ ಮಾಡಿ, ನೋಂದಣಿ ಮಾಡಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಿ ಎಂದರು.

ಎಲ್ಲಾ ಜನನ–ಮರಣ ಘಟನೆಗಳಿಗೂ ಇ ಜನ್ಮ ತಂತ್ರಾಂಶದಲ್ಲಿ ನೋಂದಣಿ ಕಡ್ಡಾಯವಾಗಿದ್ದು, ಬಡವರಿಗೆ ಈ ಜನ್ಮ ತಂತ್ರಾಂಶದಲ್ಲಿ ನೋಂದಣಿ ಮಾಡಿಸುವುದರ ಬಗ್ಗೆ ಹೆಚ್ಚು ಅರಿವಿರುವುದಿಲ್ಲ. ಅವರಿಗೆ ದಾಖಲಾತಿಗಳ ಹೆಸರಿನಲ್ಲಿ ಮೋಸವಾಗಬಾರದು. ಹೆಚ್ಚಿನ ಜನನಗಳು ಆಸ್ಪತ್ರೆಗಳಲ್ಲಿಯೇ ಆಗುವುದರಿಂದ ಗ್ರಾಮ ಮಟ್ಟದಲ್ಲಿ ಗ್ರಾಮ ಲೆಕ್ಕಿಗರು, ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯಾಧಿಕಾರಿಗಳು ನೋಂದಣಿ ವಿಚಾರದಲ್ಲಿ ಹೆಚ್ಚು ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದು ಸೂಚಿಸಿದರು.

ಜನನ–ಮರಣ ಪ್ರಕರಣಗಳ ನೋಂದಣಿ ಕಡ್ಡಾಯವಾಗಿದ್ದು, ದಾಖಲಾತಿಗಳ ಕುರಿತು ಮುಂದಿನ ದಿನಗಳಲ್ಲಿ ಬಡವರಿಗೆ ತೊಂದರೆಯಾಗಬಾರದು. ನೋಂದಣಿ ಯಾಕೆ ಸರಿಯಾದ ಸಮಯಕ್ಕೆ ಆಗುತ್ತಿಲ್ಲ. ನೋಂದಣಿ ವಿಚಾರದಲ್ಲಿ ಸರಿಯಾಗಿ ಕೆಲಸ ನಿರ್ವಹಿಸದ ಅಧಿಕಾರಿಗಳ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲಾ ಸಾಂಖ್ಯಿಕಾಧಿಕಾರಿಗಳಾದ ಕೃಷ್ಣಮೂರ್ತಿ ಮಾತನಾಡಿ, 2022ನೇ ಸಾಲಿನಲ್ಲಿ 2021ನೇ ಸಾಲಿಗೆ ಹೋಲಿಸಿದಾಗ ಒಟ್ಟು ತಡ ನೋಂದಣಿ ಪ್ರಕರಣಗಳು ಕಡಿಮೆಯಾಗಿದ್ದು, ಕೋವಿಡ್‌ನ ನಂತರದ ದಿನಗಳಲ್ಲಿ ನೋಂದಣಿ ಪ್ರಮಾಣ ಸುಧಾರಿಸಿದೆ. ಒಟ್ಟು ನೋಂದಣಿಯಲ್ಲಿ ಶೇ.23ರಷ್ಟು ಪ್ರಕರಣಗಳು ತಡವಾಗಿ ನೋಂದಣಿಯಾಗಿವೆ. ಒಟ್ಟು ನೋಂದಣಿಯಲ್ಲಿ ಶೇ.27ರಷ್ಟು ಪ್ರಕರಣಗಳು ಮೈಸೂರು ಜಿಲ್ಲಾ ಕೇಂದ್ರದ ಆರೋಗ್ಯ ಕೇಂದ್ರಗಳಲ್ಲಿ, ಶೇ.19ರಷ್ಟು ಪ್ರಕರಣಗಳು ಮೈಸೂರು ಮಹಾನಗರ ವ್ಯಾಪ್ತಿಯಲ್ಲಿ ತಡವಾಗಿ ನೋಂದಣಿಯಾಗುತ್ತಿವೆ ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪ್ರಸಾದ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.1.2023 ಬುಧವಾರ, ಮಳೆ ನಕ್ಷತ್ರ: ಉತ್ತರಾಷಾಢ, 11.01.2022ರಿಂದ 23.01.2023
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ,
ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ–ಯೋಗಶಿಕ್ಷಕ ಡಿ.ಶ್ರೀಹರಿ 6.40 ಅರಿವಿನ ಶಿಖರ, ಗಾಯನ–ಟಿ.ಎಸ್.ಸ್ನೇಹಾ, ಎಂ.ಡಿ.ಸುಮತಿ ಮುರಾರಿ, ವ್ಯಾಖ್ಯಾನ–ಡಾ.ಸಿ.ನಾಗಣ್ಣ 8.30 ತಿರುವಯ್ಯಾರು ತ್ಯಾಗರಾಜ ಆರಾಧನಾ ಮಹೋತ್ಸವದಲ್ಲಿ ಪಂಚರತ್ನ ಕೃತಿಗಳ ಗಾಯನದ ನೇರಪ್ರಸಾರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಅನಂತ ಕುಲಕರ್ಣಿ, ರೂಪ ಮತ್ತು ದೀಪ 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ನಕ್ಕರೆ ಅದೇ ಸ್ವರ್ಗ" ರಚನೆ–ಯಮುನಾ ಮೂರ್ತಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ 3.00 ಲಯ ಸಂಭ್ರಮ–ವಾದ್ಯ ವೈಭವದಲ್ಲಿ ತ್ಯಾಗರಾಜರ ಪಂಚರತ್ನ ಕೃತಿಗಳು ಪ್ರಸ್ತುತಿ–ಹೆಚ್.ಎಲ್. ಶಿವಶಂಕರ ಸ್ವಾಮಿ 4.00 ಮಹಿಳಾರಂಗ–ಭಕ್ತಿಗೀತೆಗಳನ್ನು ಹಾಡುವ ಎಮ್.ಆರ್.ಯಶೋದಾ ಅವರೊಂದಿಗೆ ಮಾತುಕತೆ 5.30 ಸಿರಿ ತೋಟಗಾರಿಕೆ –ತೋಟಗಾರಿಕೆ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ 6.50 ಕೃಷಿರಂಗ–ಕಿಸಾನ್‌ವಾಣಿ, ಹಿಪ್ಪುನೇರಳೆ ಬೆಳೆಗೆ ಕಾಡುವ ರೋಗಗಳು ಹಾಗೂ ಕೀಟ ಬಾಧೆ ಮತ್ತು ಅವುಗಳ ಸಮಗ್ರ ನಿರ್ವಹಣೆ ಕುರಿತು ಡಾ. ಅರುಣ್‌ಕುಮಾರ್ ಜಿ.ಎಸ್. ಅವರೊಂದಿಗೆ ಸಂದರ್ಶನ 9.30 ಯಶೋಗಾಥೆ–ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳೊಂದಿಗೆ ಸಂದರ್ಶನ 10.00 ಜನಪದಗೀತೆ– ಕೆಂಪಮ್ಮ ಮತ್ತು ತಂಡ 10.30 ಸವಿನೆನಪು

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜೆ, ಲಕ್ಷಾರ್ಚನೆ ಮತ್ತು ವಾರ್ಷಿಕ ಕುಂಭಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ:** ಪರಂಪರೆ ಕೂಟದ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಕರಾಮುವಿ ಕುಲಪತಿ ಪ್ರೊ.ಶರಣಪ್ಪ ಹಲಸೆ, ಮುಖ್ಯ ಅತಿಥಿಗಳು: ಕರಾಮುವಿ ಕುಲಸಚಿವ ಪ್ರೊ.ಮೂರ್ತಿ, ಪುರಾತತ್ವ ವಸ್ತು ಸಂಗ್ರಹಾಲಯ ಆಯುಕ್ತ ಎ.ದೇವರಾಜ್, ಸ್ಥಳ: ಕರಾಮುವಿ ನಳ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 9.30ಕ್ಕೆ.

■ **ಶ್ರೀ ಉತ್ತರಾದಿ ಮಠ ಹಾಗೂ ಶ್ರೀ ಗುರುರಾಘವೇಂದ್ರ ಸೇವಾ ಟ್ರಸ್ಟ್ :** ಶ್ರೀ ತ್ಯಾಗರಾಜರ 175ನೇ ಆರಾಧನಾ ಅಂಗವಾಗಿ ಶ್ರೀ ತ್ಯಾಗರಾಜರ ಕಾರ್ಯಕ್ರಮ ಹಾಗೂ ಸಂಗೀತ ಕ್ಷೇತ್ರದ ಪಂಡಿತರಿಗೆ ಸನ್ಮಾನ, ಸನ್ಮಾನಿತರು : ರಾಜೇಶ್ ಪಡಿಯಾರ್, ವಿದ್ವಾನ್ ಎಂ.ಆರ್. ಮಂಜುನಾಥ್, ವಿದ್ವಾನ್ ಭೀಮಶಂಕರ್ ಬಿದನೂರು, ಆಸ್ಥಾನ ವಿದ್ವಾನ್ ಕೃಷ್ಣಮೂರ್ತಿ, ಎಂ.ಎಸ್. ಜಯರಾಮ್, ವಿದುಷಿ ವಿ. ಜ್ಯೋತಿ, ಡಾ. ಸಿ.ಆರ್. ರಾಘವೇಂದ್ರ ಪ್ರಸಾದ್, ಮುಖ್ಯ ಅತಿಥಿಗಳು : ಶಾಸಕ ಎಲ್. ನಾಗೇಂದ್ರ, ಮೇಯರ್ ಶಿವಕುಮಾರ್, ಶ್ರೀ ಉತ್ತರಾದಿ ಮಠದ ವ್ಯವಸ್ಥಾಪಕ ಪಂಡಿತ್ ಅನಿರುದ್ಧಾಚಾರ್ಯ ಪಾಂಡುರಂಗಿ, ವಯೋಲಿನ್ ವಾದಕ ಡಾ. ಮೈಸೂರು ಮಂಜುನಾಥ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಸ್ಥಳ: ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಆವರಣ, ರೈಲ್ವೆ ಮ್ಯೂಸಿಯಂ ಎದುರು, ಯಾದವಗಿರಿ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ವ್ಯಸನ ಮುಕ್ತಿ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10ರಿಂದ.

■ **ಮಹಾರಾಜ ಕಾಲೇಜು, ಕನ್ನಡ ವಿಭಾಗ ಮತ್ತು ಕನ್ನಡ ಸಂಘ:** ಕುವೆಂಪು ಸಂಸ್ಮರಣೆ, ಉದ್ಘಾಟನೆ: ಸಂಸ್ಕೃತಿ ಚಿಂತಕ ಡಾ.ಚಕ್ಕರೆ ಶಿವಶಂಕರ್, ಅಧ್ಯಕ್ಷತೆ: ಪ್ರಾಂಶುಪಾಲ ಪ್ರೊ.ಸಿ.ಎ.ಶ್ರೀಧರ, ಮುಖ್ಯ ಅತಿಥಿಗಳು: ಪೊಲೀಸ್ ನಿರೀಕ್ಷಕ ಪಿ.ಕೆ.ರಾಜು, ಉಪಸ್ಥಿತರು: ಪ್ರೊ.ಜಿ.ಎಚ್.ನಾಗರಾಜ್, ಪ್ರೊ.ಡಿ. ವಿಜಯಲಕ್ಷ್ಮಿ, ಡಾ.ಟಿ.ಕೆ.ಕೆಂಪೇಗೌಡ, ಸ್ಥಳ: ಜೂನಿಯರ್ ಬಿ.ಎ.ಹಾಲ್, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು, ಸ್ನಾತಕ ಮತ್ತು ಸ್ನಾತಕೋತ್ತರ ಕೇಂದ್ರ :** ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಶಾಸಕ ಎಲ್.ನಾಗೇಂದ್ರ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಸಾಂಸ್ಕೃತಿಕ ಚಿಂತಕ ಹೆಚ್. ಜನಾರ್ಧನ್ (ಜನ್ನಿ), ಚಲನಚಿತ್ರ ನಟ ಮಿಥುನ್, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಪ್ರೊ. ಶ್ರೀನಿವಾಸ, ಉಪಸ್ಥಿತರು : ಡಾ. ಆರ್. ಜಯರಾಜು, ಡಾ. ಬಿ. ಸವಿತಾ, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ, ಬೆಳಗ್ಗೆ 11ಕ್ಕೆ.

■ **ಸಂಚಲನ ಮೈಸೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ (ಬೆಂಗಳೂರು) :** ರಾಜ್ಯ ಮಟ್ಟದ ಸಂಚಲನ, ಮಕ್ಕಳ ನಾಟಕೋತ್ಸವ ಮತ್ತು ಜಾನಪದ ಉತ್ಸವ, ಸಭಾ ಕಾರ್ಯಕ್ರಮ, ಕರ್ನಾಟಕ ಸಂಘದ ಅಧ್ಯಕ್ಷ ಜಯಪ್ರಕಾಶ್‌ಗೌಡ, ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಉಪನಿರ್ದೇಶಕರಾದ ಮಂಜುಳಾ, ಪಾಲಿಕೆ ಸದಸ್ಯ ಎಸ್.ಬಿ.ಎಂ. ಮಂಜು, ಎಸ್‌ಎಂಪಿ ಡೆವಲಪರ್ಸ್ ಅಧ್ಯಕ್ಷ ಶಿವಪ್ರಕಾಶ್, ರಕ್ಷಾ ಎಂ. ಹಿರೇಮಠ್ ಅವರಿಂದ ಮೋಹಿನಿ ಅಟ್ಟಂ, ಶಕ್ತಿಧಾಮ ವಿದ್ಯಾಶಾಲೆಯ ಶಾಲೆಯ ಮಕ್ಕಳಿಂದ ಕನ್ನಡ ಗೀತೆಗಳು, ಸದ್ವಿದ್ಯಾ (ರಂಗ ತಂಡ) ಶಾಲೆಯ ಮಕ್ಕಳಿಂದ ಸ್ಮಶಾನ ಕುರುಕ್ಷೇತ್ರಂ ನಾಟಕ ಪ್ರದರ್ಶನ, ರಚನೆ : ಕುವೆಂಪು, ಸಂಗೀತ : ಭಿನ್ನಷಡ್ಜ, ನಿರ್ದೇಶನ : ಅಜಯ ಚ. ನೀನಾಸಮ್, ಸ್ಥಳ: ಕಿರುರಂಗ ಮಂದಿರ, ಸಂಜೆ 6ರಿಂದ.

■ **ಶ್ರೀ ಅಂಡಾಳ್ ಮಂದಿರಂ :** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಅಂಡಾಳ್ ಮಂದಿರಂ ಆವರಣ, ವಿ.ವಿ.ಮೊಹಲ್ಲಾ, ಸಂಜೆ 6ರಿಂದ 7.30 ರವರೆಗೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಬಿ.ಕೆ. ಸೀತಾಲಕ್ಷ್ಮೀ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6 ಗಂಟೆಗೆ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಡಾ. ಕಮಲಾ ರಾಮನ್ ಅವರ ಮಂದಿರ, ಅಂಬೇಡ್ಕರ್ ರಸ್ತೆ, ಸಂಜೆ 6.15ರಿಂದ.

■ **ಶ್ರೀ ಮಹಾಜನ ಸಭಾ :** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ರಾಮ ಮಂದಿರ, ಕಾಂತರಾಜ ಅರಸು ರಸ್ತೆ, ಸಂಜೆ 6.15ರಿಂದ.

‘ಸಾಂಬಶಿವ ಪ್ರಹಸನ’ ನಾಟಕದಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವಹೇಳನ ಆರೋಪ

ಸ್ವಾಭಿಮಾನ ಹೋರಾಟ ಸಮಿತಿ ನೇತೃತ್ವದಲ್ಲಿ ಭಾರೀ ಪ್ರತಿಭಟನೆ

● ರಂಗಾಯಣವೀಗ ರಂಪಾಯಣವಾಗಿ ಪರಿವರ್ತನೆ; ಮಾಜಿ ಸಂಸದ ಆರ್.ಧ್ರುವನಾರಾಯಣ್ ಕಿಡಿನುಡಿ ● ರಂಗಾಯಣ ನಿರ್ದೇಶಕ ಸ್ಥಾನದಿಂದ ಅಡ್ಡಂಡ ಸಿ.ಕಾರ್ಯಪ್ಪ ವಜಾಗೊಳಿಸಲು ಒತ್ತಾಯ; ಬಿಜೆಪಿ-ಆರ್‌ಎಸ್‌ಎಸ್ ವಿರುದ್ಧವೂ ಆಕ್ರೋಶ

ಮೈಸೂರು,ಜ.10(ಪಿಎಂ)– ಅಡ್ಡಂಡ ಸಿ.ಕಾರ್ಯಪ್ಪರನ್ನು ಮೈಸೂರು ರಂಗಾಯಣದ ನಿರ್ದೇಶಕ ಸ್ಥಾನದಿಂದ ಕೂಡಲೇ ವಜಾಗೊಳಿಸಲು ಆಗ್ರಹಿಸಿ ಹಾಗೂ ಬಿಜೆಪಿ ಮತ್ತು ಆರ್‌ಎಸ್‌ಎಸ್ ಜನವಿರೋಧಿ ನೀತಿ ಅನುಸರಿಸುತ್ತಿವೆ ಎಂದು ಆರೋಪಿಸಿ ಸ್ವಾಭಿಮಾನ ಹೋರಾಟ ಸಮಿತಿ ನೇತೃತ್ವದಲ್ಲಿ ಮಂಗಳವಾರ ಭಾರೀ ಪ್ರತಿಭಟನೆ ನಡೆಸಲಾಯಿತು.

ಮೈಸೂರು ರಂಗಾಯಣದಲ್ಲಿ ಇತ್ತೀಚೆಗೆ ‘ಸಾಂಬಶಿವ ಪ್ರಹಸನ’ ನಾಟಕದ ಕಥೆಯನ್ನು ತಿರುಚಿ ಪ್ರದರ್ಶಿಸುವ ಮೂಲಕ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಅವಹೇಳನ ಮಾಡಲಾಗಿದೆ ಎಂದು ಆರೋಪಿಸಿ ವಿವಿಧ ಸಂಘಟನೆಗಳ ಆಶ್ರಯದಲ್ಲಿ ಪ್ರತಿಭಟನೆ ನಡೆಯಿತು.

ಮೈಸೂರು ವಿವಿ ಓವಲ್ ಮೈದಾನದ ಎದುರಿನ ರಮಾ ವಿಲಾಸ ರಸ್ತೆಯಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಆರ್‌ಎಸ್‌ಎಸ್, ಬಿಜೆಪಿ ಮತ್ತು ಅಡ್ಡಂಡ ಸಿ.ಕಾರ್ಯಪ್ಪ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾಕಾರರು ರಸ್ತೆಯಲ್ಲೇ ಜಮಾಯಿಸಿದ್ದ ಹಿನ್ನೆಲೆಯಲ್ಲಿ ಸದರಿ ರಸ್ತೆಯ ಕೌಟಿಲ್ಯ ವೃತ್ತದಿಂದ ಯುವರಾಜ ಕಾಲೇಜು ಜಂಕ್ಷನ್‌ವರೆಗೆ ಸಾರ್ವಜನಿಕ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಅರ್ಧ ತಾಸಿಗೂ ಹೆಚ್ಚು ಕಾಲ ಸದರಿ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ಬಳಿಕ ಓವಲ್ ಮೈದಾನದಲ್ಲಿ ಪ್ರತಿಭಟನಾ ಸಭೆ ನಡೆಸಿದರು.

ಈ ವೇಳೆ ಮಾತನಾಡಿದ ಮಾಜಿ ಸಂಸದರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮೈಸೂರು ರಂಗಾಯಣ ತನ್ನದೇ ಆದ ಕೊಡುಗೆ ನೀಡಿದೆ. ಕಳೆದ 20 ವರ್ಷಗಳಿಂದ ರಂಗಾಯಣದ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ರಂಗಾಯಣ ಜನಸಮುದಾಯಕ್ಕೆ ಅರಿವು ಮೂಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿತ್ತು. ಆದರೆ ಅಡ್ಡಂಡ ಕಾರ್ಯಪ್ಪ ರಂಗಾಯಣಕ್ಕೆ ನಿರ್ದೇಶಕರಾದ ಮೇಲೆ ಅವರು ರಂಗಾಯಣದ ಮೂಲಕ ಅಶಾಂತಿ ವಾತಾವರಣ ಸೃಷ್ಟಿಸುತ್ತಿದ್ದಾರೆ. ಹಾಗಾಗಿ ಇವರ ವರ್ತನೆಯಿಂದ ರಂಗಾಯಣವೀಗ ರಂಪಾಯಣವಾಗಿ ಪರಿವರ್ತನೆಯಾಗಿದೆ ಎಂದು ಟೀಕಾಪ್ರಹಾರ ನಡೆಸಿದರು.

ಹಿರಿಯ ಸಾಹಿತಿ ಡಾ.ಚಂದ್ರಶೇಖರ ಕಂಬಾರರ ‘ಸಾಂಬಶಿವ ಪ್ರಹಸನ’ ಅತ್ಯುತ್ತಮ ನಾಟಕ. ಆದರೆ ತಿರುಚಿ





ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರ ತೇಜೋವಧೆ ಮಾಡಲಾಗಿದೆ. ರಾಜ್ಯಸಭಾ ಸದಸ್ಯರೂ ಆದ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರು, ಕೋವಿಡ್ ಸಂದರ್ಭದಲ್ಲಿ ಅನ್ನಭಾಗ್ಯ ಯೋಜನೆಯಿಂದ ಆದ ಅನುಕೂಲದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ತಮ್ಮ 40 ವರ್ಷಗಳ ರಾಜಕಾರಣದಲ್ಲಿ ಸಿದ್ದರಾಮಯ್ಯನವರು ಎಂದೂ ಕಪ್ಪುಚುಕ್ಕೆ ಹೊಂದಿಲ್ಲ. ಐದು ವರ್ಷ ಜನಪರ ಆಡಳಿತ ನೀಡಿದರು. ಅಂತಹವರ ತೇಜೋವಧೆ ಮಾಡುವುದು ಕೀಳು ಮನಸ್ಥಿತಿ ತೋರಿಸುತ್ತದೆ. ಸಿದ್ದರಾಮಯ್ಯರನ್ನು ಅವಹೇಳನ ಮಾಡಲು ಒಂದು ಪುಸ್ತಕ ಬಿಡುಗಡೆಗೂ ಪ್ರಯತ್ನಿಸಿದ್ದಾರೆ ಎಂದು ಖಂಡಿಸಿದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಬಿಜೆಪಿಯವರಿಗೆ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರ ಜನಪ್ರಿಯತೆ ಸಹಿಸಲಾಗುತ್ತಿಲ್ಲ. ವಾರದಲ್ಲಿ ಸಿದ್ದರಾಮಯ್ಯರ ಜನಪರ ಕಾರ್ಯಕ್ರಮಗಳ ಕುರಿತ ಕೃತಿ ಹೊರ ತರಲಾಗುವುದು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 45 ಸ್ಥಾನ ಪಡೆಯಲು ಸಾಧ್ಯವಿಲ್ಲ ಎಂಬುದು ಆ ಪಕ್ಷದಿಂದಲೇ ನಡೆದ ಸಮೀಕ್ಷೆ ಹೇಳುತ್ತಿದೆ. ಇವರಿಗೆ ಯೋಗ್ಯತೆ ಇದ್ದರೆ ಯಾವ್ಯಾವ ಕ್ಷೇತ್ರಗಳ ಅಭಿವೃದ್ಧಿಗೆ ಎಷ್ಟು ಅನುದಾನ ಬಿಡುಗಡೆ ಮಾಡಿದ್ದಾರೆಂದು ಶ್ವೇತಪತ್ರ ಹೊರಡಿಸಲಿ ಎಂದು ಸವಾಲು ಹಾಕಿದರು.

ರಂಗಾಯಣದ ನಿವೃತ್ತ ಕಲಾವಿದ ಕೃಷ್ಣಪ್ರಸಾದ್ ಮಾತನಾಡಿ, ಬಿ.ವಿ.ಕಾರಂತರು ಸ್ಥಾಪಿಸಿದ ರಂಗಾಯಣವೆಂಬ ಜಾತ್ಯಾತೀತ ದೇವಸ್ಥಾನಕ್ಕೆ ಅಡ್ಡಂಡ ಕಾರ್ಯಪ್ಪರನ್ನು ಬಿಜೆಪಿಯವರು ಹಿಂಬಾಗಿಲಿನಿಂದ ಕಳುಹಿಸಿದ್ದಾರೆ. ಈ ದೇವಸ್ಥಾನಕ್ಕೆ ಅಡಿಗಲ್ಲು ಹಾಕಿದವರಲ್ಲಿ ಸಿದ್ದರಾಮಯ್ಯ ಒಬ್ಬರು. ರಂಗಾಯಣದ ನಿರ್ದೇಶಕರಾಗಿ ವೇತನ ಪಡೆದಿಲ್ಲ, ಸರ್ಕಾರಿ ಕಾರು ಬಳಸುತ್ತಿಲ್ಲವೆಂದು ಕಾರ್ಯಪ್ಪ ಸುಳ್ಳು ಹೇಳುತ್ತಿದ್ದಾರೆ. ಆದರೆ ವೇತನ ಪಡೆಯುವ ಜೊತೆಗೆ ಕಾರನ್ನು ಬಳಸುತ್ತಿದ್ದಾರೆ. ತಮ್ಮ ಶ್ರೀಮತಿಯವರನ್ನೂ ಕೂರಿಸಿಕೊಂಡು ಓಡಾಡುತ್ತಿದ್ದಾರೆ. ಮೂರು ವರ್ಷಗಳಿಂದ ರಂಗಾಯಣದಲ್ಲಿ ಅನ್ನ ತಿಂದಿದ್ದಕ್ಕಾಗಿ ರಂಗಾಯಣದ ಮುಂಬಾಗಿಲಲ್ಲಿ ನಿಂತು ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಕೈಮುಗಿಯಿರಿ. ನಿಮ್ಮ ಪಾಪ ಪರಿಹಾರ ಆಗುತ್ತದೆ ಎಂದು ಕಾರ್ಯಪ್ಪರ ವಿರುದ್ಧ ಕಿಡಿಕಾರಿದರು.

ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಮಾತನಾಡಿ, ‘ಸಾಂಬಶಿವ ಪ್ರಹಸನ’ ನಾಟಕದಲ್ಲಿ ಅವಹೇಳನ ಮಾಡಿದ್ದರ ಸಂಬಂಧ ಪೊಲೀಸ್ ಠಾಣೆಗೆ ದೂರು ನೀಡಿ 8 ದಿನಗಳೇ ಕಳೆದರೂ ಕ್ರಮ ಜರುಗಿಸಿಲ್ಲ. ಸದರಿ ನಾಟಕದ ಕೃತಿಕಾರರೇ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಒಬ್ಬ ಪಿಂಪ್ ಇಟ್ಟುಕೊಂಡು ಇವರು ಸರ್ಕಾರ ನಡೆಸುತ್ತಿದ್ದಾರೆ. ಅಡ್ಡಂಡ ಕಾರ್ಯಪ್ಪ ಕುಸ್ತಿ ಮಾಡುವುದಾದರೆ ಲಂಗೋಟಿ ಕಟ್ಟಿಕೊಂಡು ಅಖಾಡಕ್ಕೆ ಬರಬೇಕು. ಸೀರೆ ಉಟ್ಟುಕೊಂಡು ಮನೆಯೊಳಗೆ ಇರುವುದಲ್ಲ ಎಂದು ಏಕವಚನದಲ್ಲೇ ಟೀಕಿಸಿದರು. ಆರ್‌ಎಸ್‌ಎಸ್ ಮತ್ತು ಬಿಜೆಪಿ ರಂಗಾಯಣವನ್ನು ಕಾರ್ಯಪ್ಪರ ಮೂಲಕ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದೆ ಎಂದು ಇದೇ ವೇಳೆ ಸಮಿತಿ ಸಂಚಾಲಕ, ಹಿಂದುಳಿದ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಆರೋಪಿಸಿದರು. ವಿಧಾನಪರಿಷತ್ ಡಾ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಮುಖಂಡರಾದ ಕೆ.ಮರೀಗೌಡ, ಹೆಚ್.ಎ.ವೆಂಕಟೇಶ್, ಎಂ.ಶಿವಣ್ಣ, ಮಾಜಿ ಮೇಯರ್ ಅಯೂಬ್‌ಖಾನ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ಡಾ.ಬಿ.ಪುಷ್ಪ ಅಮರನಾಥ್, ಪತ್ರಕರ್ತ ಟಿ.ಗುರುರಾಜ್, ಮುಖಂಡರಾದ ನಾಗೇಶ್, ಪ್ರಕಾಶ್, ಲೋಕೇಶ್‌ಕುಮಾರ ಮಾದಾಪುರ, ಡಿ.ನಾಗಭೂಷಣ್, ನೆಲೆ ಹಿನ್ನೆಲೆ ಗೋಪಾಲಕೃಷ್ಣ ಸೇರಿದಂತೆ ಸಾವಿರಾರು ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಿಷೇಧಾಜ್ಞೆ ಹಿನ್ನೆಲೆಯಲ್ಲಿ ರಂಗಾಯಣ ಮುತ್ತಿಗೆಗೆ ಮುಂದಾಗದ ಪ್ರತಿಭಟನಾಕಾರರು

ಪ್ರತಿಭಟನಾ ಸಭೆ ಬಳಿಕ ಓವಲ್ ಮೈದಾನದಿಂದ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿ ಡಿಸಿ ಕಚೇರಿ ಆರ್ಚ್‌ಗೇಟ್‌ವರೆಗೆ (ಹುಣಸೂರು ರಸ್ತೆ ಜಂಕ್ಷನ್) ಭಾರೀ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಇಂದು ಬೆಳಗ್ಗೆ 6ರಿಂದ ಸಂಜೆ 6ರವರೆಗೆ ರಂಗಾಯಣ ಮತ್ತು ಕಲಾಮಂದಿರ ಸುತ್ತಮುತ್ತ 200 ಮೀ. ವ್ಯಾಪ್ತಿಯಲ್ಲಿ ಪೊಲೀಸ್ ಆಯುಕ್ತರು ನಿಷೇಧಾಜ್ಞೆ ಹೊರಡಿಸಿದ್ದ ಹಿನ್ನೆಲೆಯಲ್ಲಿ ಡಿಸಿ ಕಚೇರಿ ಆರ್ಚ್‌ಗೇಟ್‌ನಲ್ಲಿ ರಂಗಾಯಣದ ಮುತ್ತಿಗೆ ನಿರ್ಧಾರ ಕೈಬಿಟ್ಟು, ಪ್ರತಿಭಟನೆ ಅಂತ್ಯಗೊಳಿಸಲಾಯಿತು. ಆದಾಗ್ಯೂ ಇಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಜೊತೆಗೆ ಬ್ಯಾರಿಕೇಡ್‌ಗಳನ್ನು ಹಾಕಿ ಭಾರೀ ಭದ್ರತೆಗೆ ಪೊಲೀಸರು ಕ್ರಮ ವಹಿಸಿದ್ದರು.

ಮೈಸೂರು-ಬೆಂಗಳೂರು ಹೆದ್ದಾರಿಗೆ ಕಾವೇರಿ ಎಕ್ಸ್‌ಪ್ರೆಸ್ ವೇ ಹೆಸರೇ ಸೂಕ್ತ

ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈ.ಕಾ. ಪ್ರೇಮ್‌ಕುಮಾರ್ ಸಮರ್ಥನೆ

ಮೈಸೂರು, ಜ.10(ಎಂಟಿವೈ)– ಮೈಸೂರು-ಬೆಂಗಳೂರು ಹೆದ್ದಾರಿಗೆ ‘ಕಾವೇರಿ ಎಕ್ಸ್‌ಪ್ರೆಸ್ ವೇ’ ಹೆಸರು ಸೂಚಿಸಿರುವ ಸಂಸದ ಪ್ರತಾಪ್ ಸಿಂಹ ವಿರುದ್ಧ ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ ರಾಜಕೀಯ ಅಸೂಯೆಯಿಂದ ಹೇಳಿಕೆ ನೀಡಿದ್ದಾರೆ ಎಂದು ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈ.ಕಾ.ಪ್ರೇಮ್ ಕುಮಾರ್ ದೂರಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದಿಂದ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ಪಡೆದಿರುವ ರಘು ಕೌಟಿಲ್ಯ ಪಕ್ಷದ ವೇದಿಕೆಯಲ್ಲಿ ಚರ್ಚಿಸುವುದನ್ನು ಬಿಟ್ಟು ಮಾಧ್ಯಮದ ಮುಂದೆ ಬಂದಿರುವುದು ಸರಿಯಲ್ಲ. ಬಹುಶಃ ಅವರ ಗುರು ಎಂಎಲ್ಸಿ ಎ.ಹೆಚ್.ವಿಶ್ವನಾಥ್ ಧ್ವನಿ ಇವರ ಮೂಲಕ ಹೊರಹೊಮ್ಮಿದೆ. ಕಾಂಗ್ರೆಸ್‌ನಲ್ಲಿ ಅಧಿಕಾರದಲ್ಲಿದ್ದಾಗ ಕೌಟಿಲ್ಯ ರಘು ಅದೇ ಪಕ್ಷದಲ್ಲಿದ್ದರು. ಅವರ ಆಪ್ತರಾದ ವಿಶ್ವನಾಥ್ ಅವರು ಮಂತ್ರಿಯಾಗಿದ್ದರು. ಅಂದಿನಿಂದ ಕೆ.ಆರ್.ವೃತ್ತಕ್ಕೆ ಮಾತ್ರ ನಾಲ್ವಡಿ ಕೃಷ್ಣ



ರಾಜ ಒಡೆಯರ್ ಅವರ ಹೆಸರಿತ್ತು. ಬೇರೆ ಯಾವುದೇ ಪ್ರಮುಖ ಯೋಜನೆಗಳಿಗೆ ಒಡೆಯರ್ ಕುಟುಂಬದ ಹೆಸರನ್ನು ಇಟ್ಟಿರಲಿಲ್ಲ. ನಾಲ್ವಡಿ ಹೆಸರನ್ನು ಪ್ರಮುಖ ಯೋಜನೆಗಳಿಗೆ ನಾಮಕರಣ ಮಾಡಲು ರಘು ಏಕೆ ಪ್ರಯತ್ನ ಮಾಡಲಿಲ್ಲ. ಇವರು ಕಾಂಗ್ರೆಸ್‌ನಲ್ಲೇ ಇದ್ದರೂ ಬಾಯಿ ಬಿಟ್ಟಿರಲಿಲ್ಲ. ಈಗ ಬಿಜೆಪಿಯಿಂದ 2 ಬಾರಿ ವಿಧಾನಪರಿಷತ್ ಟಿಕೆಟ್ ಪಡೆದು, 2 ಬಾರಿ ನಿಗಮ ಮಂಡಳಿ ಅಧ್ಯಕ್ಷರಾಗಿ ಕಾಂಗ್ರೆಸ್ ವಕ್ತಾರರಂತೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

ಮೈಸೂರು-ಬೆಂಗಳೂರು ಹೆದ್ದಾರಿಗೆ ‘ಕಾವೇರಿ ಎಕ್ಸ್‌ಪ್ರೆಸ್ ವೇ’ ಹೆಸರು ಇಡುವುದು ಸೂಕ್ತ. ಭಾರತೀಯ ಸಂಸ್ಕೃತಿಯಲ್ಲಿ ನದಿಗಳಿಗೆ ಪೂಜ್ಯನೀಯ ಸ್ಥಾನ ನೀಡಲಾಗಿದೆ. ಈಗಾಗಲೇ ಅನೇಕ ನದಿಗಳ ಹೆಸರಿನಲ್ಲಿ ಹಲವೆಡೆ ಹೆದ್ದಾರಿಗಳಿವೆ. ಈ ಪದ್ಧತಿ ಕರ್ನಾಟಕದಲ್ಲೂ ಕಾವೇರಿ ಎಕ್ಸ್‌ಪ್ರೆಸ್ ವೇ ಮೂಲಕ ಮುಂದುವರೆಯಲಿದೆ. ಮಾಜಿ ಸಿಎಂ ಎಸ್.ಎಂ.ಕೃಷ್ಣ, ಸಂಸದ ವಿ.ಶ್ರೀನಿವಾಸ್‌ಪ್ರಸಾದ್ ಅವರು ನಾಲ್ವಡಿ ಹೆಸರನ್ನು ಸೂಚಿಸಿದ್ದಾರೆಯೇ ಹೊರತು ಕಾವೇರಿ ಹೆಸರನ್ನು ವಿರೋಧಿಸಿಲ್ಲ ಎಂದು ಸ್ಪಷ್ಟಪಡಿಸಿದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ರಾಕೇಶ್ ಭಟ್, ಜಯಸಿಂಹ, ಎಂ.ಎಸ್.ಗುರುರಾಜ್ ಶೆಟ್ಟಿ ಇದ್ದರು.

ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು,ಜ.10–2022–23ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಸ್ನಾತಕೋತ್ತರ ಹಾಗೂ ವೃತ್ತಿಪರ ಕೋರ್ಸುಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರ ಪ್ರವೇಶಾತಿ ಕಲ್ಪಿಸಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಜ.20ರವರೆಗೆ ವಿಸ್ತರಿಸಲಾಗಿದೆ. ಮಾಹಿತಿಗಾಗಿ https://bcwd.karnataka.gov.in ಹಾಗೂ ದೂ.ಸಂ. 0821–2342917 ಸಂಪರ್ಕಿಸಬಹುದು.





ನಿರ್ದೇಶಕ ಓಂ ಸಾಯಿ ಪ್ರಕಾಶ್‌ಗೆ ನಿರ್ದೇಶಕ ಸಾರ್ವಭೌಮ ಪ್ರಶಸ್ತಿ



ಮೈಸೂರು, ಜ.10(ಜಿಎ)– ಬಹು ಭಾಷಾ ನಿರ್ದೇಶಕ ಓಂ ಸಾಯಿ ಪ್ರಕಾಶ್ ಅವರಿಗೆ ‘ನಿರ್ದೇಶಕ ಸಾರ್ವಭೌಮ’ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಯಿತು.

ನಗರದ ಕಲಾಮಂದಿರದಲ್ಲಿ ರವಿಸಂತು ಬಳಗ ಮತ್ತು ರೋಟರಿ ಬೆಂಗಳೂರು ಹೈಗ್ರೌಂಡ್ಸ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಾಗೂ ಸಮಾಜ ಮುಖಿ ಕಾರ್ಯಗಳ ಮೂಲಕ ಗುರುತಿಸಿಕೊಂಡಿರುವ 82 ಮಂದಿಗೆ ‘ರಾಜ್ಯ ಸೇವಾ ರತ್ನ’ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ನಂತರ ಗಾಯಕರು ಕನ್ನಡ ಚಿತ್ರಗೀತೆಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ನಟಿ ಭವ್ಯ, ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷ ಡಾ.ಶಿವಕುಮಾರ್ ನಾಗರ ನಾವಿಲೆ, ಡಾ.ಅದಿತಿ, ಗಾಯಕರಾದ ರಾಮದಾಸ್, ರವಿ, ಮುಖಂಡರಾದ ಓಂಕಾರ್ ಆನಂದ್, ನವೀನ್, ಶ್ರೀಕಂಠ, ಮಾಸನ ಹೊಳ್ಳ ಹಾಗೂ ಬಳಗದ ರವಿ ಸಂತೋಷ್ ಉಪಸ್ಥಿತರಿದ್ದರು.

ಆರ್‌ಎಸ್‌ಎಸ್ ಕಾರ್ಯಕರ್ತನ ಹತ್ಯೆ

ಹಾಸನ, ಜ.10– ಮೀನು ಹಿಡಿಯಲು ಹೋಗಿದ್ದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತ ಸೇರಿದಂತೆ ಮೂವರ ಮೇಲೆ ಗುಂಡಿನ ದಾಳಿ ನಡೆಸಿದ್ದು, ಸ್ಥಳದಲ್ಲಿ ಓರ್ವ ಸಾವನ್ನಪ್ಪಿದ್ದು, ಇಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಸಕಲೇಶಪುರ ತಾಲೂಕಿನ ತಂಬಲಗೇರಿ ಗ್ರಾಮದಲ್ಲಿ ನಡೆದಿದೆ.

ಗುಂಡಿನ ದಾಳಿಯಿಂದ ಉದ್ವಿಗ್ನ ಸ್ಥಿತಿ ಹಿನ್ನೆಲೆಯಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿದೆ. ತಂಬಲಗೇರಿ ಗ್ರಾಮದ ನವೀನ್ (39) ಮೃತಪಟ್ಟವರು. ದಯಾನಂದ ಹಾಗೂ ಪದ್ಮನಾಭ ಗಂಭೀರವಾಗಿ ಗಾಯಗೊಂಡು ಹಾಸನದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೇಮಾವತಿ ನದಿ ದಡದಲ್ಲಿ ಮೀನು ಹಿಡಿಯಲು ಬೆಂಕಿ ಹಾಕಿಕೊಂಡು ಕುಳಿತಿದ್ದ ನಾಲ್ವರ ಮೇಲೆ ಅಪರಿಚಿತರು ಗುಂಡಿನ ದಾಳಿ ನಡೆಸಿದ್ದಾರೆ. ಸ್ಥಳಕ್ಕೆ ತೆರಳಿದ ಯಸಳೂರು ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಾಗಿದೆ.



ಸ್ವಚ್ಛ, ಸುಂದರ ಗ್ರಾಮಗಳ ನಿರ್ಮಾಣಕ್ಕೆ ಶ್ರಮಿಸಿ

● ಗ್ರಾಮೀಣಾಭಿವೃದ್ಧಿ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ಅಧಿಕಾರಿಗಳಿಗೆ ಸಲಹೆ
● ಗ್ರಾಮೀಣ ಜನತೆಯಲ್ಲಿ ನೀರು ನಿರ್ವಹಣೆ, ಸ್ವಚ್ಛತೆ ಅರಿವು ಮೂಡಿಸಲು ಸೂಚನೆ

ಮೈಸೂರು,ಜ.10(ಎಸ್‌ಬಿಡಿ)–ಸ್ವಚ್ಛ ಹಾಗೂ ಸುಂದರ ಗ್ರಾಮಗಳ ನಿರ್ಮಾಣಕ್ಕೆ ಅಧಿಕಾರಿಗಳು ಶ್ರಮಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ಕರೆ ನೀಡಿದರು.

ಮೈಸೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ನಡೆದ ಸ್ವಚ್ಛ ಭಾರತ ಮಿಷನ್(ಗ್ರಾಮೀಣ) ಮತ್ತು ಜಲ್ ಜೀವನ್ ಮಿಷನ್ ಕುರಿತ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮಗಳಲ್ಲಿ ಕೊಳಚೆ ನೀರನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ನಂತರ ಜಲ ಮೂಲಗಳಿಗೆ ಹರಿಸುವ ಬೂದು ನೀರು ನಿರ್ವಹಣೆ ಹಾಗೂ ಘನ ತ್ಯಾಜ್ಯ ನಿರ್ವಹಣೆಗೆ ಹೆಚ್ಚು ಆದ್ಯತೆ ನೀಡಬೇಕು. ಆ ಮೂಲಕ ಪ್ರತಿ ಹಳ್ಳಿಯನ್ನೂ ಸ್ವಚ್ಛ ಹಾಗೂ ಸುಂದರಗೊಳಿಸಬೇಕೆಂದು ಹೇಳಿದರು.

ಅರಿವು ಮೂಡಿಸಿ: ಸ್ವಚ್ಛ ಭಾರತ ಮಿಷನ್ ಯೋಜನೆಯ ಆರಂಭದ ದಿನಗಳಲ್ಲಿ ಗ್ರಾಮೀಣ ಭಾಗದ ಪ್ರತಿ ಮನೆಗೂ ಶೌಚಾಲಯ ನಿರ್ಮಿಸುವುದು ಪ್ರಮುಖ ಗುರಿಯಾಗಿತ್ತು. 2019ರ ವೇಳೆಗೆ ಶೌಚಾಲಯ ನಿರ್ಮಾಣ ಗುರಿ ಸಾಧಿಸಲಾಗಿದೆ. ಆದರೆ ಕೆಲವು ಪುರುಷರು ಇಂದಿಗೂ ಶೌಚಾಲಯ ಬಳಸದೆ ಬಹಿರ್ದೆಸೆಗೆ ಹೋಗುವವರಿದ್ದು, ಅಂತಹವರಿಗೆ ಅರಿವು ಮೂಡಿಸಬೇಕು. ಗ್ರಾಮದ ನೈರ್ಮಲ್ಯ ಹಾಗೂ ನಿವಾಸಿಗಳ ಆರೋಗ್ಯ ದೃಷ್ಟಿಯಿಂದ ಶೌಚಾಲಯ ಬಳಕೆ ಮಾಡಬೇಕೆಂದು ತಿಳಿಹೇಳಬೇಕು ಎಂದು ಹೇಳಿದರು.

ನೈರ್ಮಲ್ಯಕ್ಕೆ ಕ್ರಮ: ಪ್ರತಿಯೊಂದು ಹಳ್ಳಿಯೂ ನೈರ್ಮಲ್ಯದಿಂದ ಕೂಡಿರಬೇಕು. ಪಾತ್ರೆ, ಬಟ್ಟೆ ತೊಳೆದ ನೀರು ಇನ್ನಿತರ ದಿನಬಳಕೆಯ ಬೂದು ನೀರನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು. ಸೂಕ್ತ ರೀತಿಯಲ್ಲಿ ಚರಂಡಿ ಹಾಗೂ ಇಂಗುಗುಂಡಿಗಳನ್ನು ನಿರ್ಮಿಸಬೇಕು. ಅದರಲ್ಲಿ ತ್ಯಾಜ್ಯ ನೀರು ಇಂಗುವಂತೆ ವ್ಯವಸ್ಥೆ ಮಾಡಬೇಕು. ಗ್ರಾಮ ಸಭೆಗಳಲ್ಲೂ ಸ್ವಚ್ಛತೆಯನ್ನೇ ಮೊದಲ ಅಜೆಂಡಾವಾಗಿ ಪರಿಗಣಿಸಬೇಕು. ತ್ಯಾಜ್ಯ ಸಂಗ್ರಹಣೆ, ವಿಂಗಡಣೆ, ವಿಲೇವಾರಿ, ಸ್ವಚ್ಛತಾ ವಾಹನಗಳ ಅಗತ್ಯತೆ ಬಗ್ಗೆ ಗ್ರಾಪಂ ಸದಸ್ಯರೊಂದಿಗೆ ಚರ್ಚೆ ನಡೆಸಬೇಕು. ಸಮಸ್ಯೆಗಳಿದ್ದರೆ ತಕ್ಷಣ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಸ್ವಚ್ಛ ಶನಿವಾರ ಕಾರ್ಯಕ್ರಮವನ್ನು ಮತ್ತಷ್ಟು ಪರಿಣಾಮಕಾರಿಗೊಳಿಸಿ ಜನರಲ್ಲಿ ಜಾಗೃತಿ ಮೂಡಿಸಬೇಕು. ಒಟ್ಟಾರೆ ನೈರ್ಮಲ್ಯಕ್ಕೆ ಎಲ್ಲಾ ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು.

ತ್ಯಾಜ್ಯ ಘಟಕ ನಿರ್ಮಿಸಿ: ಪ್ರಸಕ್ತ ಆರ್ಥಿಕ ವರ್ಷದೊಳಗೆ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ ಪೂರ್ಣಗೊಳ್ಳಬೇಕು. ಅಲ್ಲಿಯವರೆಗೆ ಕಸ ಸಂಗ್ರಹಣೆ ಹಾಗೂ ವಿಂಗಡಣೆಯನ್ನು ನಿಲ್ಲಿಸಿದರೆ ತಾತ್ಕಾಲಿಕವಾಗಿ ಶೆಡ್ ನಿರ್ಮಿಸಿಕೊಂಡು ನಿರ್ವಹಿಸಬೇಕು. ತ್ಯಾಜ್ಯ ವಿಲೇವಾರಿ ಸೂಕ್ತ ರೀತಿಯಲ್ಲಿ ನಿರಂತರವಾಗಿ ಮುಂದುವರೆಸಬೇಕು. ಈ ಕಾರ್ಯದ ಮೇಲುಸ್ತುವಾರಿಯನ್ನು ಅಧಿಕಾರಿಗಳು ನಿರ್ಲಕ್ಷಿಸಬಾರದು ಎಂದರು.

ವ್ಯವಸ್ಥಿತವಾಗಿ ನೀರು ಕೊಡಿ: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಆಯುಕ್ತ ಗಂಗಾಧರ ಸ್ವಾಮಿ ಮಾತನಾಡಿ, ಮಹತ್ವದ ಜಲ ಜೀವನ್ ಮಿಷನ್ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಈ ಯೋಜನೆಯಡಿ ಪ್ರತಿ ಮನೆಗೂ ನಲ್ಲಿ ಅಳವಡಿಸಿ, ನೀರು ಕಲ್ಪಿಸಬೇಕು. ಅನಿಯಮಿತವಾಗಿ ನೀರು ಸರಬರಾಜು ಮಾಡಿದರೆ ಜನರಿಗೆ ತೊಂದರೆಯಾಗುತ್ತದೆ. ಹಾಗಾಗಿ ವ್ಯವಸ್ಥೆ ರೂಪಿಸಿಕೊಂಡು ಅದರಂತೆ ನೀರು ಬಿಡುವ ಸಮಯವನ್ನು ಗ್ರಾಮಸ್ಥರಿಗೆ ತಿಳಿಸಿ, ಅದರಂತೆಯೇ ನಿರ್ವಹಣೆ ಮಾಡಬೇಕೆಂದು ಹೇಳಿದರು. ಸಭೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಉಪ ಕಾರ್ಯದರ್ಶಿ ಮಹೇಶ್, ಮೈಸೂರು ವಿಭಾಗದ ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು, ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ, ಉಡುಪಿ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸ್ವಚ್ಛ ಭಾರತ್ ಮಿಷನ್ ನೋಡಲ್ ಅಧಿಕಾರಿಗಳು, ಜಿಲ್ಲಾ ಸಮಾಲೋಚಕರು, ಕಾರ್ಯಪಾಲಕ ಇಂಜಿನಿಯರ್‌ಗಳು, ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯ ಸಮಾಲೋಚಕರು, ಜಲ ಜೀವನ್ ಮಿಷನ್‌ನ ಸಮಾಲೋಚಕರು ಮತ್ತಿತರ ಅಧಿಕಾರಿಗಳು ಭಾಗವಹಿಸಿದ್ದರು.

ಅಶುಚಿತ್ವವೇ ಆರೋಗ್ಯಕ್ಕೆ ಹಾನಿ



ಅಶುಚಿತ್ವವೇ ಕಾಯಿಲೆಗಳಿಗೆ ಕಾರಣ. ಮನೆ ಸುತ್ತಮುತ್ತ ಮಾತ್ರವಲ್ಲದೆ ಇಡೀ ಗ್ರಾಮದ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಅನೈರ್ಮಲ್ಯ ಹೆಚ್ಚಾದರೆ ಸಹಜವಾಗಿ ಕಾಯಿಲೆಗಳು ಹರಡುತ್ತವೆ. ಅದರಲ್ಲೂ ಮಕ್ಕಳು ಹಾಗೂ ವೃದ್ಧರ ಆರೋಗ್ಯದ ಮೇಲೆ ಬಹುಬೇಗ ದುಷ್ಪರಿಣಾಮ ಉಂಟಾಗುತ್ತದೆ. ಇದರಿಂದ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳಿಗೂ ತೊಡಕಾಗುತ್ತದೆ. ಆದ್ದರಿಂದ ಸಾರ್ವಜನಿಕರೂ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು.

–ಎಲ್.ಕೆ.ಅತೀಕ್

ನಕ್ಕರೆ ಅದೇ ಸ್ವರ್ಗ

ಅಪ್ಪ : (ಬೆಡ್ ಲ್ಯಾಂಪ್ ತಗೊಂಡು ಬಾ ಎಂದು ಹೇಳಿ ಹತ್ತು ನಿಮಿಷದ ನಂತರ ಬರೀಗೈಲಿ ಬಂದ ಮಗನಿಗೆ) ಯಾಕೋ ಹಾಗೇ ಬಂದೆ? ಇರಲಿಲ್ಲವಾ?

ಮಗ : ಅಪ್ಪ, ಲ್ಯಾಂಪ್ ಸಿಂಗಲ್ ಬೆಡ್ಡಿಗೋ ಡಬಲ್ ಬೆಡ್ಡಿಗೋ ಹೇಳ್ಲಿಲ್ಲಾ!

ಮೈಸೂರು ಮಿತ್ರ

ಬುಧವಾರ, 11 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........


ಒಮ್ಮೆಲೆ ದುಡುಕಬಾರದು. ಆವೇಶ ಆಪತ್ತುಗಳ ಮೂಲ –ಭಾರವಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಬಲಿಯಂತ ಊಟವಿಲ್ಲ, ಕಂಬಳಿಯಂತ ಹೊದಕಿಲ್ಲ.

ನಿಮ್ಮ ಪತ್ರಗಳು

ಮೈಸೂರು - ಬೆಂಗಳೂರು ದಶಪಥ ಹೆದ್ದಾರಿಗೆ 'ಕಾವೇರಿ ಎಕ್ಸ್‌ಪ್ರೆಸ್‌ವೇ' ಹೆಸರೇ ಸೂಕ್ತ

ಮಾನ್ಯರೆ,



ಮೈಸೂರು–ಬೆಂಗಳೂರು ಹೆದ್ದಾರಿಗೆ ಹೆಸರಿಡುವ ವಿಚಾರಕ್ಕೆ ಸಂಬಂಧಿಸಿದ ಗೊಂದಲದ ಬಗ್ಗೆ ನಿಮ್ಮ ಪತ್ರಿಕೆಯಲ್ಲಿ ಓದಿದ್ದೇನೆ. ಇದು, ಈ ವರ್ಷದ ಫೆಬ್ರವರಿ ಅಂತ್ಯದ ವೇಳೆಗೆ ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರಿಂದ ಉದ್ಘಾಟನೆಗೊಳ್ಳುವ ಸಾಧ್ಯತೆಯಿದೆಯಂತೆ.

ಕೆಲವು ರಾಜಕೀಯ ಗಣ್ಯ ವ್ಯಕ್ತಿಗಳು ಈ ಎಕ್ಸ್‌ಪ್ರೆಸ್‌ವೇಗೆ ಕೃಷ್ಣರಾಜ ಒಡೆಯರ್-IV ಅವರ ಹೆಸರಿಡಬೇಕೆಂದು ಬಯಸಿ, ಸಂಬಂಧಿಸಿದ ಕೇಂದ್ರ ಮಂತ್ರಿ ನಿತಿನ್ ಗಡ್ಕರಿಯವರಿಗೆ ಪತ್ರ ಬರೆದಿದ್ದರಂತೆ. ಆದರೆ, ಇದರ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಪ್ರಾಥಮಿಕವಾಗಿ ಜವಾಬ್ದಾರರಾಗಿರುವ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಅವರು ಈ ಎಕ್ಸ್‌ಪ್ರೆಸ್‌ವೇಗೆ ಕಾವೇರಿ ನದಿ ಹೆಸರನ್ನು ಸೂಚಿಸುವ 'ಕಾವೇರಿ ಎಕ್ಸ್‌ಪ್ರೆಸ್‌ವೇ' ಎಂದು ಹೆಸರಿಡಲು ಒಲವು ತೋರಿದ್ದಾರೆ.



ಇತ್ತೀಚಿನ ದಿನಗಳಲ್ಲಿ, ರಾಜಕಾರಣಿಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಮಹಾರಾಜ ಕೃಷ್ಣರಾಜ ಒಡೆಯರ್–IV ಅವರ ಕೊಡುಗೆಯ ಬಗ್ಗೆ ಹೆಚ್ಚಿನ ಗೌರವ–ಅಭಿಮಾನವನ್ನು ತೋರ್ಪಡಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಬ್ರಿಟಿಷರ ಅವಧಿಯಲ್ಲಿ ಭಾರತದ ಇತರ ರಾಜ್ಯಗಳಿಗೆ ಹೋಲಿಸಿದರೆ ಅವರು ಈ ರಾಜ್ಯಕ್ಕೆ ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಸುಧಾರಣೆ, ಆರೋಗ್ಯ ಮತ್ತು ಶಿಕ್ಷಣಕ್ಕೆ ನೀಡಿದ ಕೊಡುಗೆ ಅಪಾರ. ಮಹಾತ್ಮ ಗಾಂಧಿಯವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು 'ರಾಜರ್ಷಿ' ಎಂದು ಕರೆದಿದ್ದರು. ಅವರ ಆಡಳಿತವನ್ನು 'ರಾಮರಾಜ್ಯ' ಎಂದು ಹೊಗಳಿದ್ದರು. ಆದರೂ ಹಿಂದಿನ ಸರ್ಕಾರ ಅವರನ್ನು ಬದಿಗೊತ್ತಿ ಬೇರೊಬ್ಬರನ್ನು ಬಿಂಬಿಸುತ್ತಿತ್ತು. ಆದರೆ ಈಗ ಬಿಜೆಪಿ ಸರಕಾರದಲ್ಲಿ, ತಡವಾಗಿಯಾದರೂ, ಅವರಿಗೆ ಮನ್ನಣೆ ಸಿಗುತ್ತಿರುವುದು ಸಂತಸದ ವಿಷಯ.

ಆದಾಗ್ಯೂ, ಸಾಕಷ್ಟು ಸಂಸ್ಥೆಗಳು, ಸಾರ್ವಜನಿಕ ಕಟ್ಟಡಗಳು, ಅಭಯಾರಣ್ಯ, ಜನಹಿತ ಯೋಜನೆಗಳು ಮತ್ತು ಮೂಲಸೌಕರ್ಯ ಸೌಲಭ್ಯಗಳಿಗೆ ಒಬ್ಬನೇ ಒಬ್ಬ ವ್ಯಕ್ತಿಯ ಹೆಸರಿಡುವುದು ಮಾತ್ರ ಸರಿಯಲ್ಲ. ಅದೊಂದು ವಿಪರ್ಯಾಸವೇ ಸರಿ. ನಾವು ಆ ಮಹಾನ್ ವ್ಯಕ್ತಿಯ ಬಗ್ಗೆ ಭಾವುಕರಾಗಿ ಹೆಚ್ಚು ಗೌರವದಿಂದ ಕಾಣುವುದು ವೈಯಕ್ತಿಕ ವಿಷಯ. ಆದರೆ, ಈ ರೀತಿಯ ಹೆಸರಿಡುವಾಗ ನಾವು ಹೆಚ್ಚು ಯೋಚನೆ ಮಾಡಬೇಕಾಗುತ್ತದೆ. ಅತಿಯಾದ ಭಾವುಕತೆಯಿಂದ ಆತ್ಮಗೌರವವನ್ನು ಬದಿಗೊತ್ತಿ ವರ್ತಿಸಬಾರದು. ನೆಹರು–ಗಾಂಧಿ ಕುಟುಂಬದವರಿಗೆ ಗೌರವ ಸೂಚಿಸುವ ಭರದಲ್ಲಿ, ಅವರನ್ನು ಮೆಚ್ಚಿಸುವ ಸಲುವಾಗಿ ಅವರ ಹೆಸರನ್ನು ಅಸಂಖ್ಯಾತ ಸಂಸ್ಥೆಗಳು, ಸಾರ್ವಜನಿಕ ಕಟ್ಟಡಗಳು, ಯೋಜನೆಗಳು ಹಾಗೂ ಇತರವುಗಳಿಗೆ ಇಟ್ಟಂತೆ ಇನ್ನು ಮುಂದೆ ಆಗಬಾರದು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವಿಚಾರದಲ್ಲಿ ಕೂಡ ಹೀಗಾಗಬಾರದು. ಈಗಾಗಲೇ ಕೃಷ್ಣರಾಜಸಾಗರ ಸೇರಿದಂತೆ ಮಹಾರಾಜರ ಹೆಸರನ್ನು ಹೊಂದಿರುವ ಅನೇಕ ಮೇರು ಹೆಗ್ಗುರುತುಗಳಿವೆ. ಉದಾಹರಣೆಗೆ, ನಗರದ ಕೆ.ಆರ್. ಸರ್ಕಲ್, ಕೆ.ಆರ್. ಆಸ್ಪತ್ರೆ, ಮೈಸೂರು ಜಿಲ್ಲೆಯ ಕೆ.ಆರ್.ನಗರ, ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ಪಟ್ಟಣಗಳು... ಅದೆಲ್ಲಾ ಇರಲಿ ಇತ್ತೀಚಿನ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ರೈಲಿನ ಹೆಸರನ್ನು 'ಒಡೆಯರ್ ಎಕ್ಸ್‌ಪ್ರೆಸ್' ಎಂದು ಬದಲಾಯಿಸಲು ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಅವರು ಸಂಪೂರ್ಣ ಹೊಣೆಗಾರರಾಗಿದ್ದರು ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಒಡೆಯರ್ ಕುಟುಂಬದ, ನಾಲ್ಕು ಬಾರಿ ಸಂಸದರಾಗಿದ್ದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕೂಡ ಇದನ್ನು ಮಾಡಲು ಸಾಧ್ಯವಾಗಲಿಲ್ಲ. ಆದರೆ ಯುವ ಸಂಸದ ಪ್ರತಾಪ್‌ಸಿಂಹ ಅವರು ಅದನ್ನು ಮಾಡಿದ್ದಾರೆ. ಸ್ವಾತಂತ್ರ್ಯ ಸಿಕ್ಕ ಇಷ್ಟು ವರ್ಷಗಳಲ್ಲಿ ಒಡೆಯರ್ ಅವರನ್ನು ಮೂಲೆಗುಂಪು ಮಾಡಿ, ಈ ರೀತಿ ಗೌರವಿಸುವ ಬಗ್ಗೆ ಯಾರೂ ಯೋಚಿಸಿರಲಿಲ್ಲ. ಅದೇ ರೀತಿ, ಇನ್ನು ಕೆಲವೇ ವರ್ಷಗಳಲ್ಲಿ ಈಗಿನ ಮಂಡಕಳ್ಳಿ ವಿಮಾನ ನಿಲ್ದಾಣ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗಲಿದ್ದು, ಅದಕ್ಕೆ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ಈಗಾಗಲೇ ಇಡಲಾಗಿದೆ. ಇದು ಕೂಡ ಪ್ರತಾಪ್ ಸಿಂಹ ಅವರ ಪ್ರಯತ್ನದ ಫಲ. ಈಗಿರಬೇಕಾದರೆ ಕೆಲವು ರಾಜಕೀಯ ಗಣ್ಯ ವ್ಯಕ್ತಿಗಳು, ಪ್ರತಾಪ್ ಸಿಂಹ ಅವರ ಈ ಒಂದು ಸಲಹೆಯನ್ನು ಉದಾರ ಮನೋಭಾವದಿಂದ ತೆಗೆದುಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ.


ಅಂದ ಹಾಗೆ, ಉತ್ತರ ಪ್ರದೇಶದಲ್ಲಿ ಅವರ ಎರಡು ಹೆದ್ದಾರಿಗಳಿಗೆ 'ನಮಾಮಿ ಗಂಗಾ' ಹಾಗೂ 'ಯಮುನಾ' ಎಂದು ನದಿಗಳ ಹೆಸರು ಇಟ್ಟಿದ್ದಾರೆ. ಮಧ್ಯ ಪ್ರದೇಶದಲ್ಲಿ ನರ್ಮದಾ ನದಿಯ ಹೆಸರು ಇಟ್ಟಿದ್ದಾರೆ. ಆದುದರಿಂದ ನಮ್ಮ ಗಮನದಲ್ಲಿರಲಿ, ತಮಿಳುನಾಡಿನಲ್ಲೂ ಕಾವೇರಿ ನದಿ ಹರಿಯುವುದರಿಂದ ಮುಂದೊಂದು ದಿನ ಅದರ ಹೆದ್ದಾರಿಗೆ ಕಾವೇರಿ ಹೆಸರು ನಮಗಿಂತ ಮುಂಚೆಯೇ ಇಟ್ಟು ನಮ್ಮನ್ನು ಮುಜುಗರಕ್ಕೆ ಸಿಕ್ಕಿಸಬಹುದಲ್ಲವೆ?

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇಗೆ 'ಕಾವೇರಿ ಎಕ್ಸ್‌ಪ್ರೆಸ್‌ವೇ' ಎಂದು ಹೆಸರಿಡುವ ಪ್ರಸ್ತಾವನೆಯನ್ನು, ಅದಕ್ಕೆ ಕಾರಣವನ್ನು ಕೊಟ್ಟು ಜನವರಿ 9ರಂದು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಸಂಸದ ಪ್ರತಾಪ್‌ಸಿಂಹ ಅವರು ಸವಿವರವಾಗಿ ತಿಳಿಸಿದ್ದಾರೆ. ನಾನು ಅವರ ಸಲಹೆಯನ್ನು ಮನಸಾರೆ ಒಪ್ಪುತ್ತೇನೆ. ಎಲ್ಲಾ ತರ್ಕಗಳನ್ನು ಕೂಲಂಕಷವಾಗಿ ಪರಿಗಣಿಸಿ 'ಕಾವೇರಿ ಎಕ್ಸ್‌ಪ್ರೆಸ್‌ವೇ' ಹೆಸರೇ ಸರಿ ಎಂಬುದು ನನ್ನ ಅಭಿಪ್ರಾಯ.

–ಕೆ.ಬಿ. ಗಣಪತಿ,
ಹಿರಿಯ ಪತ್ರಕರ್ತರು

ಮೈಸೂರು, 9.1.2023

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಾಹಿತ್ಯ ಸಂಹಿತೆ

ಈಚಿನ ಪೀಳಿಗೆಯಲ್ಲಿ ಅನೇಕ ಪ್ರತಿಭಾಶಾಲಿಗಳು ಕನ್ನಡ ಸಾಹಿತ್ಯ ವಲಯದಲ್ಲಿ ತಮ್ಮನ್ನು ಗುರುತಿಸಿಕೊಂಡು ಸ್ತುತ್ಯ ಕಾರ್ಯವನ್ನು ಮಾಡುತ್ತಿದ್ದಾರೆ. ಅಂತಹ ಯುವಕರಲ್ಲಿ ಒಬ್ಬರಾದ ಶ್ರೀ ಬಿ.ಎನ್. ಶಶಿಕಿರಣ್ ಅವರು ಕನ್ನಡ, ಸಂಸ್ಕೃತ, ಇಂಗ್ಲಿಷ್ ಎಂಬ ಭಾಷಾತ್ರಯದಲ್ಲೂ ಪರಿಣತರಾಗಿ ತಾಯ್ನುಡಿಯ ಸೇವೆಯಲ್ಲಿ, ಜ್ಞಾನಪ್ರಸಾರದಲ್ಲಿ, ಹೊಸ ಚಿಂತನೆಯಲ್ಲಿ ಅಗ್ರಣೀ ಆಗಿದ್ದಾರೆ. ಡಿ.ವಿ.ಜಿ. ಅವರ ಇಂಗ್ಲಿಷ್ ಬರಹಗಳನ್ನು ಸಂಗ್ರಹಿಸಿ ಅವುಗಳನ್ನೆಲ್ಲ ಹಲವು ಸಂಪುಟಗಳಲ್ಲಿ ಬೆಳಕಿಗೆ ತಂದಿರುವ ಮಹಾಕಾರ್ಯದಲ್ಲಿ ಶಶಿಕಿರಣ್ ಅವರದು ಪ್ರಧಾನ ಪಾತ್ರ. ಪ್ರಸಿದ್ಧ ವಿದ್ವಾಂಸರೂ ತಲೆದೂಗಿ ಮೆಚ್ಚುಗೆಯನ್ನು ಸೂಚಿಸುವಂತೆ ಮಾಡಬಲ್ಲ ವಾಕ್‌ಪ್ರೌಢಿಮೆ ಅವರದು. ತುಂಬಾ ಸುಂದರವಾಗಿ, ಲಲಿತವಾಗಿ, ಮಧುರವಾಗಿ ಅವರು ಸಂಸ್ಕೃತದಲ್ಲೂ ಮಾತನಾಡುತ್ತಾರೆ, ಬರೆಯುತ್ತಾರೆ. ಕನ್ನಡದಲ್ಲಿ ಅವರು ಲೇಖನಗಳನ್ನು ಬರೆದಾಗ ಅಲ್ಲಿ ಕಂಡು ಬರುವ ಪ್ರತಿಭಾಧನರು (ಪು.18), ಶಾಸ್ತ್ರಪೂರ್ಣತೆ (ಪು.31), ನಿರ್ಮಾಣಸ್ತರ (ಪು.41) ಮುಂತಾದ ಪದಗಳು ಅವರ ನೂತನ ಪದಶಕ್ತಿಸ್ಪೃತ್ವಕ್ಕೆ ಸಾಕ್ಷಿಯಾಗಿವೆ. ಅವರ ಹಲವು ಲೇಖನಗಳ ಸಂಗ್ರಹವೇ ಸಾಹಿತ್ಯ ಸಂಹಿತೆ ಎಂಬ ಪುಸ್ತಕವಾಗಿ ಬೆಳಕನ್ನು ಕಂಡಿದೆ. (ಪ್ರೇಕ್ಷಾ ಪ್ರತಿಷ್ಠಾನ, ಬೆಂಗಳೂರು, 2022). ಈ ಪುಸ್ತಕದಲ್ಲಿ ಶಶಿಕಿರಣ್ ಅವರ ಹನ್ನೊಂದು ಮೌಲ್ಯಯುತ ಲೇಖನಗಳಿವೆ. ಜೊತೆಗೆ ಶತಾವಧಾನಿ ಡಾ. ಆರ್. ಗಣೇಶರ ನಲ್ನುಡಿ ಎಂಬ ಪ್ರಸ್ತಾವನೆಯಿಂದಲೂ ಪುಸ್ತಕವು ಭೂಷಿತವಾಗಿದೆ.

ಮೊದಲನೆಯ ಲೇಖನ 'ದೇವಭಾಷೆ –ದೇಶಭಾಷೆಗಳ ಪೂರಕತೆ' ಪಂಪನಿಂದ ಕುವೆಂಪುವರೆಗಿನ ಯಾವ ಶ್ರೇಷ್ಠ ಕನ್ನಡ ಗ್ರಂಥಕಾರನ ಕೃತಿಯನ್ನು ಗಮನಿಸಿದರೂ ಕನ್ನಡ–ಸಂಸ್ಕೃತಗಳ ಹದವಾದ ಮಿಶ್ರಣ ಕಾವ್ಯಕ್ಕೆ ಸದಾ ಶೋಭದಾಯಕವಾಗಿರುವುದನ್ನು ಕಾಣುತ್ತೇವೆ. ಈ ಅಂಶವನ್ನು ನಿರೂಪಿಸುವಾಗ ಶಶಿಕಿರಣರು ಕನ್ನಡದ ಹಲವರು ಲೇಖಕರ ಗ್ರಂಥಗಳ ಉದಾಹರಣೆಗಳನ್ನು ನೀಡಿದ್ದಾರೆ. ಕನ್ನಡದಲ್ಲಿ ಹುಟ್ಟಿರುವ ಹೊಸ ಸಾಹಿತ್ಯ ಕೃತಿಗಳು ಮಾತ್ರವಲ್ಲ, ಇಲ್ಲಿ ಆಗಿರುವ ಅನುವಾದಗಳು, ರಚಿತವಾದ ಸಾಹಿತ್ಯೇತಿಹಾಸಗಳು, ಉತ್ತಮ ವಿಮರ್ಶೆಗಳು – ಇವೆಲ್ಲವನ್ನೂ ಬಿ.ಎನ್. ಶಶಿಕಿರಣ್ ಇಲ್ಲಿ ವಿಚಾರ ನಿಕಷ ವಿಷಯವನ್ನಾಗಿ ಮಾಡಿದ್ದಾರೆ. ಎಲ್ಲರೂ ನಿಷ್ಪಕ್ಷಪಾತ ದೃಷ್ಟಿಯಿಂದ ಈ ಲೇಖಕನ ಲೇಖನಗಳನ್ನು ಓದಲೇ ಬೇಕು ಎಂದು ಹೇಳಲು ನನಗೆ ಸಂಕೋಚವಿಲ್ಲ.

ಧ್ವನಿಯ ಗೆಲುವು ಎಂಬುದು ಈ ಪುಸ್ತಕದ ಎರಡನೆಯ ಲೇಖನ ಧ್ವನಿ ಎಂದರೆ ಸದ್ದು, ಕಂಠದಿಂದ ಹೊರಡುವ ಶಬ್ದ ಇತ್ಯಾದಿ ಅರ್ಥಗಳನ್ನಿಲ್ಲಿ ಗ್ರಹಿಸಬಾರದು. ಕಾವ್ಯದಲ್ಲಿ ವಾಚ್ಯಾರ್ಥಕ್ಕಿಂತ ಭಿನ್ನವಾದ, ಪರಮ ರಮಣೀಯವಾದ, ಸಹೃದಯ ಗ್ರಾಹ್ಯವಾದ ಅರ್ಥವು ಧ್ವನಿ. ಇದನ್ನು ಗೋಚರವಾಗುವಂತೆ ಮಾಡುವ ಶಬ್ದದ ವೃತ್ತಿಯನ್ನೂ, ಇಂತಹ ಗಮ್ಯಾರ್ಥವನ್ನು ಹೊಂದಿರುವ ಕಾವ್ಯವನ್ನೂ ಧ್ವನಿಯೆಂದು ಕರೆಯುತ್ತೇವೆ. ಈ ತತ್ತ್ವವನ್ನು 'ಧ್ವನ್ಯಾಲೋಕ' ಎಂಬ ಗ್ರಂಥದಿಂದ ಲೋಕದ ಗಮನಕ್ಕೆ ತಂದವನು ಆನಂದವರ್ಧನ. ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿ ಕಾಶ್ಮೀರದಲ್ಲಿದ್ದವನು ಈ ಕಾವ್ಯ ವಿಮರ್ಶಕ. ಇವನ ಗ್ರಂಥದ ಸಾರವತ್ತಾದ ವಿಮರ್ಶೆಯನ್ನು ಶಶಿಕಿರಣ್ ಅವರ 'ಧ್ವನಿಯ ಗೆಲವು' ಎಂಬ ಲೇಖನದಲ್ಲಿ ಕಾಣಬಹುದು. ಕನ್ನಡವನ್ನೋ ಸಂಸ್ಕೃತವನ್ನೋ ಉನ್ನತ ವಿದ್ಯಾಭ್ಯಾಸಕ್ಕಾಗಿ ಆರಿಸಿಕೊಂಡಿರುವವರು ಮತ್ತು ಭಾರತೀಯ ಅಲಂಕಾರ ಶಾಸ್ತ್ರದಲ್ಲಿ ಆಸಕ್ತಿಯನ್ನಿಟ್ಟು ಕೊಂಡವರು ಅವಶ್ಯವಾಗಿ ಓದಬೇಕಾದ ಲೇಖನವಿದು.

ಮೂರನೆಯ ಲೇಖನ **'ಕಾವ್ಯ ಪುರುಷೋತ್ಪತ್ತಿ–ಕಾವ್ಯದ ಹಿಂದಿನ ಕಥೆ'**. ಇದು ರಾಜಶೇಖರನ ಕಾವ್ಯಮೀಮಾಂಸಾ ಎಂಬ ಕೃತಿರತ್ನದ ವಿಮರ್ಶಾತ್ಮಕ ಪರಿಚಯವೆನ್ನಬಹುದು. ಆ ಗ್ರಂಥವು ಕಾವ್ಯ ಪುರುಷನ ಜನ್ಮಾದಿಗಳನ್ನು ಆಕರ್ಷಕವಾಗಿ ನಿರೂಪಿಸಿದೆ. ಈ ಲೇಖನದಲ್ಲಿ ಶಶಿಕಿರಣರು ಹೇಳಿರುವ ಒಂದು ವಾಕ್ಯ "ಲಕ್ಷ್ಯವನ್ನು ಗಮನಿಸಿಯೇ ಲಕ್ಷಣ ಹುಟ್ಟತಕ್ಕದ್ದು; ಪ್ರಯೋಗವನ್ನನುಸರಿಸಿಯೇ ಶಾಸ್ತ್ರ ಉದಯಿಸುವುದು" (ಪು. 56) ಗಮನಾರ್ಹವಾಗಿದೆ.

ಸಂಸ್ಕೃತ ಸಾಧಕ ಶ್ರೀ ಮೇಣ ರಾಮಕೃಷ್ಣಭಟ್ಟರು ಎಂಬ ನಾಲ್ಕನೆಯ ಲೇಖನವು ಇಪ್ಪತ್ತನೆಯ ಶತಮಾನದಲ್ಲಿ (1907–1990) ಜೀವಿಸಿದ್ದ ಸಂಸ್ಕೃತ ಪ್ರಾಧ್ಯಾಪಕರ ಬದುಕು ಬರಹಗಳನ್ನು ಪರಿಚಯಿಸುತ್ತದೆ. ಸಂಸ್ಕೃತ ಕವಿಗಳೂ ಆಗಿದ್ದ ಇವರ ಕಾವ್ಯದ ಮಾಧುರ್ಯವನ್ನು ಸವಿಯಲು ಆಗುವಂತೆ ಶಶಿಕಿರಣರು ಕೆಲವು ಪದ್ಯಗಳನ್ನು ಉದಾಹರಿಸಿದ್ದಾರೆ. ರಮಣ ಮಹರ್ಷಿಗಳ **ಉಪದೇಶಸಾರ** ಎಂಬ ಕೃತಿಯನ್ನು ಮೇಣ ರಾಮಕೃಷ್ಣ ಭಟ್ಟರು ಕನ್ನಡಕ್ಕೆ ಅನುವಾದಿಸಿದ್ದಾರೆ ಎಂಬ ಮಾಹಿತಿಯನ್ನೂ ಕೊಟ್ಟಿದ್ದಾರೆ. ಉಭಯ ಭಾಷಾಭಿಜ್ಞರಾಗಿದ್ದ ಇಂತಹ ಉದ್ದಾಮ ವಿದ್ವಾಂಸರನ್ನು ನಾವು ನೋಡಲಿಲ್ಲ ಎಂಬ ಕೊರತೆ ನಮ್ಮನ್ನು ಕಾಡುತ್ತದೆ.

ಭಾರತೀವಿವೇಕ ಎಂಬ ಲೇಖನವು ಡಾ. ಶ್ರೀಧರ ಭಾಸ್ಕರ ವರ್ಣೇಕರ್ ಎಂಬ ಸಂಸ್ಕೃತ ಪ್ರಾಧ್ಯಾಪಕರ ಸಿದ್ಧಿ ಸಾಧನೆಗಳನ್ನು ವಿವರಿಸುತ್ತದೆ. 1976ರಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ಸಂಸ್ಕೃತ ಸಮ್ಮೇಳನದಲ್ಲಿ ನಾನು ಪ್ರೊ. ವರ್ಣೇಕರ್ ಅವರನ್ನು ಕಂಡಿದ್ದೆ. ಅವರ ಸಂಸ್ಕೃತ ಭಾಷಣವೂ ಗೀತಗಾನವೂ ಸ್ಮರಣೀಯ. ಸಂಸ್ಕೃತ ಸಾಹಿತ್ಯಕ್ಕೆ ಅವರ ಕೊಡುಗೆ ಅಪಾರ. ಪ್ರಸ್ತುತ ಲೇಖನ ಅದನ್ನು ವಿಶದಪಡಿಸುತ್ತದೆ. ವರ್ಣೇಕರ್ ಅವರ ಭಾರತ ದೇಶಭಕ್ತಿಯೂ ಸ್ತುತ್ಯ. ಸ್ವರ್ಗದಲ್ಲಿ ನಾನು ಬೃಹಸ್ಪತಿಯಾಗಿರುವುದೂ ಬೇಡ, ಭಾರತದಲ್ಲಿ ಮತ್ತೆ ಮೀನಾಗಿಯೋ ದುಂಬಿಯಾಗಿಯೋ ಹುಟ್ಟಿದರೆ ಸಾಕು ಎಂದು ಅವರು ಪ್ರಾರ್ಥಿಸಿದರೆಂಬುದನ್ನು ಶಶಿಕಿರಣ್ ಓದುಗರ ಗಮನಕ್ಕೆ ತಂದಿದ್ದಾರೆ.

ಸಂಸ್ಕೃತದ ವಿಡಂಬನಕಾವ್ಯ ಕಂಟಕಾಂಜಲಿ. ಇದನ್ನು ಶಶಿಕಿರಣ್ **ವಿಡಂಬನೆಯ ಆಡುಂಬೊಲ** ಎಂದು ಕರೆದಿದ್ದಾರೆ. ಕೆ.ಎಸ್. ಅರ್ಜುನ ವಾಡ್ಕರ್ ಕಂಟಕಾಂಜಲಿಯ ಕರ್ತೃ. ಇವರು ಸಂಸ್ಕೃತ ಕಮೀಷನ್‌ನ ಸದಸ್ಯರೂ ಆಗಿದ್ದರು. ಕಂಟಕಾಂಜಲಿಯ ಹಲವು ಪದ್ಯಗಳನ್ನು ಉದಾಹರಿಸಿ ಅವುಗಳ ಕನ್ನಡಾನುವಾದವನ್ನೂ ಕೊಟ್ಟು ಶಶಿಕಿರಣ್ ವಿಡಂಬನೆಯ ಸ್ವಾರಸ್ಯಪೂರ್ಣ ಔತಣವನ್ನು ನೀಡಿದ್ದಾರೆ.

"ಮತ್ತೆ ರಾಮನ ಕಥೆ: ಅನುವಾದದ ಅನ್ವಾಖ್ಯಾನ" ಎಂಬ ಲೇಖನವು ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯರು ಮಾಡಿರುವ ಉತ್ತರರಾಮ ಚರಿತ ನಾಟಕದ ಕನ್ನಡಾನುವಾದದ ಸೊಗಸಾದ ಪರಿಚಯವನ್ನು ನೀಡುತ್ತದೆ. ಭವಭೂತಿಯಂತಹ ಮಹಾಕವಿಯ ನಾಟಕವನ್ನು ಅನುವಾದಿಸಿದವರು ಅದೇ ಎತ್ತರದ ಬನ್ನಂಜೆ. ಉಭಯ ಭಾಷೆಗಳ ಪ್ರಭು. ಭವಭೂತಿ ಕನ್ನಡಿಗನಾಗಿ ಮತ್ತೆ ಹುಟ್ಟಿ ಬಂದರೂ ಇದಕ್ಕಿಂತ ಚೆನ್ನಾದ ಅನುವಾದವನ್ನು ಮಾಡಲಾರ ಎಂದು ಹೇಳಿದರೆ ತಪ್ಪಲ್ಲ. ಇದನ್ನೆಲ್ಲ ಸೋದಾಹರಣವಾಗಿ ಶಶಿಕಿರಣ್ ವಿಶದಪಡಿಸಿದ್ದಾರೆ.

ಡಿ.ವಿ.ಜಿ. ಅವರ ಭಾಷಾಶಿಲ್ಪ ಎಂಬ ದೀರ್ಘಲೇಖನದ ಒಂದೊಂದು ಪಂಕ್ತಿಯೂ ಪುನಃಪಠನಾರ್ಹವಾಗಿದೆ. ಶಶಿಕಿರಣ್ ಹೇಳುತ್ತಾರೆ. ಡಿ.ವಿ.ಜಿ. ಅವರದು ಮಹಾಕಾವ್ಯೋಪಮವಾದ ಜೀವನ. ಹುಣಸೆಹಣ್ಣನ್ನೂ, ಹಿಮಾಲಯ ಪರ್ವತವನ್ನೂ ಸಮಾನ ವಿವೇಚನ ವೃತ್ತಿಯಿಂದ ವೀಕ್ಷಿಸುತ್ತಿದ್ದ ದಾರ್ಶನಿಕ ಡಿ.ವಿ.ಜಿ. ಅವರ ಬಗೆಗೆ ಸಾವಿರಾರು ಲೇಖನಗಳಿರಬಹುದು. ಆದರೂ ಶಶಿಕಿರಣರ ಲೇಖನ ಹೊಸಬೆಳಕನ್ನು ಚೆಲ್ಲುತ್ತದೆ. ಡಿ.ವಿ.ಜಿ. ಅವರಲ್ಲಿ ಇವರದು ಅಂಧಾಭಿಮಾನವಲ್ಲ. ಮಹಾತ್ಮ್ಯ ಜ್ಞಾನ ಪೂರ್ವಕವಾದ ಅಭಿಮಾನ.

ನೆಲೆ : ಸಾವಿನ ಹಿನ್ನೆಲೆಯಲ್ಲಿ ಜೀವನ ಮೀಮಾಂಸೆ ಎಂಬ ಲೇಖನದಲ್ಲಿ ಶಶಿಕಿರಣ್ ಡಾ.ಎಸ್.ಎಲ್. ಭೈರಪ್ಪನವರ 'ನೆಲೆ' ಎಂಬ ಕಾದಂಬರಿಯ ವಿಮರ್ಶೆಯನ್ನು ನೀಡಿದ್ದಾರೆ (ನಾನು ಈ ಕಾದಂಬರಿಯನ್ನು ಓದಿಲ್ಲ). ಇದರ ಬಗೆಗೆ ಶಶಿಕಿರಣ್ ಹೇಳುತ್ತಾರೆ–

"**ನೆಲೆ** ಭೈರಪ್ಪನವರ ವಿನೂತನ ಸೃಷ್ಟಿಗಳಲ್ಲೊಂದು. ಕೇವಲ ನೂರ ಎಂಬತ್ತೇಳು ಪುಟಗಳಿರುವ ಕಾದಂಬರಿಯಲ್ಲಿ ಕಥಾ ತಂತು ಇಲ್ಲವೇ ಇಲ್ಲವೆಂಬಷ್ಟು ತೆಳುವಾಗಿದ್ದರೂ ಕೃತಿಯ ಒಟ್ಟಂದದ ಪರಿಣಾಮಕ್ಕೆ ಯಾವ ಕೊರತೆಯೂ ಆಗಿಲ್ಲ. ಪಾತ್ರಗಳಿರುವುದು ಕೆಲವೇ: ಆದರೆ ಪ್ರತಿಯೊಂದೂ ಪ್ರಸ್ಫುಟ. ಘಟನೆಗಳು ಮುಖ್ಯವಾಗಿ ನಡೆಯುವ ದೇಶಕಾಲಪರಿಧಿಯೂ ಮಿತವಾದುದೆ. ಹಾಸನದ ಆಸುಪಾಸಿನಲ್ಲಿ, ಹತ್ತು–ಹನ್ನೆರಡು ದಿನಗಳ ಅವಧಿಯಲ್ಲಿ ಸನ್ನಿವೇಶಗಳು ತೆರೆದುಕೊಳ್ಳುತ್ತೇವೆ. ಆದರೆ ಅವು ನಮ್ಮೊಳಗೆ ಬಿಚ್ಚಿಡುವ ಭಾವ ಪ್ರಪಂಚದ ಹರಹು ಅಸೀಮ, ಅನಂತ" (ಪು. 136).

ಲೇಖನದ ಕೊನೆಯಲ್ಲಿ ಲೇಖಕರು ಬರೆದಿರುವ ಕೆಲವು ಮಾತುಗಳು ಅಲಂಕಾರ ಶಾಸ್ತ್ರವನ್ನು ಓದಿದವರಿಗೆ ಮಾತ್ರ ಅರ್ಥವಾಗುವಂತಿವೆ. "ಇಲ್ಲಿರುವುದೆಲ್ಲ ಕವಿನಬದ್ಧ ಪ್ರೌಢೋಕ್ತಿಯ ವಿಜೃಂಭಣೆ. ಇದರ ಅಂಗಿರಸವು ನಿರ್ವೇದವನ್ನು ಸ್ಥಾಯಿಯಾಗಿ ಉಳ್ಳ ಶಾಂತ. ಸಾವನ್ನು ಕುರಿತಾದ ಕೃತಿಯಲ್ಲಿದು ಅಪೇಕ್ಷಿತವೇ ಸರಿ. ಧರ್ಮ ಸೂಕ್ಷ್ಮಗಳನ್ನೂ, ಆರ್ಥಿಕ ಏರುಪೇರುಗಳನ್ನೂ ಕಾಮದ ಧುರ್ನಿವಾರತೆಯನ್ನೂ ಸಮಗ್ರವಾಗಿಯಲ್ಲದಿದ್ದರೂ ಅತ್ಯಂತ ಸಮರ್ಥವಾಗಿ ವಿವರಿಸುವ ಈ ಕೃತಿ ತ್ರಿವರ್ಗ– ಅಪವರ್ಗಗಳ ನಡುವಣ ಸೇತುವೆಯಂತಿದೆ" (ಪು. 150).

ಭೈರಪ್ಪನವರೂ ವ್ಯಾಸಮಹರ್ಷಿಯಂತೆ ಸಮಗ್ರ ಪ್ರಪಂಚವನ್ನು ನೋಡಿ 'ದ್ವೈಪಾಯನ'ರಾಗಿದ್ದಾರೆ. ಅವರ ಆಳ–ಎತ್ತರಗಳನ್ನು ಅರಿಯುವುದು ಅಳೆಯುವುದೂ ಅಸಾಧ್ಯ ಈ ಪುಸ್ತಕದ ಇನ್ನೊಂದು ಲೇಖನ – **"ಸ್ಥಿರತೆಯ ಸಮುನ್ನತಿ–ಭೈರಪ್ಪನವರ ಕಾದಂಬರಿಗಳಲ್ಲಿ ಬೆಟ್ಟಗುಡ್ಡ ಪರ್ವತಗಳು"**. ಇದರಲ್ಲಿ ಬೆಟ್ಟಗಳ ಬಗೆಗೆ ಭೈರಪ್ಪನವರಿಗಿದ್ದ ಅಪರಿಮಿತ ಪ್ರೀತಿ, ಕುತೂಹಲ, ಗೌರವ ಇತ್ಯಾದಿಗಳ ವಿವೇಚನೆ ಇದೆ. ಚಾಮುಂಡಿ ಬೆಟ್ಟ ಪ್ರವಾಸಿ ತಾಣವೂ ವ್ಯಾಪಾರ ಕೇಂದ್ರವೂ ಆಗುತ್ತಿರುವುದು ಭೈರಪ್ಪನವರಿಗೆ ಇಷ್ಟವಾಗದ ಸಂಗತಿ. ಇದೊಂದು ಬೆಟ್ಟವಲ್ಲ. ಯಾವುದೇ ಬೆಟ್ಟವಾದರೂ ಪರ್ವತವಾದರೂ ವಾಣಿಜ್ಯಕ್ಕಾಗಿ ನಿರ್ಮಿತವಾಗಿಲ್ಲವೆಂಬುದು ಅವರ ಖಚಿತಾಭಿಪ್ರಾಯ.

ಭೈರಪ್ಪನವರ ಸಮಗ್ರ ಸಾಹಿತ್ಯವನ್ನು ಓದಿಕೊಂಡಿರುವ ಶ್ರೀಯುತ ಶಶಿಕಿರಣ್ ಒಂದೊಂದು ಕೃತಿಯಲ್ಲಿ ಅವು ಹೇಗೆ ವರ್ಣಿತವಾಗಿವೆ ಎಂದು ವಿವರಿಸಿದ್ದಾರೆ. ಭೂಮಾನುಭೂತಿಗೆ ಪರ್ವತಗಳು ನೇರ ಆಹ್ವಾನವನ್ನು ನೀಡುತ್ತವೆ. ಇದರ ಹಿನ್ನೆಲೆಯನ್ನು ಶಶಿಕಿರಣ್ ವಿವರಿಸುವುದು ಹೀಗೆ–

"ಅವರು ಬೆಟ್ಟಗಳನ್ನು ಹತ್ತುವುದು ಯಾವುದೇ ದಾಖಲೆಯನ್ನು ಮಾಡುವುದಕ್ಕಾಗಲಿ, ಮುರಿಯುವುದಕ್ಕಾಗಲಿ ಅಲ್ಲ; ಎತ್ತರವನ್ನು ಕಾಣಲು ತಮ್ಮ ಸಮಕಾಲಿಕ ಸಾಹಿತ್ಯ ಕ್ಷೇತ್ರದಲ್ಲಿ ಕ್ಷುದ್ರತೆಯೇ ಕುಣಿದು ಕುಪ್ಪಳಿಸುತ್ತಿದ್ದಾಗ ದೊಡ್ಡದನ್ನು ಕಾಣಲು ಭೈರಪ್ಪನವರು ಪ್ರಕೃತಿಯನ್ನೇ ಆಶ್ರಯಿಸಬೇಕಾಯಿತು ಎಂದು ತೋರುತ್ತದೆ. ಅವರ ಈ ನಿಟ್ಟಿನ ಅನುಭವವೇ ಅವರ ಕಾದಂಬರಿಗಳ ಎತ್ತರ–ಬಿತ್ತರಗಳಿಗೆ ಮೂಲ. (ಪು. 152)–

ದಾರ್ಶನಿಕ ದೀಪ್ತಿ ಎಂಬುದು ಸಾಹಿತ್ಯ ಸಂಹಿತೆಯಲ್ಲಿರುವ ಕೊನೆಯ ಲೇಖನ. ನಾಡೋಜ ಎಸ್.ಆರ್. ರಾಮಸ್ವಾಮಿಗಳು ಸಂಸ್ಕೃತಿ ಪ್ರಿಯರೆಲ್ಲರಿಗೂ ಪರಿಚಿತರೇ. ಡಿ.ವಿ.ಜಿ. ಅವರ ಮಾರ್ಗದಲ್ಲಿ ನಡೆದು ಗೋಖಲೆ ಸಾರ್ವಜನಿಕ ಸಂಸ್ಥೆಯನ್ನು ಮುನ್ನಡೆಸಿದವರೂ ಅವರೇ. ಅವರು ಸೃಷ್ಟಿಸಿದ ಸಾಹಿತ್ಯ ಅಸೀಮ, ಅನುಪಮ. ರಾಷ್ಟ್ರೋತ್ಥಾನ ಸಾಹಿತ್ಯದ ಬೆನ್ನೆಲುಬು ರಾಮಸ್ವಾಮಿಯವರೇ. ಅವರ ವಾಙ್ಮಯವನ್ನು ಕುರಿತ ಲೇಖನವೇ ದಾರ್ಶನಿಕ ದೀಪ್ತಿ. ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ ಅದ್ವೈತ ಸಿದ್ಧಾಂತ ಪ್ರತಿಪಾದನೆಯ ಬಗೆಗೆ ರಾಮಸ್ವಾಮಿಗಳ ಅಚಲ ಶ್ರದ್ಧೆಯನ್ನೂ ಇಲ್ಲಿ ಹೇಳಲಾಗಿದೆ.

ಹೀಗೆ ಹನ್ನೊಂದು ಲೇಖನಗಳನ್ನೊಳಗೊಂಡಿರುವ **ಸಾಹಿತ್ಯ ಸಂಹಿತೆ** ಜಿಜ್ಞಾಸುಗಳಿಗೆ ಬಹೋಪಯೋಗಿ. ಈ ಲೇಖನಗಳನ್ನು ಓದುವಾಗ ಬಿ.ಎನ್. ಶಶಿಕಿರಣ್ ಅವರ ವಿಶಾಲವಾದ ಓದು ನಮ್ಮಲ್ಲಿ ಅಚ್ಚರಿಯನ್ನು ಮೂಡಿಸುತ್ತದೆ. "ಆಶ್ಚರ್ಯವತ್ ಪಶ್ಯತಿ ಕಶ್ಚಿದೇನಮ್" ಓದಿದ ಅಷ್ಟೊಂದು ವಿಷಯಗಳನ್ನು ನಿಷ್ಪಕ್ಷಪಾತವಾಗಿ, ನಿರ್ಮತ್ಸರವಾಗಿ ತೂಕ ಹಾಕಿ ಗ್ರಾಹ್ಯಾಂಶಗಳನ್ನು ಲೋಕಕ್ಕೆ ಮುಟ್ಟಿಸುವ, ಅವುಗಳಲ್ಲಿ ಕುತೂಹಲವನ್ನು ಹುಟ್ಟಿಸುವ ಕಲೆಯೂ ಅವರಿಗೆ ಕರತಲಾಮಲಕ. ಅವರಿಂದ ಕನ್ನಡ ಲೋಕಕ್ಕೆ ಅಪಾರ ಸೇವೆ ಸಲ್ಲುವುದೆಂಬ ನಂಬಿಕೆ ನಮ್ಮದು. ತಾಯಿ ಚಾಮುಂಡೇಶ್ವರಿ ಅವರನ್ನು ಅನುಗ್ರಹಿಸಲಿ ಎಂದು ಹಾರೈಸುತ್ತೇವೆ.

ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಂದ

ಡಾ.ಎ.ವಿ.ನರಸಿಂಹಮೂರ್ತಿ ಅವರ ದಕ್ಷಿಣ ಭಾರತದ ನಾಣ್ಯಗಳು ಪುಸ್ತಕ ಬಿಡುಗಡೆ

ಮೈಸೂರು,ಜ.10(ಆರ್‌ಕೆ)–ಚೆನ್ನೈನ ಸೌತ್ ಇಂಡಿಯನ್ ನುಮಿಸ್ಮಾಟಿಕ್ ಸೊಸೈಟಿ (SINS) ವತಿಯಿಂದ ಮೈಸೂರಿನ ಅರಮನೆ ಮಂಡಳಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಸರಳ ಕಾರ್ಯಕ್ರಮದಲ್ಲಿ ಸೊಸೈಟಿ ಪ್ರಧಾನ ಕಾರ್ಯದರ್ಶಿಗಳಾಗಿರುವ ಪುರಾತತ್ವ ತಜ್ಞ ಡಾ.ಎ.ವಿ.ನರಸಿಂಹಮೂರ್ತಿ ಅವರು ಬರೆದಿರುವ 'Studies in South Indian Coins - Vol. XXX 2021' ಪುಸ್ತಕವನ್ನು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಲೋಕಾರ್ಪಣೆ ಮಾಡಿದರು.



ಮೈಸೂರಿನ ಅರಮನೆ ಮಂಡಳಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಡಾ. ಎವಿಎನ್ ಅವರ 'Studies in South Indian Coins Vol. - XXX 2021' ಪುಸ್ತಕವನ್ನು ಲೋಕಾರ್ಪಣೆ ಮಾಡಿದರು. (ಎಡದಿಂದ) SINS ಅಧ್ಯಕ್ಷೆ ರಾಜಲಕ್ಷ್ಮಿ ಕೃಷ್ಣಮೂರ್ತಿ, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ನ್ಯೂರೋ ಸರ್ಜನ್ ಡಾ.ಡಿ.ರಾಜರೆಡ್ಡಿ, ಕೃತಿಯ ಲೇಖಕ ಡಾ. ಎ.ವಿ.ನರಸಿಂಹಮೂರ್ತಿ, ನಿವೃತ್ತ ಪುರಾತತ್ವ ನಿರ್ದೇಶಕ ಡಾ. ಟಿ.ಸತ್ಯಮೂರ್ತಿ, ಕಸಪಾ ಮಾಜಿ ಜಿಲ್ಲಾಧ್ಯಕ್ಷ ಚಂದ್ರಶೇಖರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ನಂತರ ಮಾತನಾಡಿದ ಅವರು, ಭಾರತದ ಇತಿಹಾಸ ಪರಂಪರೆಯನ್ನು ತಿಳಿಸಿಕೊಡುವ ಈ ಪುಸ್ತಕವು, ದಕ್ಷಿಣ ಭಾರತದ ರಾಜರುಗಳ ಆಳ್ವಿಕೆ ಬಗ್ಗೆ ಸಂಶೋಧನೆ ಮಾಡಲು ಸಾಕಷ್ಟು ಮಾಹಿತಿಯನ್ನು ಒದಗಿಸಿದೆ ಎಂದರು. ನಾಣ್ಯಗಳನ್ನು ಸಂಗ್ರಹಿಸಿ, ಅವುಗಳ ಇತಿಹಾಸದ ಬಗ್ಗೆ ಸಂಶೋಧನೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಆದರೆ, ಡಾ. ಎ.ವಿ.ನರಸಿಂಹಮೂರ್ತಿ ಅವರು ಪ್ರತೀ ವರ್ಷ ಪುರಾತನ ಕಾಲದ ನಾಣ್ಯಗಳ ಬಗ್ಗೆ ಸುದೀರ್ಘ ಅಧ್ಯಯನ ಮಾಡಿ ಪುಸ್ತಕ ರೂಪದಲ್ಲಿ ಹೊರ ತರುತ್ತಿರುವುದು ಇತಿಹಾಸದ ಬಗ್ಗೆ ಸಂಶೋಧನೆ ಮಾಡುವವರಿಗೆ ಉಪಯುಕ್ತ ಮಾಹಿತಿಯಾಗಲಿದೆ ಎಂದು ಯದುವೀರ್ ಒಡೆಯರ್ ನುಡಿದರು.

ಸೌತ್ ಇಂಡಿಯನ್ ನುಮಿಸ್ಮಾಟಿಕ್ ಸೊಸೈಟಿ ಪ್ರಧಾನ ಕಾರ್ಯದರ್ಶಿಯೂ ಆದ ಕೃತಿಯ ಲೇಖಕ ಡಾ.ಎ.ವಿ. ನರಸಿಂಹಮೂರ್ತಿ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಸೌತ್ ಇಂಡಿಯನ್ ನುಮಿಸ್ಮಾಟಿಕ್ ಸೊಸೈಟಿ ಅಧ್ಯಕ್ಷೆ ರಾಜಲಕ್ಷ್ಮಿ ಕೃಷ್ಣಮೂರ್ತಿ, ಹೈದರಾಬಾದಿನ ನ್ಯೂರೋ ಸರ್ಜನ್ ಡಾ.ಡಿ.ರಾಜರೆಡ್ಡಿ, ಕೇರಳ ಸರ್ಕಾರದ ನಿವೃತ್ತ ಪುರಾತತ್ವ ನಿರ್ದೇಶಕ ಡಾ.ಟಿ.ಸತ್ಯಮೂರ್ತಿ ಹಾಗೂ ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಭಾಗವಹಿಸಿದ್ದರು.

ಆನ್‌ಲೈನ್‌ನಲ್ಲಿ ವಂಚನೆಗೀಡಾದರೆ ತಕ್ಷಣ ಸಹಾಯವಾಣಿ 1930ಕ್ಕೆ ಕರೆ ಮಾಡಿ

ನಾಗರಿಕರಿಗೆ ಪೊಲೀಸರ ಸಲಹೆ

ಮೈಸೂರು, ಜ.10(ಎಸ್‌ಬಿಡಿ)– ಸೈಬರ್ ವಂಚನೆಗೆ ಒಳಗಾದಲ್ಲಿ ತಕ್ಷಣ 1930 ಸಹಾಯವಾಣಿಗೆ ಕರೆ ಮಾಡಿ ದೂರು ದಾಖಲಿಸುವಂತೆ ಜಿಲ್ಲಾ ಪೊಲೀಸರು ಮನವಿ ಮಾಡಿದ್ದಾರೆ.

ಇತ್ತೀಚೆಗೆ ಸೈಬರ್ ವಂಚನೆ ಹೆಚ್ಚಾಗುತ್ತಿದ್ದು, ವಿದ್ಯಾವಂತರೂ ಲಕ್ಷಾಂತರ ರೂ. ಹಣ ಕಳೆದುಕೊಳ್ಳುತ್ತಿದ್ದಾರೆ. ಸಾಮಾಜಿಕ ಜಾಲತಾಣದ ಮೂಲಕವೂ ವಂಚಿಸುವ ಪ್ರಕರಣಗಳು ವರದಿಯಾಗುತ್ತಿವೆ. ಬ್ಯಾಂಕ್ ಅಧಿಕಾರಿ ಇನ್ನಿತರ ಸೇವಾ ಪ್ರತಿನಿಧಿ ಸೋಗಿನಲ್ಲಿ ಮೊಬೈಲ್‌ಗೆ ಬರುವ ಓಟಿಪಿ ಪಡೆದು ಬ್ಯಾಂಕ್ ಖಾತೆಯಲ್ಲಿರುವ ಹಣ ದೋಚುತ್ತಿದ್ದಾರೆ. ವಾರಾಂತ್ಯ ಅಥವಾ ವಿಶೇಷ ರಜಾ ದಿನಗಳನ್ನು ಗಮನಿಸಿಯೇ ದುಷ್ಕೃತ್ಯವೆಸಗುತ್ತಾರೆ. ಕಾರಣ ಖಾತೆಯಿಂದ ಹಣ ಕಡಿತವಾದ ಸಂದೇಶ ಬಂದರೂ ಬ್ಯಾಂಕ್ ರಜೆ ಇರುವುದರಿಂದ ವಿಚಾರಿಸಲು ವಿಳಂಬವಾಗುತ್ತದೆ ಎನ್ನುವುದು ಖದೀಮರ ಯೋಚನೆಯಾಗಿದೆ. ಹಾಗಾಗಿ ಆನ್‌ಲೈನ್ ಮೂಲಕ ವಂಚನೆಗೊಳಗಾದರೆ ಕೂಡಲೇ 1930 ಸಹಾಯವಾಣಿಗೆ ಕರೆ ಮಾಡಿ ಅಥವಾ **https://cybercrime.gov.in** ವೆಬ್‌ಪೋರ್ಟಲ್ ಮೂಲಕ ದೂರು ದಾಖಲಿಸುವಂತೆ ಕೋರಿದ್ದಾರೆ.

ನ್ಯಾ.ಸದಾಶಿವ ಆಯೋಗದ ವರದಿ ಜಾರಿಗೆ ಒತ್ತಾಯಿಸಿ ಪ್ರತಿಭಟನೆ

ಮೈಸೂರು,ಜ.10(ಪಿಎಂ)– ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ನ್ಯಾ.ಸದಾಶಿವ ಆಯೋಗವು 7 ವರ್ಷಗಳ ಕಾಲ ಪರಿಶಿಷ್ಟ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ, 2012ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ವರದಿ ಸಲ್ಲಿಸಿ 10 ವರ್ಷಗಳೇ ಕಳೆದಿವೆ. ಈ ಅವಧಿಯಲ್ಲಿ ಆಡಳಿತ ನಡೆಸಿದ ಯಾವುದೇ ಸರ್ಕಾರಗಳು ವರದಿ ಅಂಗೀಕರಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಶ್ರೇಯೋಭಿವೃದ್ಧಿಗೆ ಇರುವ ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಗಳಡಿಯಲ್ಲಿ ಮೀಸಲಿಟ್ಟ ಹಣವನ್ನು ಅನ್ಯ ಉದ್ದೇಶಕ್ಕೆ ಸರ್ಕಾರ ಬಳಸಬಾರದು ಎಂದು ಒತ್ತಾಯಿಸಿದರು.

ಇಂದು ವಿವೇಕಾನಂದರ ಜಯಂತಿ



ಮೈಸೂರು,ಜ.10–ಮೈಸೂರಿನ ಭೂಮಿಗಿರಿ ಪ್ರಕಾಶನ ಮತ್ತು ಪಡುವಾರಹಳ್ಳಿ ಸ್ನೇಹ ಬಳಗ ಸಹಯೋಗದಲ್ಲಿ ನಾಳೆ (ಜ.11) ಬೆಳಗ್ಗೆ 10.30ಕ್ಕೆ ಪಡುವಾರ ಹಳ್ಳಿಯ ಪೆಟ್ರೋಲ್ ಬಂಕ್ ಬಳಿ ಶ್ರೀ ವಿವೇಕಾನಂದರ 160ನೇ ಜನ್ಮದಿನ ಆಚರಿಸಲಾಗುತ್ತಿದೆ. ಶಾಸಕ ಎಲ್. ನಾಗೇಂದ್ರ, ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಕೆ.ಉಮಾಶಂಕರ್, ಕಾರ್ಪೊರೇಟರ್ ನಮ್ರತಾ ರಮೇಶ್, ಬಿಜೆಪಿ ಮುಖಂಡ ಎಲ್.ಚೌಡಪ್ಪ, ಪಡುವಾರಹಳ್ಳಿ ಟ್ರಸ್ಟ್ ಕಾರ್ಯದರ್ಶಿ ಎಂ.ಭೈರಪ್ಪ, ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ ಭಾಗವಹಿಸಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಬುಧವಾರ 11 ಜನವರಿ 2023

ನೇಕಾರರ ಬ್ಯಾಂಕ್ ಖಾತೆಗೆ ಐದು ಸಾವಿರ ರೂ. ಜಮಾ

ಬೆಂಗಳೂರು, ಜ.10– ಆರ್ಥಿಕ ಹಿನ್ನಡೆಯಿಂದ ಸಂಕಷ್ಟದಲ್ಲಿರುವ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಚಟುವಟಿಕೆಗಳಲ್ಲಿ ತೊಡಗಿರುವ ನೇಕಾರರು ಹಾಗೂ ಕಾರ್ಮಿಕರಿಗೆ 2022–23 ನೇ ಸಾಲಿನ ನೇಕಾರ ಸಮ್ಮಾನ್ 5,000 ರೂ.ಗಳ ವಾರ್ಷಿಕ ಆರ್ಥಿಕ ನೆರವನ್ನು ಡಿಬಿಟಿ ಮುಖಾಂತರ ಒದಗಿಸಲಾಗುವುದು.



ಈ ಯೋಜನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿದ್ಯುತ್ ಮಗ್ಗ ನೇಕಾರರು, ಕಾರ್ಮಿಕರಿಗೆ ನೇಕಾರ ಸಮ್ಮಾನ್ ಯೋಜನೆಯಡಿ ಆರ್ಥಿಕ ನೆರವನ್ನು ನೇರ ನಗದು (ಡಿಬಿಟಿ) ಮೂಲಕ ವರ್ಗಾವಣೆಗೆ ಜ.11ರಂದು ಬೆಳಗ್ಗೆ 11.30 ಗಂಟೆಗೆ ಗೃಹ ಕಚೇರಿ ಕೃಷ್ಣಾದಲ್ಲಿ ಚಾಲನೆ ನೀಡಲಿದ್ದಾರೆ. ರಾಜ್ಯದ ಕೈಮಗ್ಗ ಮತ್ತು ಜವಳಿ ಇಲಾಖೆ ಹಾಗೂ ಕಾರ್ಮಿಕ ಇಲಾಖೆಯ ಗಣತಿ, ಸಮೀಕ್ಷೆಯಲ್ಲಿ ಈವರೆಗೆ ನೋಂದಾಯಿತರಾದ 1,02,980 ನೇಕಾರರು ತಲಾ 5 ಸಾವಿರ ರೂ.ಗಳ ನೆರವನ್ನು ಪಡೆಯಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಇದರಿಂದ ಸಾಂಕ್ರಾಮಿಕ ರೋಗ ಕೋವಿಡ್ ಕಂಡುಬಂದ ವರ್ಷದಿಂದಲೂ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ನೇಕಾರರಿಗೆ ಆರ್ಥಿಕ ಬಲವನ್ನು ತುಂಬಲು ಸರ್ಕಾರ ಮುಂದಾಗಿದೆ ಎಂದು ತಿಳಿಸಿದರು.

ಮೈಸೂರು ವಿವಿ ಸಂಜೆ ಕಾಲೇಜಿನಲ್ಲಿ ಪಠ್ಯೇತರ ಚಟುವಟಿಕೆಗೆ ಜನ್ನಿ ಚಾಲನೆ



ಮೈಸೂರು, ಜ.10(ಎಸ್‌ಪಿಎನ್)– ಸಾಹಿತ್ಯದಲ್ಲಿರುವ ಚಿಂತನೆಗಳು ಎಂದಿಗೂ ಹರಿಯುವ ನೀರಾಗಿರಬೇಕು. ಏಕೆಂದರೆ ವಿಶ್ವಮಾನ್ಯತೆ ಪಡೆದ ಸಾಹಿತಿಗಳ ಬರಹಗಳನ್ನು ಅಧ್ಯಯನ ಮಾಡುವ ಇಂದಿನ ವಿದ್ಯಾರ್ಥಿಗಳ ಚಿಂತನೆಯೂ ದೇಶದ ಪ್ರಗತಿಯತ್ತ ಬದಲಾಗುತ್ತದೆ ಎಂದು ಕಲಾವಿದ ಹೆಚ್.ಜನಾರ್ಧನ್(ಜನ್ನಿ) ಅಭಿಪ್ರಾಯಪಟ್ಟರು.

ಮೈಸೂರು ವಿವಿ ಸಂಜೆ ಕಾಲೇಜು ಹೊಸ ಕಟ್ಟಡ ಆವರಣದಲ್ಲಿ ಪಠ್ಯೇತರ ಚಟುವಟಿಕೆಗಳ ಸಮಿತಿ ವತಿಯಿಂದ ಆಯೋಜಿಸಿದ್ದ 2022–23ನೇ ಸಾಲಿನ ಪಠ್ಯೇತರ ಚಟುವಟಿಕೆಗಳ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಬಸವಣ್ಣ, ಕುವೆಂಪು, ಷರೀಫರ ಸಾಹಿತ್ಯದಲ್ಲಿ ಜಗತ್ತನ್ನು ಒಂದುಗೂಡಿಸುವ ಸಾಂಸ್ಕೃತಿಕ ಚಿಂತನೆಯಿದೆ. ಅವರು ಭೌತಿಕವಾಗಿ ಇಂದು ಇಲ್ಲದಿದ್ದರೂ ಅವರ ಉದಾತ್ತ ಚಿಂತನೆಗಳು ಇಂದಿಗೂ ಯುವ ಪೀಳಿಗೆಯ ಮನಸ್ಸಿನಲ್ಲಿದೆ. ಆ ಚಿಂತನೆಗಳು ಹರಿಯುವ ನದಿಯಾಗಿರುವುದರಿಂದ ಇಂದಿಗೂ ಅವರನ್ನು ಅಕ್ಷರ ರೂಪದಲ್ಲಿ ಕಾಣುತ್ತಿದ್ದೇವೆ ಎಂದರು.

ವಿವಿ ಪಠ್ಯದಲ್ಲಿ ಸೀಮಿತ ಅಂಶಗಳ ಚೌಕಟ್ಟಿದೆ. ಆದರೆ ಪಠ್ಯೇತರ ಚಟುವಟಿಕೆಗಳಿಗೆ ಯಾವುದೇ ಚೌಕಟ್ಟಿಲ್ಲ. ಹಾಗಾಗಿ ಕಾಲೇಜು ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದರಿಂದ ಅಂತಹ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ. ಮನಸ್ಸು ಕ್ರಿಯಾಶೀಲಗೊಳ್ಳುತ್ತದೆ. ಹಾಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಯು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ವೇಳೆ ವಿವಿ ಸಂಜೆ ಕಾಲೇಜು ಪ್ರಾಂಶುಪಾಲೆ ಪ್ರೊ.ಬಿ.ಎನ್.ಯಶೋಧ, ಪಠ್ಯೇತರ ಚಟುವಟಿಕೆಗಳ ಸಮಿತಿ ಸಂಚಾಲಕ ಡಾ.ನಿಂಗರಾಜು, ಡಾ.ರಾಚಯ್ಯ, ಡಾ.ಪರಶುರಾಮ, ಡಾ.ಸೌಭಾಗ್ಯವತಿ, ಡಾ.ವಿಜಯ ಕುಮಾರ್ ಗೊರಹಟ್ಟಿ, ಉಪನ್ಯಾಸಕಿ ದಿನಮಣಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಲಂಕಾ ವಿರುದ್ಧ ಗೆದ್ದ ಭಾರತ ಟೂರ್ನಿಯಲ್ಲಿ ಶುಭಾರಂಭ

● ಏಕದಿನದಲ್ಲಿ 45ನೇ ಶತಕ ಸಿಡಿಸಿದ ಕೊಹ್ಲಿ

● ಸರಣಿಯಲ್ಲಿ 1-0 ಅಂತರದ ಮುನ್ನಡೆ

ಗುವಾಹಟಿ,ಜ.10–ವಿರಾಟ್ ಕೊಹ್ಲಿ ಶತಕ ಹಾಗೂ ಶುಭ್‌ಮನ್ ಗಿಲ್, ನಾಯಕ ರೋಹಿತ್ ಶರ್ಮಾ ಅವರ ಅರ್ಧಶತಕದ ನೆರವಿನಿಂದ ಭಾರತ ಶ್ರೀಲಂಕಾ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ 67 ರನ್‌ಗಳ ಭರ್ಜರಿ ಜಯ ಸಾಧಿಸುವ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ. ಆ ಮೂಲಕ 3 ಪಂದ್ಯಗಳ ಏಕದಿನ ಸರಣಿಯಲ್ಲಿ 1–0 ಅಂತರದ ಮುನ್ನಡೆ ಸಾಧಿಸಿದೆ.




ಇಲ್ಲಿನ ಬರ್ಸಾಪರ ಕ್ರಿಕೆಟ್ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಭಾರತಕ್ಕೆ ಆರಂಭಿಕರಾದ ರೋಹಿತ್ ಶರ್ಮಾ, ಶುಭ್‌ಮನ್ ಗಿಲ್ ಮೊದಲ ವಿಕೆಟ್‌ಗೆ 143 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು.

ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಶುಭ್‌ಮನ್‌ಗಿಲ್ 60 ಎಸೆತಗಳಲ್ಲಿ 11 ಬೌಂಡರಿ ಒಳಗೊಂಡ 70 ರನ್ ಗಳಿಸಿ ನಿರ್ಗಮಿಸಿದರು. ಇದಾದ ಕೆಲ ಹೊತ್ತಲೇ ರೋಹಿತ್ ಶರ್ಮಾ ಸಹ 67 ಎಸೆತಗಳಲ್ಲಿ 3 ಸಿಕ್ಸರ್, 9 ಬೌಂಡರಿ ಒಳಗೊಂಡ 83 ರನ್ ಗಳಿಸಿ ಔಟಾದರು. ಈ ವೇಳೆ ಕ್ರೀಸ್‌ಗೆ ಆಗಮಿಸಿದ ಕೊಹ್ಲಿ ದೊರೆತ 2 ಜೀವದಾನದ ಲಾಭ ಪಡೆದು ಏಕದಿನ ಕ್ರಿಕೆಟ್‌ನಲ್ಲಿ 45ನೇ ಶತಕ ಸಿಡಿಸಿದರು. ಅಲ್ಲದೇ ಭಾರತದಲ್ಲಿ 20 ಶತಕ ಸಿಡಿಸಿದ್ದ ಸಚಿನ್ ದಾಖಲೆಯನ್ನು ಸರಿಗಟ್ಟಿದರು. ಪಂದ್ಯದಲ್ಲಿ ಅಬ್ಬರದ ಬ್ಯಾಟಿಂಗ್ ಮಾಡಿದ ಕೊಹ್ಲಿ 87 ಎಸೆತಗಳಲ್ಲಿ 12 ಬೌಂಡರಿ, 1 ಸಿಕ್ಸರ್ ಒಳಗೊಂಡ 113 ರನ್ ಸಿಡಿಸಿ ಔಟಾದರು. ಇವರಿಗೆ ಶ್ರೇಯಸ್ ಅಯ್ಯರ್ 28, ಕೆ.ಎಲ್.ರಾಹುಲ್ 39, ಹಾರ್ದಿಕ್ ಪಾಂಡ್ಯ 14 ರನ್ ಗಳಿಸುವ ಮೂಲಕ ಉತ್ತಮ ಸಾಥ್ ನೀಡಿದರು. ಅಂತಿಮವಾಗಿ ಭಾರತ ನಿಗದಿತ 50 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 373ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಶ್ರೀಲಂಕಾ ಪರ ರಜಿತ 3, ದಿಲ್ಷಾನ್ ಮಧುಶಂಕ, ಕರುಣರತ್ನೆ, ಶನಕ ಹಾಗೂ ಧನಂಜಯ ಡಿಸಿಲ್ವಾ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಬಳಿಕ ಗುರಿ ಬೆನ್ನತ್ತಿದ ಶ್ರೀಲಂಕಾ ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 306 ರನ್‌ಗಳಿಗೆ ತೃಪ್ತಿಪಟ್ಟಿತು. ಆ ಮೂಲಕ ನಾಯಕ ದಾಸುನ್ ಶನಕ 88 ಎಸೆತಗಳಲ್ಲಿ 12 ಬೌಂಡರಿ, 3 ಸಿಕ್ಸರ್ ಒಳಗೊಂಡ 108 ರನ್ ವ್ಯರ್ಥವಾಯಿತು. ಉಳಿದಂತೆ ಪತುಮ್ ನಿಸಂಕ 72, ಚರಿತ್ ಅಸಲಂಕ 23, ಧನಂಜಯ ಡಿಸಿಲ್ವಾ 47, ವಾನಿಂದು ಹಸರಂಗ 16 ರನ್ ಗಳಿಸಿದರು. ಭಾರತದ ಪರ ಉಮ್ರಾನ್ ಮಲ್ಲಿಕ್ 3, ಮೊಹಮ್ಮದ್ ಸಿರಾಜ್ 2, ಮೊಹಮ್ಮದ್ ಶಮಿ, ಹಾರ್ದಿಕ್ ಪಾಂಡ್ಯ ಹಾಗೂ ಯಜುವೇಂದ್ರ ಚಹಲ್ ತಲಾ ಒಂದೊಂದು ವಿಕೆಟ್ ಪಡೆದರು. ಪಂದ್ಯದಲ್ಲಿ ಅಮೋಘ ಶತಕ ಸಿಡಿಸಿದ ಕೊಹ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಖಾಸಗಿ ಬಸ್ ಡಿಕ್ಕಿ: ರಮ್ಮನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ನಾಗರಾಜು ಸಾವು

ಮೈಸೂರು,ಜ.10–ಖಾಸಗಿ ಬಸ್‌ವೊಂದು ಡಿಕ್ಕಿ ಹೊಡೆದ ಪರಿಣಾಮ ಕಾಳಿಸಿದ್ದನ ಹುಂಡಿ ನಿವಾಸಿ ರಮ್ಮನಹಳ್ಳಿ ಗ್ರಾ.ಪಂ ಮಾಜಿ ಅಧ್ಯಕ್ಷರೂ ಆದ ನಾಗರಾಜು (50) ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ವರುಣಾ ಕೆರೆ ಬಳಿ ಸಂಭವಿಸಿದೆ. ನಾಗರಾಜ್ ತಮ್ಮ ಕಾರಿನಲ್ಲಿ ನಾಲ್ವರು ಗೆಳೆಯ ರೊಂದಿಗೆ ಚಿಕ್ಕಲ್ಲೂರು ಜಾತ್ರೆಗೆ ತೆರಳಿ ಹಿಂದಿರುವಾಗ ವರುಣಾ ಕೆರೆ ಬಳಿ ಕಾರು ನಿಲ್ಲಿಸಿ, ಮೂತ್ರ ವಿಸರ್ಜನೆಗೆಂದು ರಸ್ತೆ ದಾಟಿ ಮರಳಿ ಕಾರಿನ ಬಳಿ ಬರುವಾಗ ಮೈಸೂರು ಕಡೆಯಿಂದ ನರಸೀಪುರದ ಕಡೆ ಹೋಗುತ್ತಿದ್ದ (ಕೆಎಲ್–17 ಎ–9639) ಖಾಸಗಿ ಬಸ್ ಡಿಕ್ಕಿ ಹೊಡೆದಿದ್ದು, ನಾಗರಾಜ್ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಘಟನೆ ನಂತರ ಕಾರಿನಲ್ಲಿದ್ದ ಇನ್ನಿತರ ಗೆಳೆಯರು ನೆರವಿಗೆ ಧಾವಿಸಿದರಾದರೂ ಸ್ಥಳದಲ್ಲೇ ಪ್ರಾಣ ಪಕ್ಷಿ ಹಾರಿ ಹೋಗಿತ್ತು. ವರುಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತ ದೇಹವನ್ನು ಮೈಸೂರು ಕೆ.ಆರ್. ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಲಾಗಿದ್ದು, ನಾಳೆ ಮರಣೋತ್ತರ ಪರೀಕ್ಷೆ ನಂತರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗುವುದು.



ಯಶಸ್ವಿ ಸೋಮಶೇಖರ್ ನೇತೃತ್ವದಲ್ಲಿ ಮುಡಾ ಅದಾಲತ್: ನೂರಾರು ಅಹವಾಲುಗಳ ಸಲ್ಲಿಕೆ

● ಖಾತೆ ಬದಲಾವಣೆ, ಹಕ್ಕುಪತ್ರ, ಸ್ವಾಧೀನ ಪತ್ರ ನೀಡಲು ಮನವಿ

● ಭೂಮಿ ಸ್ವಾಧೀನವಾದರು ನಮಗೆ ನಿವೇಶನ ನೀಡಿಲ್ಲ; ಜನರ ಅಳಲು

● ಹಲವು ಸಮಸ್ಯೆಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಿದ ಮುಡಾ ಅಧ್ಯಕ್ಷರು

ಮೈಸೂರು,ಜ.10(ಎಂಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ನಡೆಸಿದ ಮೊದಲ 'ಮುಡಾ ಅದಾಲತ್'ನಲ್ಲಿ ಖಾತೆ ಬದಲಾವಣೆ, ಹಕ್ಕುಪತ್ರ, ಸ್ವಾಧೀನ ಪತ್ರ, ನಿವೇಶನ ಕೋರಿ ಅರ್ಜಿ, ಮೂಲ ಭೂತ ಸೌಕರ್ಯ ಒದಗಿಸುವುದು ಸೇರಿದಂತೆ ಹತ್ತು–ಹಲವು ಸಮಸ್ಯೆಗಳು ವ್ಯಕ್ತವಾದವು.

ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅಧ್ಯಕ್ಷತೆಯಲ್ಲಿ ಮುಡಾ ಎದುರು ಮಂಗಳವಾರ ನಡೆದ ಮೊದಲ 'ಅದಾಲತ್'ನಲ್ಲಿ ಭಾಗವಹಿಸಿದ್ದ 250ಕ್ಕೂ ಅಧಿಕ ಮಂದಿ ತಮ್ಮ ಸಮಸ್ಯೆಗಳನ್ನು ತಿಳಿಸಿ, ಪರಿಹರಿಸುವಂತೆ ಅರ್ಜಿ ನೀಡಿದರಲ್ಲದೆ ತಮಗಾಗುತ್ತಿರುವ ತೊಂದರೆಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು.



ಬೋಗಾದಿ 2ನೇ ಹಂತದ ಸಿಎಫ್‌ಟಿಆರ್‌ಐ ಬಡಾವಣೆ ನಿವಾಸಿಗಳು, ಬಡಾವಣೆಯಲ್ಲಿದ್ದ ಉದ್ಯಾನವನ ಹಾಗೂ ಸಿಎ ನಿವೇಶನವನ್ನು ಬೇರೊಬ್ಬರೂ ಆಕ್ರಮಿಸಿಕೊಂಡಿದ್ದರು. ನಂತರ ಹೈಕೋರ್ಟ್ ಆಕ್ರಮಿಸಿಕೊಂಡಿದ್ದ ಜಾಗ ಮುಡಾಗೆ ಸೇರಿದ ಆಸ್ತಿಯೆಂದು ತೀರ್ಪು ನೀಡಿದೆ. ತೀರ್ಪು ನೀಡಿ ಹಲವು ವರ್ಷವಾದರೂ ಅಭಿವೃದ್ಧಿಗೊಳಿಸಿಲ್ಲ ಎಂದು ದೂರಿದರು.

ಬಡಾವಣೆ ರೂಪುಗೊಂಡು ಸುಮಾರು 30 ವರ್ಷವಾಗಿದೆ. ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ನಿತ್ಯ ಅಲೆಯುವಂತಾಗಿದೆ. ಕೂಡಲೇ ಖಾಲಿ ಇರುವ ಜಾಗವನ್ನು ಅಭಿವೃದ್ಧಿಪಡಿಸಬೇಕು ಎಂಬ ನಿವಾಸಿಗಳ ಮನವಿಗೆ ಪ್ರತಿಕ್ರಿಯಿಸಿ ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮುಡಾ ಅಧಿಕಾರಿಗಳು ಬಡಾವಣೆಯ ಅಧ್ಯಯನ ನಡೆಸಿ, ಕೂಡಲೇ ಅಭಿವೃದ್ಧಿ ಕೆಲಸ ನಡೆಸಲಿದ್ದಾರೆ ಎಂದು ಭರವಸೆ ನೀಡಿದರು.

ಕ್ರಯಪತ್ರ ಸಿಕ್ಕಿಲ್ಲ: ಲಾಲ್ ಬಹದ್ದೂರ್ ಶಾಸ್ತ್ರಿ ನಗರದಲ್ಲಿ ಮೊದಲನೇ ಪಾರ್ಟಿಯಿಂದ ನಿವೇಶನ ಖರೀದಿಸಿದ್ದೇನೆ. 2ನೇ ಪಾರ್ಟಿ ನಾನು. ಕ್ರಯಪತ್ರ ಸಿಗುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಯಾಕಾದರೂ ಖರೀದಿಸಿದೆ ಎನಿಸಿಬಿಟ್ಟಿದೆ ಎಂದು ನಟರಾಜು ಅಳಲು ತೋಡಿಕೊಂಡರು. ಇದಕ್ಕೆ ಸ್ಪಂದಿಸಿದ ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ನಿಮ್ಮ ಬಡಾವಣೆ ಸೇರಿದಂತೆ ವಸಂತನಗರ, ಆರ್.ಟಿ. ನಗರದಲ್ಲಿ ಈ ಸಮಸ್ಯೆಯಿದೆ. ಮನೆ ನಿರ್ಮಿಸಿ ದಂಡ ಕಟ್ಟಿದರೂ ಕ್ರಯಪತ್ರ ನೀಡುವ ಅವಕಾಶವಿಲ್ಲ. ಈ ಸಮಸ್ಯೆ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದರು.

ಮುಡಾ ನಿವೇಶನಕ್ಕೆ ಅರ್ಜಿ ಹಾಕಿ 28 ವರ್ಷಗಳೇ ಕಳೆದಿವೆ. ಅರ್ಜಿಯಲ್ಲಿ ಜನ್ಮದಿನವನ್ನು ತಪ್ಪಾಗಿ ನೀಡಿದ್ದೀರಿ ಎಂದು ಅಲೆದಾಡಿಸುತ್ತಿದ್ದಾರೆ ಎಂದು ಜನತಾ ನಗರದ ದಾಕ್ಷಾಯಿಣಿ ಬೇಸರ ವ್ಯಕ್ತಪಡಿಸಿದರೆ, ಕೇರ್ಗಳ್ಳಿಯ ಮಹೇಶ್, ಬಿ.ರವಿ ಶಂಕರ್ ಬಡಾವಣೆಯಲ್ಲಿ ನಿವೇಶನ ಖರೀದಿಸಿದ್ದೇನೆ. ಇನ್ನೂ ಖಾತೆ ಮಾಡಿಕೊಟ್ಟಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಹಿನಕಲ್‌ನ ಸರ್ವೆ ನಂ.159/4, 159/4, 153/6 ಹಾಗೂ 170/6 ಸೇರಿ ಒಟ್ಟು 4.08 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಆದರೆ ಬೈಲಾದಲ್ಲಿರುವಂತೆ ನಮಗಿನ್ನು ನಿವೇಶನ ನೀಡಿಲ್ಲ. ಒಂದು ನಿವೇಶನ ನೀಡಿದ್ದಾರಷ್ಟೇ ಎಂದು ಲೋಕನಾಯಕ ನಗರದ ಎಂ.ಶಿವಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದರು. ಹಾಗೆಯೇ ಲಲಿತಾದ್ರಿ ನಗರ (ದಕ್ಷಿಣ) ಬಡಾವಣೆ, ಎಸ್‌ಬಿಎಂ ಬಡಾವಣೆ ಸೇರಿದಂತೆ ಹಲವು ಬಡಾವಣೆಗಳಲ್ಲಿ ಮೂಲಸೌಕರ್ಯ ಒದಗಿಸುವಂತೆ ಅರ್ಜಿ ನೀಡಿ, ಮನವಿ ಮಾಡಲಾಯಿತು.

ಮುಡಾ ಸದಸ್ಯರಾದ ಲಕ್ಷ್ಮಿದೇವಿ, ನವೀನ್ ಕುಮಾರ್, ಕಾರ್ಯದರ್ಶಿ ಡಾ.ಎನ್.ಸಿ. ವೆಂಕಟರಾಜು, ಸೂಪರಿಂಟೆಂಡೆಂಟ್ ಇಂಜಿನಿಯರ್ ಚೆನ್ನಕೇಶವ, ನಗರ ಯೋಜನಾ ಸದಸ್ಯ ಶೇಷಾ, ವಿಶೇಷ ತಹಸಿಲ್ದಾರ್ ಗುರುಪ್ರಸಾದ್ ಮತ್ತಿತರರಿದ್ದರು.

'ಮುಡಾ ಅದಾಲತ್'ನಲ್ಲಿ ಹೊಸದಾಗಿ ನಿವೇಶನಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿಲ್ಲ...

ಪ್ರಾಸ್ತಾವಿಕ ಮಾತುಗಳನ್ನಾಡಿದ ಮುಡಾ ಆಯುಕ್ತ ದಿನೇಶ್‌ಕುಮಾರ್, ಮುಡಾ ಅದಾಲತ್‌ನಲ್ಲಿ ಹೊಸದಾಗಿ ನಿವೇಶನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಭೂ ಉಪಯೋಗ ಮಾಹಿತಿ ಅಥವಾ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುವುದು. ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರ ಪಾವತಿ ಬಾಕಿ ಇರುವುದು. ಭೂ ಸ್ವಾಧೀನ ಅವಾರ್ಡ್ ಅಥವಾ ನೋಟಿಫಿಕೇಷನ್ ನಕಲು ಹಾಗೂ ಇತರೆ ನಕಲುಗಳನ್ನು ಕೋರಿ ಸಲ್ಲಿಸಿರುವ ಅರ್ಜಿಗಳು. ಕಟ್ಟಡ ಪೂರ್ಣಗೊಂಡ ಬಗ್ಗೆ ಮುಕ್ತಾಯ ಅರ್ಜಿ ಸಲ್ಲಿಸಿರುವುದು, ಮನೆ ಕಂದಾಯ ನಿಗದಿಗೆ ಅರ್ಜಿ ಸಲ್ಲಿಸಿರುವುದು. ಬದಲಿ ನಿವೇಶನ ಕೋರಿರುವುದು. ಮಂಜೂರಾತಿ ಪತ್ರ, ಸ್ವಾಧೀನ ಪತ್ರ, ಖಾತಾ ಕಂದಾಯ ಇತರೆ ದಾಖಲಾತಿಗಳ ದೃಢೀಕೃತ ನಕಲು ಕೋರಿ ಅರ್ಜಿ ಸಲ್ಲಿಸುವುದು ಹಾಗೂ ನಿವೇಶನ ಅಥವಾ ಮನೆಯ ಕ್ರಯ ಪತ್ರ ಕೋರಿ ಸಲ್ಲಿಸಿರುವ ಅರ್ಜಿಗಳಿಗೆ ಪರಿಹಾರ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಡೆವಲಪರ್‌ಗೆ ನೋಟಿಸ್ ಕೊಡಿ; ಯಶಸ್ವಿ ಸೋಮಶೇಖರ್

'ಮುಡಾ ಅದಾಲತ್'ನಲ್ಲಿ ನಾಗರಿಕರ ಸಮಸ್ಯೆ ಆಲಿಸಿದ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಬಡಾವಣೆ ನಿವಾಸಿಗಳ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಬೇಕು. ಬಡಾವಣೆಯ ಡೆವಲಪರ್‌ಗೆ ನೋಟಿಸ್ ನೀಡಿ ಎಂದು ಸೂಚಿಸಿದರು.

ಮೊದಲ 'ಮುಡಾ ಅದಾಲತ್'ನಲ್ಲಿ 250 ಅರ್ಜಿಗಳು ಬಂದಿದ್ದು, 20ಕ್ಕೂ ಹೆಚ್ಚು ಅರ್ಜಿಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಲಾಗಿದೆ. ಇಬ್ಬರಿಗೆ ಖಾತೆ ನೀಡಲಾಗಿದೆ. ಖಾಸಗಿ ಬಡಾವಣೆಗಳಲ್ಲಿ ಮೂಲ ಸೌಕರ್ಯಗಳ ಕೊರತೆ ಹೆಚ್ಚಾಗಿದ್ದು, ಹಂತ ಹಂತವಾಗಿ ಬಗೆಹರಿಸಲಾಗುವುದು. ಸಿಎ ಸೈಟ್‌ಗಳ ಕುರಿತು ಸದ್ಯದಲ್ಲಿಯೇ ಸಭೆ ನಡೆಸಲಾಗುವುದು. ಸಾಹಿತ್ಯ–ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಹೆಚ್ ಕೆಟಗರಿಯಲ್ಲಿ ನೀಡುವ ನಿವೇಶನಗಳಿಗೆ ಅರ್ಜಿಗಳು ಬಂದಿದ್ದು, ಗಮನಹರಿಸಲಾಗುವುದು ಎಂದು ತಿಳಿಸಿದರು.

ಮೊದಲ 'ಮುಡಾ ಅದಾಲತ್' ಯಶಸ್ವಿಯಾಗಿ ನಡೆದಿದ್ದು, ಇದೇ ತಿಂಗಳ 4ನೇ ಮಂಗಳವಾರ ನಡೆಯುವ 2ನೇ 'ಮುಡಾ ಅದಾಲತ್'ನಲ್ಲಿ ಮೊದಲ ಅದಾಲತ್‌ನಲ್ಲಿ ಕಂಡು ಬಂದ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವ ಮೂಲಕ ನಾಗರಿಕರ ಸಮಸ್ಯೆಗಳಿಗೆ ಸ್ಪಂದಿಸಲು ಪ್ರಯತ್ನಿಸಲಾಗುವುದು. ಎಲ್ಲಾ ಅಧಿಕಾರಿ, ಸಿಬ್ಬಂದಿ ಅದಾಲತ್‌ನಲ್ಲಿ ಭಾಗವಹಿಸಿ ಉತ್ತಮ ಸಹಕಾರ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಿಜೆಪಿ ಯೋಜನೆಗಳಿಗೆ ವಿಪಕ್ಷಗಳಿಂದಲೂ ಪರೋಕ್ಷ ಪ್ರಶಂಸೆ

● ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಸಮರ್ಥನೆ ● ಕೆ.ಆರ್.ಕ್ಷೇತ್ರದಲ್ಲಿ ಬೂತ್ ವಿಜಯ ಅಭಿಯಾನ



ಮೈಸೂರು, ಜ.10 (ಜಿಎ)– ಬಿಜೆಪಿ ಟೀಕಿಸುವ ಎಡಪಂಥೀಯರಿಂದಲೂ ಸರ್ಕಾರದ ಯೋಜನೆಗಳ ಕುರಿತು ಬಹಿರಂಗವಾಗಿ ಮೆಚ್ಚುಗೆಯ ಮಾತುಗಳು ವ್ಯಕ್ತವಾಗುತ್ತಿವೆ ಎಂದು ಸಚಿವ ಕೋಟಾ ಶ್ರೀನಿವಾಸ ಪೂಜಾರಿ ತಿಳಿಸಿದರು.

ನಗರದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಬೂತ್ ವಿಜಯ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಿಜೆಪಿ ಗೆಲುವಿನ ಶಕ್ತಿಯೇ ಸಂಘಟನೆ. ಬೂತ್ ಗೆದ್ದರೆ ಮಾತ್ರ ರಾಜ್ಯದ ಗೆಲುವು ಸಾಧ್ಯ ಎಂಬುದು ಪ್ರತಿಯೊಬ್ಬ ಕಾರ್ಯಕರ್ತನಿಗೂ ಮನವರಿಕೆ ಆಗಬೇಕು. ಬೂತ್ ಅಧ್ಯಕ್ಷರಾದವರಿಗೆ ತಮ್ಮ ಬೂತ್ ವ್ಯಾಪ್ತಿಯ ಪ್ರತಿಯೊಬ್ಬರ ಸಂಪರ್ಕ ಇರಬೇಕು. ಸಮಿತಿ ಹಾಗೂ ವಾಟ್ಸಾಪ್ ಗ್ರೂಪ್ ರಚಿಸಿ ಆ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುಷ್ಠಾನಿತ ಯೋಜನೆಗಳ ಬಗ್ಗೆ ಸಾರ್ವಜನಿಕವಾಗಿ ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಕೆಲಸ ಮಾಡಬೇಕು. ನಮ್ಮ ಸರ್ಕಾರದ ಅತ್ಯಂತ ಯಶಸ್ವಿ ಯೋಜನೆಗಳಲ್ಲಿ ಒಂದಾದ ಕಿಸಾನ್ ಸಮ್ಮಾನ್ ಯೋಜನೆ ಮನೆಮಾತಾಗಿದೆ. ಅಂತಹ ಹಲವು ಹತ್ತು ಯೋಜನೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿದ್ದು, ಅದರ ಬಗ್ಗೆ ಪ್ರತೀ ವ್ಯಕ್ತಿಗೂ ಮಾಹಿತಿ ತಲುಪಿಸುವ ಕೆಲಸವನ್ನು ಬೂತ್ ಕಮಿಟಿಗಳು ಮಾಡಬೇಕು ಎಂದು ಸಲಹೆ ನೀಡಿದರು.

ಬದಲಾದ ರಾಜಕೀಯ ಪರಿಸ್ಥಿತಿಯನ್ನು ಬಿಜೆಪಿ ಕಾರ್ಯಕರ್ತರು ಗಮನಿಸಬೇಕು. ತ್ರಿವಳಿ ತಲಾಕ್, ಆರ್ಟಿಕಲ್ 370, ಗೋಹತ್ಯೆ ನಿಷೇಧ ಸೇರಿದಂತೆ ವಿವಿಧ ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯ ನೀಡುವ ಮೂಲಕ ಈ ದೇಶದಲ್ಲಿ ಮುಂದೆ ರಾಷ್ಟ್ರಭಕ್ತರಿಗೆ ಮಾತ್ರ ಗೌರವ ಎಂಬ ಭರವಸೆಯ ಸಂದೇಶ ಸಾರಿದೆ ಎಂದರು.

ಮತಾಂತರ ನಿಷೇಧ ಕಾಯ್ದೆಯನ್ನು ಜಾರಿ ಮಾಡಿದ್ದು ಬಿಜೆಪಿ ಸರ್ಕಾರ. ಆದರೆ, ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಅದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಕಾಯ್ದೆ ಜಾರಿಯಿಂದ ಆಗಿರುವ ಲಾಭ ಹಾಗೂ ನಷ್ಟದ ಬಗೆಗಿನ ಸತ್ಯಾಸತ್ಯತೆಯನ್ನು ಸಿದ್ದರಾಮಯ್ಯ ಜನತೆಯ ಮುಂದೆ ಇಡುತ್ತಾರಾ ಎಂದು ಪ್ರಶ್ನಿಸಿದರು. ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೆ ಮುನ್ನ ಕೆಲವರು ಹಾಡಹಗಲೇ ಬೀದಿಬದಿಯಲ್ಲಿ ಕುಳಿತು ದನದ ಮಾಂಸ ತಿಂದು ಪ್ರತಿಭಟಿಸಿದರು. ಆದರೆ, ಈಗ ಅದೇ ರೀತಿ ಪ್ರತಿಭಟಿಸಲಿ, ಕಾನೂನಿನ ಪರಿಣಾಮ ಏನೆಂಬುದು ಅರ್ಥ ಆಗಲಿದೆ ಎಂಬ ಎಚ್ಚರಿಕೆ ನೀಡಿದರು.

ಹಿಂದೆ ಭಾರತ ಒಡೆದವರಿಂದಲೇ ಇಂದು ಭಾರತ್ ಜೋಡೋ ಯಾತ್ರೆ ನಡೆದಿದೆ ಎಂದು ಕುಹಕವಾಡಿ, ರಾಷ್ಟ್ರದ ನೆಮ್ಮದಿ, ಭಾರತದ ಅಭಿವೃದ್ಧಿಗಾಗಿ ಬಿಜೆಪಿ ಮತ್ತೆ ಮತ್ತೆ ಅಧಿಕಾರಕ್ಕೆ ಬರಬೇಕಿದೆ ಎಂದು ಪ್ರತಿಪಾದಿಸಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುಷ್ಠಾನಗೊಳಿಸಿದ ಯೋಜನೆಗಳ ಬಗ್ಗೆ ಇಂದು ವಿರೋಧ ಪಕ್ಷದವರೇ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಎಸ್.ಎ.ರಾಮದಾಸ್, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ನಗರ ಪ್ರಧಾನ ಕಾರ್ಯದರ್ಶಿ ವಾಣೀಶ್, ಕ್ಷೇತ್ರದ ಅಧ್ಯಕ್ಷ ವಡಿವೇಲು, ಪಾಲಿಕೆ ಸದಸ್ಯರಾದ ಶಾರದಮ್ಮ ಈಶ್ವರ್, ಬಿ.ವಿ.ಮಂಜುನಾಥ್, ಮುಖಂಡರಾದ ದೇವರಾಜೇಗೌಡ, ಓಂ ಶ್ರೀನಿವಾಸ್, ರವಿ, ರೇಣುಕಾ, ಭಾಗ್ಯ, ಸೋಮ ಯಾಜಿ, ಅಕ್ಷಯ್, ಕುಮಾರ, ರಾಘವೇಂದ್ರ, ಮುರುಳಿ, ನಾಗರತ್ನಗೌಡ, ಮೈನಾವತಿ, ಗೌರೀಶ್, ಪ್ರಸಾದ್ ಬಾಬು, ಸಂತೋಷ್, ಶಿವಪ್ಪ, ಲೋಕೇಶ್, ರವಿಚಂದ್ರನ್ ಇದ್ದರು.

ಕರಾಟೆಪಟುಗೆ ಎನ್‌ಆರ್ ಠಾಣೆ ಪೊಲೀಸರಿಂದ ಸನ್ಮಾನ



ಮೈಸೂರು,ಜ.10–ಮಾರ್ಷಲ್ ಆರ್ಟ್ಸ್‌ನಲ್ಲಿ ಸಾಧನೆ ಮಾಡಿದ ಮೈಸೂರು ವಿವಿ ಎಂಎಸ್ಸಿ ವಿದ್ಯಾರ್ಥಿನಿ ಸೌಜನ್ಯ ಅವರನ್ನು ನರಸಿಂಹರಾಜ ಠಾಣೆ ಪೊಲೀಸರು ಸನ್ಮಾನಿಸಿ, ಶುಭಕೋರಿದ್ದಾರೆ.

ಮೈಸೂರಿನ ರಾಜೇಂದ್ರನಗರದಲ್ಲಿರುವ ಎಸ್‌ಜಿಆರ್‌ಆರ್ ಕರಾಟೆ ಮತ್ತು ಸ್ಪೋರ್ಟ್ಸ್ ಶಾಲೆಯ ಕರಾಟೆ ತರಬೇತುದಾರ ಲೋಕೇಶ್ ಅವರ ಬಳಿ ಓಕಿನಾವಾ ಶೋಟೋಕಾನ್ ಶೈಲಿಯ ಕರಾಟೆ ಅಭ್ಯಾಸ ಮಾಡುತ್ತಿರುವ ಸೌಜನ್ಯ, ಆರು ಬಾರಿ ಯೂನಿವರ್ಸಿಟಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಹಾಗೆಯೇ ರಾಜ್ಯಮಟ್ಟದಲ್ಲಿ 30, ರಾಷ್ಟ್ರಮಟ್ಟದಲ್ಲಿ 13 ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಎರಡು ಪದಕಗಳನ್ನು ಜಯಿಸುವ ಮೂಲಕ ಮೈಸೂರಿಗೆ ಕೀರ್ತಿ ತಂದಿದ್ದಾರೆ.

ಪ್ರತಿಭಾನ್ವಿತ ಕರಾಟೆ ಪಟು ಸೌಜನ್ಯ ಅವರನ್ನು ಅಭಿನಂದಿಸಿದ ಎನ್‌ಆರ್ ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ಜೈಕೀರ್ತಿ ಮತ್ತು ಸಿಬ್ಬಂದಿಗಳು ಇನ್ನಷ್ಟು ಸಾಧನೆ ಮಾಡಿ, ದೇಶಕ್ಕೆ ಕೀರ್ತಿ ತರಲಿ ಎಂದು ಹಾರೈಸಿದ್ದಾರೆ.

ತಾಯಿ ಚಾಮುಂಡೇಶ್ವರಿಗೆ ಪರಿಶುದ್ಧ ನೀರು; ಸಿಬ್ಬಂದಿ ಸುರಕ್ಷತೆ ದೃಷ್ಟಿಯಿಂದ ದೇವಿಕೆರೆ ಅಭಿವೃದ್ಧಿ ಸೀಮಿತ

● ಶಾಸಕ ರಾಮದಾಸ್ ಸದುದ್ದೇಶ ● ಕ್ಷೇತ್ರ ವ್ಯಾಪ್ತಿ ಮೀರಿ ಸೇವಾ ಕಾರ್ಯದ ಹೆಮ್ಮೆ ● ಶಾಸಕರ ಮಹತ್ಕಾರ್ಯಕ್ಕೆ ಜನರ ಅತೀವ ಮೆಚ್ಚುಗೆ

ಮೈಸೂರು, ಜ.10(ಎಸ್‌ಬಿಡಿ)–ಚಾಮುಂಡಿಬೆಟ್ಟದ ಪವಿತ್ರ ದೇವಿಕೆರೆ ಸಂರಕ್ಷಣೆಯ ಉದ್ದೇಶದಿಂದ ಮಾತ್ರ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ.



ಚಾಮುಂಡಿಬೆಟ್ಟ ತಾವು ಪ್ರತಿನಿಧಿಸುವ ಕ್ಷೇತ್ರ ವ್ಯಾಪ್ತಿಯಲ್ಲಿ ಇಲ್ಲವಾದರೂ ದೇವಿಕೆರೆ ಅಭಿವೃದ್ಧಿ ಯೋಜನೆಗೆ ಎಸ್.ಎ.ರಾಮದಾಸ್ ಅವರ ಆಸಕ್ತಿ, ಪರಿಶ್ರಮವೇ ಕಾರಣ. ಪವಿತ್ರ ದೇವಿಕೆರೆ ದುಸ್ಥಿತಿ ಬಗ್ಗೆ ದೇವಾಲಯದ ಅರ್ಚಕರು, ನಿವಾಸಿಗಳು ಗಮನಕ್ಕೆ ತಂದ ಹಿನ್ನೆಲೆಯಲ್ಲಿ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಖುದ್ದು ಭೇಟಿ ಮಾಡಿ, ದೇವಿಕೆರೆ ಸಂರಕ್ಷಣೆಗೆ ಅನುದಾನಕ್ಕೆ ಅನುಮತಿ ಪಡೆದಿದ್ದ ಎಸ್.ಎ.ರಾಮದಾಸ್ ಅವರು, ಸಣ್ಣ ನೀರಾವರಿ ಸಚಿವ ಜೆ.ಮಾಧುಸ್ವಾಮಿ ಅವರನ್ನು ಒತ್ತಾಯಿಸಿ ಮೊದಲ ಹಂತದ ಹಣವನ್ನೂ ಬಿಡುಗಡೆ ಮಾಡಿಸಿದ್ದರು. ಪರಿಣಾಮ ಅಭಿವೃದ್ಧಿ ಕಾಮಗಾರಿ ಆರಂಭವಾಗಿದೆ. ಶಾಸಕ ರಾಮದಾಸರ ಮಹದುದ್ದೇಶವನ್ನು ಜನರೇ ಪ್ರಶಂಸಿಸಿದ್ದಾರೆ. ಅಲ್ಲದೆ ಕ್ಷೇತ್ರ ವ್ಯಾಪ್ತಿ ಮೀರಿ ಕೈಗೊಂಡಿರುವ ಇವರ ಕಾರ್ಯಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.

ಈ ಸಂಬಂಧ ಪ್ರತಿಕ್ರಿಯಿಸಿದ ಅವರು, ಕೊಳಚೆ ನೀರು ದೇವಿಕೆರೆ ಒಡಲು ಸೇರುತ್ತಿತ್ತು. ನಿರ್ವಹಣೆ ಇಲ್ಲದೆ ಮೆಟ್ಟಿಲುಗಳಲ್ಲಿ ಕಾಲಿಟ್ಟರೆ ಜಾರುತ್ತಿದ್ದ ಕಾರಣ ತಾಯಿ ಚಾಮುಂಡೇಶ್ವರಿ ದೇವಾಲಯಕ್ಕೆ ನೀರು ತರಲು ಹೋಗುವ ಅರ್ಚಕರಿಗೆ ಸುರಕ್ಷತೆ ಇಲ್ಲವಾಗಿತ್ತು. ಏರಿಯ ಒಂದು ಭಾಗ ಶಿಥಿಲಾವಸ್ಥೆಯಲ್ಲಿತ್ತು. ಈ ಬಗ್ಗೆ ದೇವಾಲಯದ ಅರ್ಚಕರು ನನ್ನ ಗಮನಕ್ಕೆ ತಂದು ಕೆರೆ ಅಭಿವೃದ್ಧಿಗೆ ಮನವಿ ಮಾಡಿದ್ದರು. ಹಾಗಾಗಿ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಲ್ಲಿ ಮನವಿ ಮಾಡಿ, ದೇವಿಕೆರೆ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಿಸಿದೆ. ಈ ಬಗ್ಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರೇ ಸಂತಸ ವ್ಯಕ್ತಪಡಿಸಿದ್ದಾರೆ. ಸದ್ಯ ಕೊಳಚೆ ನೀರು ಕೆರೆ ಸೇರದಂತೆ ಮಳೆ ನೀರು ಮಾತ್ರ ಕೆರೆಗೆ ಹರಿಯುವಂತೆ ಹಾಗೂ ಕೋಡಿ ನೀರು ಸರಾಗವಾಗಿ ಹೊರಹೋಗುವಂತೆ ವ್ಯವಸ್ಥೆ ಮಾಡಿ, ಅಭಿವೃದ್ಧಿಪಡಿಸಲಾಗುತ್ತಿದೆ. ಚಾಮುಂಡೇಶ್ವರಿ ಅಮ್ಮನ ಪೂಜೆಗೆ ಪರಿಶುದ್ಧ ನೀರು ಬೇಕು ಹಾಗೂ ಅದನ್ನು ತರಲು ಹೋಗುವವರಿಗೆ ಸುರಕ್ಷತೆ ಬೇಕು ಎಂಬ ಉದ್ದೇಶದಿಂದ ಮಾತ್ರ ಈ ಕಾರ್ಯ ಮಾಡಿದ್ದೇವೆ. ಇದರಲ್ಲಿ ಮತ್ತೇನು ಇಲ್ಲ ಎಂದು ಸ್ಪಷ್ಟಪಡಿಸಿದರು.



ಎಚ್ಚರಿಕೆ ವಹಿಸಲಾಗಿದೆ: ದೇವಿಕೆರೆ ಅಭಿವೃದ್ಧಿ ಕಾಮಗಾರಿ ಬಗ್ಗೆ ಸಣ್ಣ ನೀರಾವರಿ ಇಲಾಖೆ ಎಇಇ ಈಶ್ವರ್ ಪ್ರತಿಕ್ರಿಯಿಸಿ, ದಸರಾ ಸಂದರ್ಭದಲ್ಲಿ ವೈಭವದ ತೆಪ್ಪೋತ್ಸವ ಜರುಗುವ ಪವಿತ್ರ ದೇವಿಕೆರೆಗೆ ಕೊಳಚೆ ನೀರು ಸೇರುತ್ತಿತ್ತು. ಅದನ್ನು ತಪ್ಪಿಸುವುದರ ಜೊತೆಗೆ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಶಾಸಕರಾದ ಎಸ್.ಎ.ರಾಮದಾಸ್ ಅವರು ವಿಶೇಷ ಆಸಕ್ತಿ ವಹಿಸಿ ಯಡಿಯೂರಪ್ಪನವರು ಸಿಎಂ ಆಗಿದ್ದಾಗ ಅನುದಾನಕ್ಕೆ ಅನುಮತಿ ಪಡೆದರು. ಸಣ್ಣ ನೀರಾವರಿ ಸಚಿವರಾದ ಮಾಧುಸ್ವಾಮಿ ಅವರನ್ನೂ ಭೇಟಿ ಮಾಡಿ, ಮೊದಲ ಹಂತದ ಅನುದಾನ ಬಿಡುಗಡೆ ಮಾಡಿಸಿದರು. ಈ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ಇಲಾಖೆ ಮೂಲಕ 7.50 ಕೋಟಿ ರೂ. ಯೋಜನೆ ಟೆಂಡರ್ ವನಜ ಕನ್‌ಸ್ಟ್ರಕ್ಷನ್ ಸಂಸ್ಥೆಗೆ ವಹಿಸಿ, ಕಳೆದ 2022ರ ಜೂ.21ರಂದು ಕಾಮಗಾರಿಗೆ ಕಾರ್ಯಾದೇಶ ನೀಡಲಾಗಿದೆ. ಅತ್ಯಂತ ಎಚ್ಚರಿಕೆಯಿಂದ ಕಾಮಗಾರಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ತಾಯಿ ಪದರಕ್ಕೆ ಹಾನಿಯಿಲ್ಲ: ಕೊಳಚೆ ನೀರು ಕೆರೆ ಸೇರದಂತೆ ಸೂಕ್ತ ಚರಂಡಿ ವ್ಯವಸ್ಥೆ ಕಲ್ಪಿಸಿ, ಮಳೆ ನೀರು ಮಾತ್ರ ಹರಿದುಬರಲು ಹಾಗೂ ಕೆರೆ ತುಂಬಿದಾಗ ಹೆಚ್ಚುವರಿ ನೀರು ಸರಾಗವಾಗಿ ಹೊರಹೋಗಲು ವ್ಯವಸ್ಥೆ ಮಾಡಲಾಗಿದೆ. ಇನ್ನು ಒಂದು ಹನಿ ಕೊಳಚೆ ನೀರು ಕೆರೆ ಸೇರುವುದಿಲ್ಲ. ಸದ್ಯ ಹೂಳೆತ್ತುವ ಕಾರ್ಯ ಪ್ರಗತಿಯಲ್ಲಿದ್ದು, ತಾಯಿ ಪದರಕ್ಕೆ ಹಾನಿಯಾಗದಂತೆ ಎಚ್ಚರವಹಿಸಲಾಗಿದೆ. ಐದಾರು ದಶಕದಿಂದ ಹೂಳು ತೆಗೆಯದಿರುವ ಕಾರಣ ಅದು ಹೆಚ್ಚು ಪ್ರಮಾಣದಲ್ಲಿದೆ. ಯಂತ್ರೋಪಕರಣ ಬಳಸಿದ್ದರೂ ಕೇವಲ ಕೆಸರು ಅರ್ಥಾತ್ ಹೂಳನ್ನು ಮಾತ್ರ ತೆಗೆಯಲಾಗುತ್ತಿದ್ದು, ತಾಯಿ ಪದರಕ್ಕೆ ತೊಂದರೆ ಆಗುತ್ತಿಲ್ಲ. ಹಾಗೆಯೇ ನೀರಿನ ಸೆಲೆಗಳಿಗೂ ಹಾನಿಯಾಗುತ್ತಿಲ್ಲ ಎಂದರು.

ಜಲಚರಗಳ ಬಗ್ಗೆಯೂ ನಿಗಾ: ಕೆರೆಯಲ್ಲಿ ಜಲಚರಗಳಿರಬಹುದೆಂದು ಆರಂಭದಿಂದಲೂ ನಿಗಾ ವಹಿಸಲಾಗಿತ್ತು. ಆಮೆ ಇನ್ನಿತರ ಜಲಚರಗಳಿವೆ ಎಂದಿದ್ದರಿಂದ ಹೂಳೆತ್ತುವ ಮೊದಲು ಕೆರೆಯ ನೀರನ್ನು ಹೊರಹಾಕುವಾಗ ನಿರಂತರವಾಗಿ ಪರಿಶೀಲಿಸಲಾಯಿತು. ಆ ವೇಳೆ ಸಿಕ್ಕ 2 ದೊಡ್ಡ ಮೀನುಗಳನ್ನು ರಕ್ಷಿಸಿ ಹಿರೇಕೆರೆಗೆ ಬಿಡಲಾಯಿತು. ಕಲ್ಯಾಣಿ ಮಾದರಿಯಲ್ಲಿ ಅಳವಡಿಸಿದ್ದ ಕಲ್ಲುಗಳನ್ನೇ ತೆಗೆದು ನೇರವಾಗಿ ಜೋಡಿಸಲಾಗುತ್ತಿದ್ದು, ಅವು ಜಾರದಂತೆ ಟೋ ವಾಲ್ ನಿರ್ಮಿಸಲಾಗುತ್ತಿದೆ. ಸುತ್ತಲೂ ಪಾಥ್‌ವೇ ನಿರ್ಮಿಸಿ, ಇಳಿಜಾರು ಮಾದರಿ ಕಲ್ಲು ಗೋಡೆಯನ್ನೂ ರೀಸೆಟ್ ಮಾಡಿ, ಸುರಕ್ಷತೆಗೆ ದಂಡೆ ಮೇಲೆ ಗ್ರಿಲ್ ಅಳವಡಿಸಲಾಗುವುದು. ದೇವಸ್ಥಾನಕ್ಕೆ ನೀರು ತೆಗೆದುಕೊಳ್ಳುವ ಕೊಳದ ಪಕ್ಕದ ಖಾಲಿ ಜಾಗದಲ್ಲಿ ಕಲ್ಲುಗಳಿಂದ ಆಸನ ವ್ಯವಸ್ಥೆ ಮಾಡಿ, ವೀಕ್ಷಕರ ಗ್ಯಾಲರಿ ಮಾದರಿ ನಿರ್ಮಿಸಲಾಗುವುದು. ಪಾರಂಪರಿಕ ಮಾದರಿ ವಿದ್ಯುತ್ ಕಂಬಗಳನ್ನೂ ಹಾಕಲಾಗುತ್ತದೆ. ಕೆರೆಯ ಮೂಲರೂಪ ಹಾಗೂ ತಾಯಿ ಪದರಕ್ಕೆ ಹಾನಿಯಾಗದಂತೆ ಪಾರಂಪರಿಕತೆ ಹಾಳಾಗದಂತೆ ಎಚ್ಚರಿಕೆ ಹಾಗೂ ನಿಷ್ಠೆಯಿಂದ ಕೆಲಸ ಮಾಡಲಾಗುತ್ತಿದೆ. ಹೂಳೆತ್ತಲು ಮಾತ್ರ ಯಂತ್ರೋಪಕರಣ ಬಳಸಲಾಗಿದ್ದು, ಇನ್ನೆಲ್ಲವೂ ಮ್ಯಾನುವಲ್(ಮಾನವ ಶಕ್ತಿ) ಮೂಲಕ ಮಾಡಲಾಗುತ್ತದೆ. ಜೂನ್ ವೇಳೆಗೆ ಕಾಮಗಾರಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ತಿಳಿಸಿದರು.

29 ವರ್ಷಗಳ ಬಳಿಕ ಸಕ್ಕರೆ ನಾಡಲ್ಲಿ ನುಡಿ ಜಾತ್ರೆ

1974, 1994ರಲ್ಲಿ ನಡೆದಿದ್ದ ಅಖಿಲ ಭಾರತ ಸಾಹಿತ್ಯ ಸಮ್ಮೇಳನ



1974ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಗಣ್ಯರು.

"ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯಕ್ಕೆ ತರುವುದು ನನ್ನ ಕನಸಾಗಿತ್ತು. ಅದು ಈಗ ಈಡೇರಿದೆ. ಈಗಾಗಲೇ ಸಮ್ಮೇಳನ ನಡೆಸಲು ಸಿದ್ಧತೆ ಆರಂಭಿಸಲಾಗಿದೆ. ಸಮ್ಮೇಳನದಲ್ಲಿ ಯಾರನ್ನೂ ನಿರ್ಲಕ್ಷಿಸುವ ಪ್ರಶ್ನೆಯೇ ಇಲ್ಲ. ಸಂಘ-ಸಂಸ್ಥೆಗಳು, ಕನ್ನಡ ಸಂಘಟನೆಗಳು, ಸಾಹಿತಿಗಳು, ಕನ್ನಡಾಭಿಮಾನಿಗಳು, ಸಾಹಿತ್ಯಾಭಿಮಾನಿಗಳು, ಜನಪ್ರತಿನಿಧಿಗಳು ಸೇರಿದಂತೆ ಎಲ್ಲರನ್ನೊಳಗೊಂಡಂತೆ ಸಮ್ಮೇಳನ ಯಶಸ್ವಿಗೆ ಶ್ರಮಿಸಲಾಗುವುದು.

–ಸಿ.ಕೆ.ರವಿಕುಮಾರ, ಅಧ್ಯಕ್ಷ, ಜಿಲ್ಲಾ ಕಸಾಪ, ಮಂಡ್ಯ

"ಜಿಲ್ಲೆಗೆ 29 ವರ್ಷಗಳ ಬಳಿಕ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಬಂದಿರುವುದು ನಿಜಕ್ಕೂ ಸಂತಸ. ಆದರೆ ಸಮ್ಮೇಳನ ಆಯೋಜನೆ ಪಾರದರ್ಶಕವಾಗಿ ನಡೆದು, ಸರ್ಕಾರ ಹಾಗೂ ಸಂಘ, ಸಂಸ್ಥೆಗಳಿಂದ ಸಂಗ್ರಹವಾಗಿ ಖರ್ಚು ಮಾಡುವ ಹಣವನ್ನು ಪಾರದರ್ಶಕವಾಗಿ ಕಮಿಟಿಗೆ ಹಾಗೂ ಜಿಲ್ಲೆ ಜನಕ್ಕೆ ಲೆಕ್ಕ ಕೊಡಬೇಕು. ಯಾವುದೇ ಗೊಂದಲಗಳಾಗಬಾರದು. ಉಳಿದ ಹಣದಲ್ಲಿ ಸಮ್ಮೇಳನ ನಡೆದ ನೆನಪಿನಾರ್ಥ 1994ರ ಸಮ್ಮೇಳನದ ಮಾದರಿಯಂತೆ ಸಭಾಂಗಣ, ಕನ್ನಡ ಚಟುವಟಿಕೆ, ಮಹನೀಯರ ಪ್ರತಿಮೆ ನಿರ್ಮಾಣಕ್ಕೆ ಬಳಕೆಯಾಗಬೇಕು.

– ಪ್ರೊ.ಜಿ.ಜಯಪ್ರಕಾಶ್‌ಗೌಡ, ಹಿರಿಯ ಸಾಹಿತಿ ಹಾಗೂ ಮಾಜಿ ಅಧ್ಯಕ್ಷ, ಜಿಲ್ಲಾ ಕಸಾಪ, ಮಂಡ್ಯ

● ಎಂ.ಕೆ.ಮೋಹನ್‌ರಾಜ್

ಮಂಡ್ಯ, ಜ.10– ರಾಜ್ಯದಲ್ಲೇ ಅತಿ ಹೆಚ್ಚು ಕನ್ನಡ ಮಾತನಾಡುವ ಹೆಗ್ಗಳಿಕೆ ಹೊಂದಿರುವ ಸಕ್ಕರೆ ನಾಡು ಮಂಡ್ಯ ಜಿಲ್ಲೆಗೆ 29 ವರ್ಷಗಳ ಬಳಿಕ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಆಯೋಜಿಸುವ ಅವಕಾಶ ಒದಗಿ ಬಂದಿದ್ದು, ಜಿಲ್ಲೆಯ ಜನ ಹರ್ಷ ವ್ಯಕ್ತಪಡಿಸಿದ್ದಾರೆ.

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಏಲಕ್ಕಿ ನಗರಿ ಹಾವೇರಿಯಲ್ಲಿ ಮುಗಿದ ಬಳಿಕ ನಡೆದ ಕಸಾಪ ಪದಾಧಿಕಾರಿಗಳ ಸಭೆಯಲ್ಲಿ 17 ಮತ ಪಡೆದ ಮಂಡ್ಯ ಜಿಲ್ಲೆಗೆ ಮುಂದಿನ ವರ್ಷ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆತಿಥ್ಯ ದೊರೆಯಿತು. ಹೀಗಾಗಿ ಮಂಡ್ಯ ಜಿಲ್ಲಾ ಕಸಾಪ ಅಧ್ಯಕ್ಷ ಸಿ.ಕೆ.ರವಿಕುಮಾರ್‌ಗೆ ರಾಷ್ಟ್ರಧ್ವಜ, ಕನ್ನಡ ಧ್ವಜ ಹಾಗೂ ಕಸಾಪ ಧ್ವಜ ಹಸ್ತಾಂತರಿಸಲಾಗಿದೆ.

1974 ರಲ್ಲಿ 48ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮೊದಲ ಬಾರಿಗೆ ಮಂಡ್ಯದಲ್ಲಿ ನಡೆಸಲಾಗಿತ್ತು. ಈ ಸಮ್ಮೇಳನದ ಮೊದಲ ಮಹಿಳಾ ಸರ್ವಾಧ್ಯಕ್ಷೆಯಾಗಿ ಜಯದೇವಿ ತಾಯಿಲಿಗಾಡೆ ಅಧ್ಯಕ್ಷತೆ ವಹಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರ ಕೆ.ಟಿ.ಚಂದು ಮಂಡ್ಯ ಜಿಲ್ಲಾ ಕಸಾಪದ ಅಧ್ಯಕ್ಷರಾಗಿದ್ದರು. ಸ್ವಾಗತ ಸಮಿತಿ ಅಧ್ಯಕ್ಷರಾಗಿ ಎಂ.ಲಿಂಗಯ್ಯ ಹಾಗೂ ನಿತ್ಯಸಚಿವ ಕೆ.ವಿ.ಶಂಕರಗೌಡ ಪೋಷಕರಾಗಿದ್ದರು. ಅಂದು ಮುಖ್ಯಮಂತ್ರಿಯಾಗಿದ್ದ ಡಿ.ದೇವರಾಜ ಅರಸು ಅಕ್ಷರ ಜಾತ್ರೆ ಉದ್ಘಾಟಿಸಿದರೆ, ಸಚಿವರಾಗಿದ್ದ ಎಸ್.ಎಂ.ಕೃಷ್ಣ ಸಮ್ಮೇಳನದ ಜವಾಬ್ದಾರಿ ಹೊತ್ತಿದ್ದರು.



1994ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ.

1994ರಲ್ಲಿ ಎರಡನೇ ಬಾರಿಗೆ ಮತ್ತೆ ಸಕ್ಕರೆ ನಾಡು ಮಂಡ್ಯಕ್ಕೆ 63ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಒಲಿದು ಬಂತು. ಆಗ ಸಾಹಿತಿ ಚದುರಂಗ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಜಿಲ್ಲಾ ಕಸಾಪ ಅಧ್ಯಕ್ಷ ಜಿ.ಟಿ.ವೀರಪ್ಪ ಕೊಪ್ಪಳದಲ್ಲಿ ನಡೆದ ಸಮ್ಮೇಳನದಲ್ಲಿ ಮುಂದಿನ ಸಮ್ಮೇಳನ ಮಂಡ್ಯದಲ್ಲಿ ನಡೆಸಲು ಅವಿರತ ಶ್ರಮಿಸಿದ್ದರು. ಅಂದು ಸಂಸದರಾಗಿದ್ದ ಜಿ.ಮಾದೇಗೌಡ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರೆ, ವಿಧಾನ ಸಭೆ ಸ್ಪೀಕರ್ ಎಸ್.ಎಂ.ಕೃಷ್ಣ ಪ್ರಧಾನ ಪೋಷಕರಾಗಿದ್ದರು.

ಮಂಡ್ಯದ ಸರ್‌ಎಂವಿ ಕ್ರೀಡಾಂಗಣದಲ್ಲಿ ನಡೆದ 3 ದಿನಗಳ ಸಾಹಿತ್ಯ ಸಮ್ಮೇಳನದಲ್ಲಿ ಸಂಭ್ರಮ ಆವರಿಸಿತ್ತು. ಕನ್ನಡ ಮಾತನಾಡುವ ಜಿಲ್ಲೆಯಲ್ಲಿ ಕನ್ನಡ ಕಂಪು ಇಡೀ ರಾಜ್ಯಕ್ಕೆ ಪಸರಿಸಿತ್ತು. ಈ ಸಮ್ಮೇಳನಕ್ಕಾಗಿ 42 ಲಕ್ಷ ರೂ. ಸಂಗ್ರಹಿಸಲಾಗಿತ್ತು. ಇದರಲ್ಲಿ 22 ಲಕ್ಷ ರೂ.ಗಳನ್ನು ಸಮ್ಮೇಳನಕ್ಕೆ ಖರ್ಚು ಮಾಡಿ, ಉಳಿದ 20 ಲಕ್ಷ ರೂ.ಗಳನ್ನು ವಿವಿಧ ಅಭಿವೃದ್ಧಿಗಾಗಿ ಬಳಸಲಾಗಿತ್ತು. ಉಳಿದ ಹಣದಲ್ಲಿ 6.25 ಲಕ್ಷ ರೂ.ಗಳಲ್ಲಿ ಜಿಲ್ಲಾ ಸಾಹಿತ್ಯ ಪರಿಷತ್ ಕಚೇರಿ ಕಟ್ಟಡ ನಿರ್ಮಿಸಲಾಯಿತು. ನಗರದ ಕಲಾಮಂದಿರ ನಿರ್ಮಾಣಕ್ಕೆ 8.25 ಲಕ್ಷ ರೂ., ಕುವೆಂಪು ಪ್ರತಿಮೆ ನಿರ್ಮಾಣಕ್ಕೆ 4 ಲಕ್ಷ ರೂ., ಜಾನಪದ ಲೋಕಕ್ಕೆ 1 ಲಕ್ಷ ರೂ. ನೀಡಲಾಗಿತ್ತು.

ಸಮ್ಮೇಳನದಲ್ಲಿ ಮೊದಲ ಬಾರಿಗೆ ಸುವರ್ಣ ಮಂಡ್ಯ ಹಾಗೂ ಸಿರಿಯೊಡಲು ಎಂಬ ಪುಸ್ತಕ ಸೇರಿದಂತೆ 13 ಪುಸ್ತಕಗಳನ್ನು ಬಿಡುಗಡೆ ಮಾಡಲಾಗಿತ್ತು. ಅಲ್ಲದೆ, ಸಮ್ಮೇಳನದಲ್ಲಿ ನಿರೀಕ್ಷೆಗೂ ಮೀರಿ ಕನ್ನಡಾಭಿಮಾನಿಗಳು ಭಾಗವಹಿಸಿದ್ದರು ಎಂದು ಸಮ್ಮೇಳನದ ಗತವೈಭವವನ್ನು ಆಗಿನ ಜಿಲ್ಲಾಧ್ಯಕ್ಷ ಪ್ರೊ.ಜಿ.ಟಿ.ವೀರಪ್ಪ ಮೆಲುಕು ಹಾಕಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಸ್ಪರ್ಧೆ ಖಚಿತ: ತಗ್ಗಹಳ್ಳಿ ವೆಂಕಟೇಶ್



ಮಂಡ್ಯ, ಜ.10– ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ 3 ಪಕ್ಷಗಳ ಮುಖಂಡರು ನನ್ನ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾರೆ. ಕ್ಷೇತ್ರದ ಜನತೆ ಅದಕ್ಕೆ ಮನ್ನಣೆ ನೀಡಬೇಡಿ. ಮುಂಬರುವ ಚುನಾವಣೆಯಲ್ಲಿ ನನ್ನ ಸ್ಪರ್ಧೆ ಖಚಿತ ಎಂದು ಜಿಪಂ ಮಾಜಿ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ರವೀಂದ್ರ ಶ್ರೀಕಂಠಯ್ಯ ಹಾಗೂ ಬೆಂಬಲಿಗರು ಪಕ್ಷದ ವರಿಷ್ಠ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಸಿಎಂ ಕುಮಾರಸ್ವಾಮಿ ಮಾತನಾಡಿ ತಗ್ಗಹಳ್ಳಿ ವೆಂಕಟೇಶ್ ಮನವೊಲಿಸಲಿದ್ದಾರೆ. ಅವರು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ವದಂತಿ ಹಬ್ಬಿಸಿದ್ದಾರೆ. ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಹಾಗೂ ಬಿಜೆಪಿ ಮುಖಂಡ ಸಚ್ಚಿದಾನಂದ ಸಹ ತಗ್ಗಹಳ್ಳಿ ವೆಂಕಟೇಶ್‌ನವರಿಗೆ ಬೆಂಬಲ ಸೂಚಿಸುತ್ತಾರೆ ಎಂದು ಹೇಳುವ ಮೂಲಕ ಕ್ಷೇತ್ರದಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಕಳೆದ 30 ವರ್ಷಗಳಿಂದ ಜೆಡಿಎಸ್‌ನ ನಿಷ್ಠಾವಂತ ಕಾರ್ಯಕರ್ತನಾಗಿ ಪಕ್ಷಕ್ಕಾಗಿ ದುಡಿಯುತ್ತಿದ್ದೇನೆ. ಹಾಲಿ ಶಾಸಕ ರವೀಂದ್ರ ಶ್ರೀಕಂಠಯ್ಯ ಹಾಗೂ ರಮೇಶ್ ಬಂಡಿಸಿದ್ದೇಗೌಡರ ಗೆಲುವಿನಲ್ಲಿ ನನ್ನ ಪರಿಶ್ರಮವಿದೆ. ಜೆಡಿಎಸ್ ವರಿಷ್ಠರು ಅವಕಾಶ ಕಲ್ಪಿಸಲಿದ್ದಾರೆ ಎಂಬ ವಿಶ್ವಾಸವಿದ್ದು, ಬಿ.ಫಾರಂ ಸಿಗಲಿ ಅಥವಾ ಸಿಗದಿರಲಿ ನನ್ನ ಸ್ಪರ್ಧೆ ಖಚಿತ ಎಂದು ಸ್ಪಷ್ಟಪಡಿಸಿದರು. ನಾನು ಹಣಕ್ಕೆ ಮಾರಾಟವಾಗುವವನಲ್ಲ. ತತ್ವ ಸಿದ್ಧಾಂತ, ಮಾನವೀಯ ಮೌಲ್ಯ ಅಳವಡಿಸಿಕೊಂಡು ಜನಸೇವೆ ಮಾಡಿಕೊಂಡು ಹಂತ-ಹಂತವಾಗಿ ಬೆಳೆದಿದ್ದೇನೆ. ನನಗೆ ಯಾವುದೇ ರಾಜಕೀಯ ಹಿನ್ನೆಲೆ ಇಲ್ಲ. ಸಾಮಾನ್ಯ ಜನರ ನಡುವೆ ಬೆಳೆದವನು ನಾನು. ನಿಮ್ಮ ಹಾಗೆ ಕುಟುಂಬ ರಾಜಕಾರಣದ ಹಿನ್ನೆಲೆಯಲ್ಲಿ ಬಂದವನಲ್ಲ. ಕ್ಷೇತ್ರದ 3 ಪಕ್ಷಗಳ ಸಂಭವನೀಯ ಅಭ್ಯರ್ಥಿಗಳು ನನ್ನೊಟ್ಟಿಗೆ ಪಕ್ಷೇತರವಾಗಿ ಸ್ಪರ್ಧಿಸಿ ತಮ್ಮ ಸಾಮರ್ಥ್ಯ ಸಾಬೀತುಪಡಿಸಲಿ ಎಂದ ಅವರು, ನಿಮಗಿಂತ ಒಂದು ಮತ ಕಡಿಮೆ ಪಡೆದರೆ, ರಾಜಕೀಯ ನಿವೃತ್ತಿ ಘೋಷಿಸುವುದಾಗಿ ಸವಾಲು ಹಾಕಿದರು.

ಕ್ಷೇತ್ರದಲ್ಲಿ 2 ಕುಟುಂಬಗಳ ರಾಜಕೀಯ ಪಾರುಪತ್ಯದಿಂದ ಕ್ಷೇತ್ರದ ಜನ ಬೇಸತ್ತಿದ್ದಾರೆ. ಒಂದೇ ಕುಟುಂಬದ ತಲಾ ಮೂವರು ಶಾಸಕರಾಗಿದ್ದಾರೆ. ಇದರಿಂದ ಜನತೆ ಹೊಸತನದ ನಾಯಕತ್ವಕ್ಕೆ ಹಂಬಲಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಾನೂ ಯಾವುದೇ ಆಸೆ, ಆಮಿಷಕ್ಕೆ ಬಲಿಯಾಗದೆ ಚುನಾವಣೆಗೆ ಸ್ಪರ್ಧಿಸುವುದು ಖಚಿತ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ತಾಪಂ ಮಾಜಿ ಸದಸ್ಯ ಮುರುಳಿ, ಜೆಡಿಎಸ್ ಮುಖಂಡರಾದ ಸುರೇಶ್, ಸಿದ್ದರಾಜು, ಜಗದೀಶ್, ಮಂಜು ಇತರರಿದ್ದರು.

ರಸ್ತೆ ಅಭಿವೃದ್ಧಿ, ಸಂಜೀವಿನಿ ಭವನಕ್ಕೆ ಭೂಮಿ ಪೂಜೆ

ಶ್ರೀರಂಗಪಟ್ಟಣ, ಜ.10– ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಇತರೆ ಪಕ್ಷಗಳಂತೆ ಹಿಟ್ ಅಂಡ್ ರನ್ ಮಾಡುವವರಲ್ಲ. ಅವರು ಏನೇ ಮಾಡಿದರೂ ಆ ಬಗ್ಗೆ ತಿಳಿದು ಮಾತನಾಡುತ್ತಾರೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ತಿಳಿಸಿದರು.

ತಾಲೂಕಿನ ಕಡತನಾಳು ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಹಾಗೂ 17.5 ಲಕ್ಷ ರೂ. ವೆಚ್ಚದ ಸಂಜೀವಿನಿ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಹೆಚ್‌ಡಿಕೆ ವಿರುದ್ಧದ ಶಾಸಕ ಮುನಿರತ್ನ ಅವರ ಹೇಳಿಕೆಗೆ ತಿರುಗೇಟು ನೀಡಿದರು. ಅಲ್ಲದೇ ಕುಮಾರಣ್ಣನ ಬಗ್ಗೆ ಮಾತನಾಡುವ ಮುನ್ನ ಅವರು ತಮ್ಮ ಹಿನ್ನೆಲೆ ಅರಿಯಬೇಕು ಎಂದರು.

ಸ್ಯಾಂಟ್ರೋ ರವಿ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಶಾಸಕರು, ಸ್ಯಾಂಟ್ರೋ ರವಿ ವಿರುದ್ಧ ತನಿಖೆ ನಡೆಸಬೇಕಿದ್ದ ಸರ್ಕಾರ ಪ್ರಕರಣ ಮುಚ್ಚಿ ಹಾಕಲು ಯತ್ನಿಸುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದರು.

ಸಮಾಜ ಸೇವೆಗಾಗಿ ಮಾಜಿ ಪ್ರಧಾನಿ ದೇವೇ ಗೌಡರ ಇಡೀ ಕುಟುಂಬ ರಾಜಕೀಯ ಕ್ಷೇತ್ರದಲ್ಲಿದ್ದು, ಹೆಚ್.ಡಿ.ಕುಮಾರಸ್ವಾಮಿ ಅವರು ಸಮಾಜದ ತಪ್ಪುಗಳನ್ನು ತಿದ್ದುವ ಕೆಲಸ ಮಾಡುತ್ತಿದ್ದಾರೆ. ಆದರೆ ಅವರ ಬಗ್ಗೆ ಮಾತನಾಡುವ ನೈತಿಕ ಹಕ್ಕು ಸಚಿವ ಎಸ್.ಟಿ.ಸೋಮಶೇಖರ್ ಅವರಿಗಿಲ್ಲ ಎಂದರು.

ಬಿಜೆಪಿ ಮಂತ್ರಿಯೊಬ್ಬರ ಹಗರಣವನ್ನು ಕುಮಾರಸ್ವಾಮಿ ಬಿಚ್ಚಿಟ್ಟಾಗ ಸದನದಲ್ಲಿ ಯಾವೊಬ್ಬ ಶಾಸಕನೂ ತುಟಿಕ್ ಪಿಟಿಕ್ ಎನ್ನಲಿಲ್ಲ. ಅವರದೇ ಪಕ್ಷದ ಸಚಿವರೂ ಸಹ ಕುಮಾರಣ್ಣನ ಕಾರ್ಯವೈಖರಿ ಶ್ಲಾಘಿಸಿದರು. ಇದು ಬಿಜೆಪಿ ತಲೆ ತಗ್ಗಿಸುವ ವಿಚಾರ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗಿನ ವಾತಾವರಣವೇ ಬೇರೆ. ಇವಾಗಿನ ವಾತಾವರಣವೇ ಬೇರೆ. ದಿನನಿತ್ಯ ಒಂದಿಲ್ಲೊಂದು ವಿವಾದ ಬಿಜೆಪಿಗೆ ಸುತ್ತಿಕೊಳ್ಳುತ್ತಿದ್ದು ಅವರಿಗೆ ಅಧಿಕಾರ ನಡೆಸಲು ಯೋಗ್ಯತೆಯಿಲ್ಲ ಎಂದು ಕಿಡಿಕಾರಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮೇಳನ ಮಂಡ್ಯದಲ್ಲಿ ನಡೆಯುತ್ತಿರುವುದು ಸಂತಸ. ಕಳೆದ ಮೂರ್‍ನಾಲ್ಕು ವರ್ಷದಿಂದ ಜಿಲ್ಲೆ ಶ್ರೀಮಂತವಾಗಿ ಬೆಳೆಯುತ್ತಿದ್ದು, ನಾವೆಲ್ಲರೂ ಸೇರಿ ಜಿಲ್ಲೆಯಲ್ಲಿ ನಡೆಯುವ ಅಕ್ಷರ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸೋಣ ಎಂದರು.



ಇದೇ ವೇಳೆ ಗ್ರಾಮದಲ್ಲಿ ಒಂದೇ ಗುಡಿಸಲಿನಲ್ಲಿ ವಾಸಿಸುತ್ತಿದ್ದ ಮೂವರು ಮಹಿಳೆಯರ ಮನೆ ಮೇಲ್ಛಾವಣಿಗೆ ವೈಯಕ್ತಿಕ ಧನ ಸಹಾಯ ನೀಡಿ, ಮನೆ ದುರಸ್ತಿಗೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ತಾಲೂಕಿನ ಅಚ್ಚಪ್ಪನಕೊಪ್ಪಲು ಗ್ರಾಮದಲ್ಲಿ ನೂತನ ಪ್ರಾಥಮಿಕ ಆರೋಗ್ಯ ಉಪಕೇಂದ್ರವನ್ನು ಶಾಸಕರು ಉದ್ಘಾಟಿಸಿದರು. ಈ ವೇಳೆ ಅಧಿಕಾರಿಗಳು, ಗುತ್ತಿಗೆದಾರರ ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಶತಾಯುಷಿ ಚಿಕ್ಕಮ್ಮ ನಿಧನ



ಕೆ.ಆರ್.ಪೇಟೆ, ಜ.10– ತಾಲೂಕಿನ ಚೌಡೇನಹಳ್ಳಿ ಗ್ರಾಮದ ನಿವಾಸಿ ಲೇಟ್ ಪೂಜಾರಿ ಕಿಕ್ಕೇರಿಗೌಡರ ಪತ್ನಿ ಚಿಕ್ಕಮ್ಮ (102) ಮಂಗಳವಾರ ನಿಧನರಾದರು. ಮೃತರು ಇಬ್ಬರು ಪುತ್ರರು, 6 ಪುತ್ರಿಯರು, 38 ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಜ.11 ರಂದು ಮಧ್ಯಾಹ್ನ 12 ಗಂಟೆಗೆ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮದ್ದೂರು ಬಳಿ ಮಹಿಳೆ ಹತ್ಯೆಗೈದು, ಚಿನ್ನಾಭರಣ ಕಳವು



ಮದ್ದೂರು, ಜ.10– ಮನೆ ಬಾಗಿಲು ಮುರಿದು ಒಳನುಗ್ಗಿರುವ ದುಷ್ಕರ್ಮಿಗಳು ಮಹಿಳೆ ಹತ್ಯೆಗೈದು, ಬಳಿಕ ಶವ ಸುಟ್ಟುಹಾಕಿ ಚಿನ್ನಾಭರಣ ದೋಚಿ ಪರಾರಿಯಾಗಿರುವ ಘಟನೆ ತಾಲೂಕಿನ ಬೆಸಗರಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಮಾರಸಿಂಗನಹಳ್ಳಿಯಲ್ಲಿ ಸೋಮವಾರ ತಡರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ಲೇ.ಶಿವಕುಮಾರ ಆರಾಧ್ಯ ಅವರ ಪತ್ನಿ ಪ್ರೇಮ (42) ಹತ್ಯೆಗೊಳಗಾದವರು. ಮೃತರ ಪತಿ 8 ವರ್ಷಗಳ ಹಿಂದೆ ಮೃತಪಟ್ಟಿದ್ದು, ಪುತ್ರ ಶ್ರೀಶೈಲ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ. ಹಲವು ವರ್ಷಗಳಿಂದ ಮನೆಯಲ್ಲಿ ಒಬ್ಬರೇ ವಾಸವಿದ್ದ ಪ್ರೇಮ ಗ್ರಾಮದಲ್ಲಿ ಸಣ್ಣಪುಟ್ಟ ಲೇವಾದೇವಿ ವ್ಯವಹಾರ ನಡೆಸುತ್ತಿದ್ದರು ಎನ್ನಲಾಗಿದೆ. ಸೋಮವಾರ ರಾತ್ರಿ ಮನೆಯಲ್ಲಿ ಪ್ರೇಮ ಮಲಗಿದ್ದ ವೇಳೆ ದುಷ್ಕರ್ಮಿಗಳು ಮನೆ ಬಾಗಿಲು ಮುರಿದು ಒಳನುಗ್ಗಿ ಆಕೆಯನ್ನು ಹತ್ಯೆಗೈದಿದ್ದಾರೆ. ಬಳಿಕ ಶವಕ್ಕೆ ಬೆಂಕಿ ಹಚ್ಚಿ ಮನೆಯಲ್ಲಿದ್ದ 80 ಗ್ರಾಂ ಚಿನ್ನಾಭರಣ ಮತ್ತು 250 ಗ್ರಾಂ ಬೆಳ್ಳಿ, ಲ್ಯಾಪ್‌ಟಾಪ್ ಸೇರಿದಂತೆ ಇನ್ನಿತರೆ ಪದಾರ್ಥಗಳನ್ನು ದೋಚಿ ಪರಾರಿಯಾಗಿದ್ದಾರೆ.

ಬೆಂಕಿ ಹಚ್ಚಿದ ಪರಿಣಾಮ ಶವ ಅರ್ಧಂಬರ್ಧ ಬೆಂಕಿಗಾಹುತಿಯಾಗಿದ್ದು, ಮುಂಜಾನೆ ಪ್ರಕರಣ ಬೆಳಕಿಗೆ ಬಂದಿದೆ. ವಿಷಯ ತಿಳಿದು ಶ್ವಾನದಳ, ಬೆರಳಚ್ಚು ತಜ್ಞರೊಂದಿಗೆ ಸ್ಥಳಕ್ಕಾಗಮಿಸಿದ ಎಸ್ಪಿ ಯತೀಶ್, ಮಳವಳ್ಳಿ ಡಿವೈಎಸ್‌ಪಿ ಎನ್.ನವೀನ್‌ಕುಮಾರ್, ವೃತ್ತ ನಿರೀಕ್ಷಕ ಮನೋಜ್ ಕುಮಾರ್ ಪರಿಶೀಲನೆ ನಡೆಸಿದರು. ಮೃತಳ ಪುತ್ರ ಶ್ರೀಶೈಲ ನೀಡಿದ ದೂರಿನ ಮೇರೆಗೆ ಬೆಸಗರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ತಾಯಿ–ಮಗು ಸಾವು

ಬಳಿ ಮೆಟ್ರೋ ಕಾಮಗಾರಿ ವೇಳೆ ಪಿಲ್ಲರ್‌ಗೆ ನಿಲ್ಲಿಸಿದ್ದ ಕಬ್ಬಿಣದ ರಾಡ್‌ಗಳು ಬೈಕ್‌ನಲ್ಲಿ ಪ್ರಯಾಣಿಸುತ್ತಿದ್ದ ದಂಪತಿ ಹಾಗೂ ಮಗುವಿನ ಮೇಲೆ ಬಿದ್ದವು. ಇದರಿಂದಾಗಿ ಗಂಭೀರವಾಗಿ ಗಾಯಗೊಂಡಿದ್ದ ತೇಜಸ್ವಿನಿ (35) ಹಾಗೂ ವಿಹಾನ್ (2 ವರ್ಷ 6 ತಿಂಗಳು) ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ತಂದೆ ಹಾಗೂ ಮಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಜುಂ ಪರ್ವೇಜ್, ಇದೊಂದು ದುರಾದೃಷ್ಟಕರ ಘಟನೆಯಾಗಿದ್ದು, ಮೃತರ ಕುಟುಂಬಸ್ಥರಿಗೆ 20 ಲಕ್ಷ ಪರಿಹಾರ ಒದಗಿಸಲಾಗುವುದು ಎಂದರು. ಮೆಟ್ರೋ ನಿರ್ಮಾಣದಲ್ಲಿ ಸಾಧ್ಯವಾದಷ್ಟು ಅತ್ಯಂತ ಹೆಚ್ಚಿನ ಗುಣಮಟ್ಟವನ್ನು ಅನುಸರಿಸುತ್ತಿದ್ದೇವೆ. ಘಟನೆ ಸಂಬಂಧ ವಿಸ್ತೃತವಾಗಿ ತನಿಖೆ ನಡೆಸಲಾಗುವುದು, ಒಂದು ವೇಳೆ ತಾಂತ್ರಿಕ ದೋಷ ಅಥವಾ ಕಾರ್ಮಿಕರ ತಪ್ಪಿನಿಂದಾದ ಅವಘಡ ಎಂದು ಕಂಡುಬಂದಲ್ಲಿ ಮುಂದೆ ಇಂತಹ ಘಟನೆ ಸಂಭವಿಸದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು. ಧಾರವಾಡದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಬಸವರಾಜ ಬೊಮ್ಮಾಯಿ, ಮೃತರ ಕುಟುಂಬಸ್ಥರಿಗೆ ತಲಾ 10 ಲಕ್ಷ ರೂಪಾಯಿ ಪರಿಹಾರ ನೀಡಲಾಗುವುದು ಹಾಗೂ ಘಟನೆ ಸಂಬಂಧ ಸಮಗ್ರವಾಗಿ ತನಿಖೆ ನಡೆಸಲಾಗುವುದು ಎಂದು ಹೇಳಿದರು.

ಇದು 40% ಸರ್ಕಾರದ ಫಲಿತಾಂಶ: ಮೆಟ್ರೋ ಪಿಲ್ಲರ್ ದುರಂತ ಸಂಬಂಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸರ್ಕಾರದ ಮೇಲೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದು 40% ಕಮಿಷನ್ ಸರ್ಕಾರದ ಫಲಿತಾಂಶವಾಗಿದೆ. ಸರ್ಕಾರದ ಅಭಿವೃದ್ಧಿ ಕೆಲಸ ಕಾರ್ಯಗಳಲ್ಲಿ ಗುಣಮಟ್ಟವಿಲ್ಲ. ಸರ್ಕಾರದ ಸಚಿವರು, ಶಾಸಕರು, ಅಧಿಕಾರಿಗಳು ತಾವು ದುಡ್ಡು ಮಾಡಿಕೊಂಡು ಜನರಿಗೆ ಕಳಪೆ ಮಟ್ಟದ ಕೆಲಸ ಮಾಡಿಕೊಡುತ್ತಾರೆ. ಇದು ಸರ್ಕಾರದ ದಿವ್ಯ ನಿರ್ಲಕ್ಷ್ಯವಲ್ಲದೆ ಇನ್ನೇನು, ಸಾಮಾನ್ಯ ಜನರ ಜೀವದ ಜೊತೆ ಸರ್ಕಾರ ಚೆಲ್ಲಾಟವಾಡುತ್ತಿದೆ ಎಂದು ಆರೋಪಿಸಿದ್ದಾರೆ.

ಐವರ ವಿರುದ್ಧ ಎಫ್‌ಐಆರ್: ಮೆಟ್ರೋ ಪಿಲ್ಲರ್‌ಕುಸಿದು ತಾಯಿ–ಮಗು ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಗೋವಿಂದಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ಈ ಸಂಬಂಧ ಐವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಈ ಸಂಬಂಧ ಸೈಟ್ ಇಂಜಿನಿಯರ್ಸ್, ಕಂಟ್ರಾಕ್ಟರ್ಸ್, BMRCL ಆಫೀಸರ್ಸ್, ಸೈಟ್ ಇನ್‌ಚಾರ್ಜ್ ಆಫೀಸರ್ಸ್ ಸೇರಿದಂತೆ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಮೈಸೂರು ರಾಜವಂಶಸ್ಥರ ತಡೆ

ವಿಶ್ವಾಸಕ್ಕೆ ತೆಗೆದುಕೊಳ್ಳದೇ ಕಾಮಗಾರಿ ಆರಂಭಿಸಿರುವುದು ರಾಜಮನೆತನದವರನ್ನು ಕೆರಳಿಸಿದೆ. ಹಾಗಾಗಿ ವಕೀಲರ ಮೂಲಕ ಕಾಮಗಾರಿಗೆ ತಡೆಯೊಡ್ಡಲಾಗಿದೆ ಎಂದು ಹೇಳಲಾಗುತ್ತಿದೆ. ಚಾಮುಂಡಿಬೆಟ್ಟದ ನಿವಾಸಿಗಳಿಗೆ ರಾಜಮನೆತನದವರ ಮೇಲೆ ಅಪಾರ ಗೌರವವಿದ್ದು, ದೇವಿಕೆರೆ ಅಭಿವೃದ್ಧಿ ಹಾಗೂ ಬೆಟ್ಟಕ್ಕೆ ಕುಡಿಯುವ ನೀರು ಸರಬರಾಜು ವಿಚಾರದಲ್ಲಿ ಸಹಕಾರ ನೀಡುವಂತೆ ರಾಜವಂಶಸ್ಥರನ್ನು ಕೋರಲು ಬೆಟ್ಟದ ಗ್ರಾಮಸ್ಥರು ನಿರ್ಧರಿಸಿದ್ದಾರೆ.

ಪೈಪ್‌ಲೈನ್‌ಗೂ ಅನುಮತಿ ಕೋರಿ ಮನವಿ: ಚಾಮುಂಡಿಬೆಟ್ಟ ಪ್ರಸಿದ್ಧ ಧಾರ್ಮಿಕ ಹಾಗೂ ಪ್ರವಾಸಿ ತಾಣವಾಗಿದ್ದು, ನಿತ್ಯವೂ ಅಪಾರ ಪ್ರಮಾಣದಲ್ಲಿ ಭಕ್ತರು ಹಾಗೂ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಆದರೆ, ಭಕ್ತರು, ಪ್ರವಾಸಿಗರಲ್ಲದೆ ಬೆಟ್ಟದ ನಿವಾಸಿಗಳಿಗೆ ಸಮರ್ಪಕ ಕುಡಿಯುವ ನೀರು ಸರಬರಾಜು ಸಾಧ್ಯವಾಗಿಲ್ಲ. ಈ ಹಿಂದೆ ಇದ್ದ ಕುಡಿಯುವ ನೀರು ಪೈಪ್‌ಲೈನ್ ಚಿಕ್ಕದಾಗಿದ್ದು, ಜನಸಂಖ್ಯೆ ಹಾಗೂ ಪ್ರವಾಸಿಗರ ಸಂಖ್ಯೆಗೆ ಅನುಗುಣವಾಗಿ ಬೆಟ್ಟಕ್ಕೆ ಕುಡಿಯುವ ನೀರು ಸರಬರಾಜು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕಳೆದ 6 ವರ್ಷದ ಹಿಂದೆ 6 ಕೋಟಿ ರೂ. ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆ ಆರಂಭಿಸಲಾಗಿದ್ದು, ಬೆಟ್ಟದ ತಪ್ಪಲಿನಿಂದ ನಂದಿವರೆಗೂ ಹೊಸದಾಗಿ ಪೈಪ್‌ಲೈನ್ ಅಳವಡಿಸಲಾಗಿದೆ. ಆದರೆ, ಮುಂದೆ ಈ ಕಾಮಗಾರಿ ಮುಂದುವರೆಸಲು ರಾಜವಂಶಸ್ಥರಿಗೆ ಸೇರಿದ ರಾಜೇಂದ್ರ ವಿಲಾಸ ಅರಮನೆಗೆ (ಬೇಸಿಗೆ ಅರಮನೆ) ಸೇರಿದ ಜಾಗದ ಮೂಲಕವೇ ಹಾದು ಹೋಗಬೇಕಾಗಿದೆ. ಹಳೆಯ ಪೈಪ್‌ಲೈನ್ ಕೂಡ ಬೇಸಿಗೆ ಅರಮನೆಯ ಆವರಣದಲ್ಲೇ ಹಾದು ಹೋಗಿದೆ. ಹೊಸ ಪೈಪ್‌ಲೈನ್ ಕಾಮಗಾರಿಗೆ ಅನುಮತಿ ನೀಡಿ, ಬೆಟ್ಟದ ನಿವಾಸಿಗಳ ನೀರಿನ ಬವಣೆ ನೀಗಿಸಲು ಸಹಕರಿಸುವಂತೆಯೂ ರಾಜವಂಶಸ್ಥರಲ್ಲಿ ಮನವಿ ಮಾಡಲು ಬೆಟ್ಟದ ನಿವಾಸಿಗಳು ಉದ್ದೇಶಿಸಿದ್ದಾರೆ.

ಎಡಿಜಿಪಿ ಅಲೋಕ್‌ಕುಮಾರ್

ನಂತರ ಅಲೋಕ್‌ಕುಮಾರ್ ಅವರಿಗೆ ಪೊಲೀಸ್ ಗೌರವ ವಂದನೆ ನೀಡಲಾಯಿತು. ಅಲ್ಲಿಂದ ನೇರವಾಗಿ ನಗರ ಪೊಲೀಸ್ ಆಯುಕ್ತರ ಕಚೇರಿಗೆ ತೆರಳಿದ ಎಡಿಜಿಪಿ ಅವರು, ಆಯುಕ್ತ ಬಿ.ರಮೇಶ್, ಎನ್.ಆರ್. ಎಸಿಪಿ ಎಂ.ಶಿವಶಂಕರ್ ಹಾಗೂ ಸಿಸಿಬಿ ಎಸಿಪಿ ಕೆ.ಸಿ.ಅಶ್ವತ್ಥನಾರಾಯಣ ಅವರೊಂದಿಗೆ ಸುಮಾರು ಒಂದು ತಾಸು ಸಭೆ ನಡೆಸಿದರು. ಈ ವೇಳೆ ಎಸ್ಪಿ ಸೀಮಾ ಲಾಟ್ಕರ್ ಸಹ ಉಪಸ್ಥಿತರಿದ್ದರು. ಸ್ಯಾಂಟ್ರೋ ರವಿ ಪತ್ನಿ ನೀಡಿರುವ ದೂರಿನ ಸಂಬಂಧ ದಾಖಲಾಗಿರುವ ಅತ್ಯಾಚಾರ ಹಾಗೂ ಎಸ್ಸಿ–ಎಸ್ಟಿ ದೌರ್ಜನ್ಯ ಕಾಯ್ದೆ, ಐಪಿಸಿ ಸೆಕ್ಷನ್ 506, 498ಎ, 504, 376, 270 ಮತ್ತು 323ರಡಿಯ ಪ್ರಕರಣ ಸಂಬಂಧ ತನಿಖೆ ಯಾವ ಹಂತದಲ್ಲಿದೆ, ಮೈಸೂರು ನಗರದಲ್ಲಿ ದಾಖಲಾಗಿರುವ ಪ್ರಕರಣಗಳ ಸಂಬಂಧ ಅಲೋಕ್ ಕುಮಾರ್ ಅವರು ಪೊಲೀಸ್ ಆಯುಕ್ತರಿಂದ ಮಾಹಿತಿ ಪಡೆದರು. ಲೈಂಗಿಕ ದೌರ್ಜನ್ಯ ಸಂತ್ರಸ್ತೆ, ಸ್ಯಾಂಟ್ರೋ ರವಿ ಪತ್ನಿ ಹಾಗೂ ಹಲ್ಲೆಗೊಳಗಾದ ಆಕೆಯ ಸಹೋದರಿಯನ್ನು ಪೊಲೀಸ್ ಆಯುಕ್ತರ ಕಚೇರಿಗೆ ಕರೆಸಿಕೊಂಡು ಒಂದೂವರೆ ತಾಸು ವಿಚಾರಣೆ ನಡೆಸಿದರು. ಈ ವೇಳೆ ಸಂತ್ರಸ್ತೆ, ತಮಗೆ ಸ್ಯಾಂಟ್ರೋ ರವಿಯಿಂದ ಕಿರುಕುಳ, ದೌರ್ಜನ್ಯ ನಡೆದ ಬಗ್ಗೆ ವಿವರಿಸಿ, ಆತನನ್ನು ಬಂಧಿಸಿ ಕಾನೂನು ರೀತಿ ಕ್ರಮ ಕೈಗೊಂಡು ತನಗೆ ನ್ಯಾಯ ಒದಗಿಸಬೇಕೆಂದು ಅಲೋಕ್ ಕುಮಾರ್ ಅವರಲ್ಲಿ ಮನವಿ ಮಾಡಿದರು. ನಂತರ ಸದರಿ ಪ್ರಕರಣ ಸಂಬಂಧ ಈಗಾಗಲೇ ತಲೆ ಮರೆಸಿಕೊಂಡಿರುವ ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿ ಪತ್ತೆಗಾಗಿ 8 ತಂಡಗಳನ್ನು ರಚಿಸಲಾಗಿದ್ದು, ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆ, ಅಂತರರಾಜ್ಯಗಳಲ್ಲೂ ಶೋಧ ಕಾರ್ಯ ನಡೆಸಲಾಗುತ್ತಿದೆ. ಆತನ ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿರುವುದರಿಂದ ಸುಳಿವು ಸಿಗುತ್ತಿಲ್ಲ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಡಿಜಿಪಿ ಅವರಿಗೆ ಮಾಹಿತಿ ನೀಡಿದರು.

ಶೀಘ್ರ ಸ್ಯಾಂಟ್ರೋ ರವಿ ಬಂಧನ

ಶೋಧನೆ ನಡೆಸುತ್ತಿದ್ದಾರೆ. ಈ ವಿಚಾರದಲ್ಲಿ ಪೊಲೀಸರಿಗೆ ಯಾರದೂ ಒತ್ತಡವಿಲ್ಲ. ಇದೇ ಕಾರಣಕ್ಕಾಗಿ ಮೈಸೂರಿಗೆ ಬಂದಿದ್ದೇನೆ. ಶೀಘ್ರ ಸ್ಯಾಂಟ್ರೋ ರವಿಯನ್ನು ಬಂಧಿಸುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈಗಾಗಲೇ ಲುಕ್‌ಔಟ್ ನೋಟಿಸ್ ಜಾರಿ ಮಾಡಲಾಗಿದ್ದು, ಆತನ ಬ್ಯಾಂಕ್ ಖಾತೆ ಜಪ್ತಿ ಮಾಡಲು ನಿರ್ಧರಿಸಲಾಗಿದೆ. ಬೆಂಗಳೂರಿನ ಆರ್.ಆರ್. ನಗರದ ಮನೆಯಲ್ಲಿ ಪರಿಶೀಲನೆ ನಡೆಸಲಾಗಿದೆ. ರಾಜ್ಯಾದ್ಯಂತ ಯಾವ ಯಾವ ಬ್ಯಾಂಕ್‌ಗಳಲ್ಲಿ ಅವನ ಖಾತೆಗಳಿವೆ, ಎಲ್ಲೆಲ್ಲಿ ಹಣಕಾಸು ವಹಿವಾಟುಗಳು ನಡೆದಿರುವ ಬಗ್ಗೆಯೂ ಪರಿಶೀಲನೆ ನಡೆಯುತ್ತಿದೆ ಎಂದು ಅಲೋಕ್ ಕುಮಾರ್ ತಿಳಿಸಿದರು.

ತನಿಖಾ ತಂಡದ ಪೊಲೀಸರು ಹೊರ ರಾಜ್ಯದಲ್ಲೂ ಸ್ಯಾಂಟ್ರೋ ರವಿ ಪತ್ತೆಗಾಗಿ ಶೋಧ ನಡೆಸುತ್ತಿದ್ದಾರೆ. ನಿತ್ಯ ಉನ್ನತ ಪೊಲೀಸ್ ಅಧಿಕಾರಿಗಳು ಮೇಲ್ವಿಚಾರಣೆ ನಡೆಸಿ ಇಲಾಖಾ ಮುಖ್ಯಸ್ಥರಿಗೆ ಪ್ರಗತಿ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಸರಿಯಾದ ದಾರಿಯಲ್ಲಿ ತನಿಖೆ ನಡೆಯುತ್ತಿರುವುದರಿಂದ ಶೀಘ್ರ ಆರೋಪಿಯನ್ನು ಬಂಧಿಸಲಾಗುವುದು ಎಂದು ಇದೇ ಸಂದರ್ಭ ಭರವಸೆ ನೀಡಿದರು.

ಸ್ಯಾಂಟ್ರೋ ರವಿ ವಿರುದ್ಧ ಸಮಗ್ರ ತನಿಖೆ

ಯಾವುದು ಅಸತ್ಯ ಎಂಬುದು ತನಿಖೆಯಿಂದಲೇ ಬಹಿರಂಗಗೊಳ್ಳುತ್ತದೆ. ಆತನ ಪತ್ತೆಗಾಗಿ ಪೊಲೀಸರು ಹತ್ತಾರು ತಂಡಗಳನ್ನು ರಚಿಸಿ, ರಾಜ್ಯ ಮತ್ತು ರಾಷ್ಟ್ರಗಳಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ. ಇದರ ಮಧ್ಯೆ ಅವನ ಆಸ್ತಿಪಾಸ್ತಿಗಳ ಬಗ್ಗೆಯು ಮಾಹಿತಿ ಸಂಗ್ರಹಿಸಿ ವಶಕ್ಕೆ ತೆಗೆದುಕೊಳ್ಳುವಂತೆ ಸೂಚಿಸಿದ್ದೇನೆ. ಈ ಹಿಂದೆ ನಾನಾ ಆರೋಪಗಳಿಗಾಗಿ ಸಿಲುಕಿ ಕಾರಾಗೃಹದಲ್ಲಿದ್ದ ಸ್ಯಾಂಟ್ರೋ ರವಿಯನ್ನು ಕಾಂಗ್ರೆಸ್ ಆಡಳಿತದಲ್ಲೇ ಬಿಡುಗಡೆಗೊಳಿಸಲಾಯಿತು. ಇದಕ್ಕೆ ಮೊದಲು ಆ ಪಕ್ಷ ಉತ್ತರ ನೀಡಲಿ ಎಂದರು.

ಪೊಲೀಸರಿಗೇಕೆ ಸಿಕ್ಕಿಲ್ಲ...!?

ಕಾನೂನಿನ ಮೇಲೆ ನನಗೆ ಸಂಪೂರ್ಣ ನಂಬಿಕೆ ಇದೆ. ನ್ಯಾಯ ಸಿಗುತ್ತದೆ ಎಂಬ ವಿಶ್ವಾಸದಿಂದ ಎಡಿಜಿಪಿ ಅವರಿಗೆ ಸ್ಯಾಂಟ್ರೋ ರವಿಯ ದಂಧೆಯ ಸಂಪೂರ್ಣ ವಿವರ ನೀಡಿ, ನನ್ನಲ್ಲಿದ್ದ ಸಾಕ್ಷ್ಯಗಳನ್ನು ಒದಗಿಸಿದ್ದೇನೆ ಎಂದರು. ಸಂತ್ರಸ್ತೆ ಮತ್ತು ಆಕೆಯ ಸಹೋದರಿಯೊಂದಿಗೆ ವಿಚಾರಣೆಗೆ ಹಾಜರಾಗಿದ್ದ ಒಡನಾಡಿ ಸೇವಾ ಸಂಸ್ಥೆಯ ಸ್ಟ್ಯಾನ್ಲಿ ಮತ್ತು ಪರಶು ಸಹ ಸ್ಯಾಂಟ್ರೋ ರವಿಯ ವೇಶ್ಯಾವಾಟಿಕೆ ದಂಧೆಯ ಫೋಟೋ, ವೀಡಿಯೋ ಸೇರಿದಂತೆ ಹಲವು ಮಾಹಿತಿಗಳನ್ನು ಎಡಿಜಿಪಿ ಅಲೋಕ್‌ಕುಮಾರ್ ಅವರಿಗೆ ಒದಗಿಸಿದರು.

ಸ್ಯಾಂಟ್ರೋ ರವಿ ಮಾತು ಕೇಳಿ ಪತ್ನಿ, ನಾದಿನಿಯ ಜೈಲಿಗೆ ಹಾಕಿದ ಇನ್ಸ್‌ಪೆಕ್ಟರ್ ಸಸ್ಪೆಂಡ್



ಬೆಂಗಳೂರು, ಜ.10– ಕುಖ್ಯಾತ ಕ್ರಿಮಿನಲ್, ರಾಜಕಾರಣಿಗಳನ್ನು, ಅಧಿಕಾರಿಗಳನ್ನು ತನ್ನ ತಾಳಕ್ಕೆ ತಕ್ಕಂತೆ ಕುಣಿಸುತ್ತಿದ್ದ ಆರೋಪ ಹೊತ್ತಿರುವ ಸ್ಯಾಂಟ್ರೋ ರವಿಯ ಜತೆಗಿನ ಸಖ್ಯಕ್ಕೆ ಕಾಟನ್‌ಪೇಟೆ ಇನ್ಸ್‌ಪೆಕ್ಟರ್ ಪ್ರವೀಣ್ ಬೆಲೆ ತೆರಬೇಕಾಗಿ ಬಂದಿದೆ. ಸ್ಯಾಂಟ್ರೋ ರವಿಯ ಮಾತು ಕೇಳಿ ಆತನ ಪತ್ನಿ ಮತ್ತು ನಾದಿನಿ ಜೈಲಿಗೆ ಹೋಗುವಂತೆ ತಂತ್ರ ಹೆಣೆದ ಇನ್ಸ್‌ಪೆಕ್ಟರ್ ಪ್ರವೀಣ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ಸ್ಯಾಂಟ್ರೋ ರವಿಗೆ ಸಹಕಾರ ನೀಡಿ ಆತನ ಪತ್ನಿ ಮತ್ತು ನಾದಿನಿ ವಿರುದ್ಧ ಸುಳ್ಳು ಕೇಸ್ ದಾಖಲಿಸಿದ್ದಕ್ಕಾಗಿ ಪ್ರವೀಣ್ ಅವರನ್ನು ಸೇವೆಯಿಂದ ಅಮಾನತು ಮಾಡಿ ಡಿಜಿಪಿ ಪ್ರವೀಣ್ ಸೂದ್ ಆದೇಶ ಹೊರಡಿಸಿದ್ದಾರೆ.

ಏನಿದು ಪ್ರಕರಣ: 2022ರ ನವೆಂಬರ್‌ನಲ್ಲಿ ಸ್ಯಾಂಟ್ರೋ ರವಿ ಎರಡನೇ ಪತ್ನಿ ಮತ್ತು ನಾದಿನಿ ತನ್ನನ್ನು ದರೋಡೆ ಮಾಡಿದ್ದಾರೆ ಎಂದು ಪ್ರಕಾಶ್ ಎಂಬುವರು ಕಾಟನ್‌ಪೇಟೆ ಠಾಣೆಯಲ್ಲಿ ದೂರು ದಾಖಲು ಮಾಡಿದ್ದರು. ಈ ಪ್ರಕರಣದಲ್ಲಿ ಸ್ಯಾಂಟ್ರೋ ರವಿ ಪತ್ನಿ ಹಾಗೂ ಆಕೆಯ ತಂಗಿಯನ್ನು ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದರು. ಇದೊಂದು ಸುಳ್ಳು ಪ್ರಕರಣ, ಸ್ಯಾಂಟ್ರೋ ರವಿ ಮಾತು ಕೇಳಿ ಇನ್ಸ್‌ಪೆಕ್ಟರ್ ಪ್ರವೀಣ್ ತಮ್ಮ ವಿರುದ್ಧ ಸುಳ್ಳು ಕೇಸು ದಾಖಲಿಸಿದ್ದರು ಎಂದು ರವಿ ಪತ್ನಿ ಇತ್ತೀಚೆಗೆ ಮೈಸೂರಿನ ವಿಜಯನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಇದರ ಬಗ್ಗೆ ಮಾಹಿತಿ ಪಡೆದ ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಪ್ರಕರಣದ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಡಿಸಿಪಿ ಲಕ್ಷ್ಮಣ್ ನಿಂಬರಗಿ ಅವರಿಗೆ ಸೂಚಿಸಿದ್ದರು. ಡಿಸಿಪಿ ತನಿಖೆ ನಡೆಸಿ ಕಮಿಷನರ್ ಪ್ರತಾಪ್ ರೆಡ್ಡಿಯವರಿಗೆ ವರದಿ ನೀಡಿದ್ದಾರೆ. ಕಮಿಷನರ್ ಅವರು ವರದಿಯನ್ನು ಡಿಜಿಪಿ ಪ್ರವೀಣ್ ಸೂದ್ ಅವರಿಗೆ ರವಾನೆ ಮಾಡಿದ್ದರು. ಈ ವರದಿಯನ್ನು ಆಧರಿಸಿ ಡಿಜಿಪಿ ಈಗ ಕ್ರಮ ಕೈಗೊಂಡಿದ್ದಾರೆ.

ಆವತ್ತು ಆಗಿದ್ದೇನು?: ಸ್ಯಾಂಟ್ರೋ ರವಿ ಎರಡನೇ ಪತ್ನಿ ಹಾಗೂ ಆಕೆಯ ತಂಗಿ ವಿರುದ್ಧ ಕಾಟನ್ ಪೇಟೆಯಲ್ಲಿ ಐಪಿಸಿ 397 ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು ಇಬ್ಬರು ಮಹಿಳೆಯರು ಹಾಗೂ ಶೇಕ್ ಎಂಬಾತನ ಮೇಲೆ ದರೋಡೆ ಕೇಸು ದಾಖಲಿಸಿ ಬಂಧಿಸಲಾಗಿತ್ತು. ಸ್ಯಾಂಟ್ರೋ ರವಿ ಪತ್ನಿ ಮತ್ತು ನಾದಿನಿ ಅವರು ಪ್ರಕಾಶ್ ಎಂಬುವರ ಬಳಿ ತುರ್ತಾಗಿ ಐದು ಲಕ್ಷ ಹಣ ಬೇಕು ಎಂದು ಕೇಳಿದ್ದರಂತೆ. ಚೆಕ್ ಪಡೆದು ಹಣ ಕೊಡಲು ಪ್ರಕಾಶ್ ಒಪ್ಪಿದ್ದರಂತೆ. ನಂತರ ಪ್ರಕಾಶ್‌ಗೆ ಹಣ ಮರಳಿಸಲು ಸ್ಯಾಂಟ್ರೋ ರವಿ ಪತ್ನಿ ಮುಂದಾಗಿದ್ದು, ನವೆಂಬರ್ 23ರಂದು ಮೆಜೆಸ್ಟಿಕ್ ಬಳಿಯ ಖೋಡೇಸ್ ಸರ್ಕಲ್‌ಗೆ ಬರಲು ಹೇಳಿದ್ದರಂತೆ. ಈ ವೇಳೆ ಇಬ್ಬರ ನಡುವೆ ಚೆಕ್ ಮತ್ತು ಹಣ ಪಡೆಯುವ ವಿಚಾರಕ್ಕೆ ಗಲಾಟೆ ನಡೆದು ಸ್ಯಾಂಟೋ ರವಿ ಪತ್ನಿ ಮತ್ತು ನಾದಿನಿ ಚಾಕು ತೋರಿಸಿ ತನ್ನನ್ನು ದರೋಡೆ ಮಾಡಿದ್ದಾರೆ ಎಂದು ಪ್ರಕಾಶ್ ಆರೋಪಿಸಿದ್ದರು.

ನಿಜವೆಂದರೆ ಇದೆಲ್ಲವೂ ಸ್ಯಾಂಟ್ರೋ ರವಿ ತನ್ನ ಪತ್ನಿ ಮತ್ತು ನಾದಿನಿ ವಿರುದ್ಧ ಹೆಣೆದ ತಂತ್ರ ವಾಗಿದ್ದು, ಅವರನ್ನು ಬಂಧಿಸಿ ಜೈಲಿಗಟ್ಟಲು ದರೋಡೆ ನಾಟಕ ಹೆಣೆದಿದ್ದ. ಅದಕ್ಕೆ ಇನ್ಸ್‌ಪೆಕ್ಟರ್ ಪ್ರವೀಣ್ ಸಹಕಾರ ನೀಡಿದ್ದ ಎನ್ನುವುದು ಈಗ ತಿಳಿದುಬಂದಿರುವ ಸತ್ಯ. ಹೀಗೆ ಸ್ಯಾಂಟೋ ರವಿಗೆ ಸಹಕರಿಸಿದ ಒಬ್ಬ ಪೊಲೀಸ್ ಅಧಿಕಾರಿ ತನ್ನ ತಪ್ಪಿಗೆ ಬೆಲೆ ತೆರುವಂತಾಗಿದೆ.

ಸ್ಯಾಟ್ರೋ ರವಿಯ ಅಡ್ಡಗಳಾಗಿದ್ದ ಕುಮಾರಕೃಪಾ, ಬಾಲಬ್ರೂಯಿ ಅತಿಥಿ ಗೃಹಗಳಿಗೆ ರಾತ್ರೋ-ರಾತ್ರಿ ಪ್ರವೇಶ ನಿರ್ಬಂಧಿಸಿದ ಸರ್ಕಾರ

ಬೆಂಗಳೂರು, ಜ.10– ರಾಜಕಾರಣಿಗಳು ಮತ್ತು ಫಿಕ್ಸರ್‌ಗಳು ಮಾಡಿದ ಅನೈತಿಕ ಕೆಲಸದಿಂದಾಗಿ ಸರ್ಕಾರಿ ಸ್ವಾಮ್ಯದಲ್ಲಿರುವ ಕುಮಾರಕೃಪಾ ಮತ್ತು ಬಾಲಬ್ರೂಯಿ ಅತಿಥಿಗೃಹಗಳು ರಾತ್ರೋರಾತ್ರಿ ಕೋಟೆಗಳಾಗಿ ಮಾರ್ಪಟ್ಟಿವೆ. ಸ್ಯಾಂಟ್ರೋ ರವಿ ವಿಷಯ ವೈರಲ್ ಆದ ನಂತರ ಸರ್ಕಾರ ಈ ಎರಡು ಗೆಸ್ಟ್ ಹೌಸ್‌ಗಳಿಗೆ ಪ್ರವೇಶ ನಿರ್ಬಂಧಿಸಿದೆ.

ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ, ಇತ್ತೀಚೆಗೆ ಆಡಿಯೋವೊಂದನ್ನು ರಿಲೀಸ್ ಮಾಡಿದ್ದರು. ಅದರಲ್ಲಿ ಕುಮಾರಕೃಪದಲ್ಲಿ ಕೂತು ಈತ ಭಾರೀ ವ್ಯವಹಾರ ನಡೆಸಿದ್ದಾನೆ. ಇವನ ಹಿಂದೆ ಅಡಗಿ ಕೂತಿರುವ ಅಸಲಿ ವ್ಯಕ್ತಿ ಯಾರು ಎಂದು ಪ್ರಶ್ನಿಸಿದ್ದರು. ಪ್ರಮುಖ ಹುದ್ದೆಗಾಗಿ ಬಯಸಿದ್ದ ಅಧಿಕಾರಿಯೊಬ್ಬರಿಗೆ ಇವನು ಮೊಬೈಲ್ ಕರೆ ಮಾಡಿ, ನಾಳೆ ಬಂದು ನೋಡು ಅಂತ ಹೇಳುತ್ತಾನೆ. ತನ್ನ ಸರ್ ಎಂದು ಕರೆಯುವಂತೆ ಆ ಪೊಲೀಸ್ ಅಧಿಕಾರಿಗೆ ತಾಕೀತು ಮಾಡುತ್ತಾನೆ. ರೀ ಏನು ತಿಳಿದುಕೊಂಡಿದ್ದೀರಾ, ಸ್ವತಃ ಮುಖ್ಯಮಂತ್ರಿಯೇ ನನ್ನನ್ನು ಸರ್ ಅಂತ ಕರೀತಾರೆ. ನೀನು ಸರ್ ಅಂತಿಲ್ಲ ಅಂತ ಆ ಪೊಲೀಸ್ ಅಧಿಕಾರಿಗೆ ಸ್ಯಾಂಟ್ರೋ ರವಿ ಅನ್ನುವ ವ್ಯಕ್ತಿ ಧಮ್ಕಿ ಹಾಕುತ್ತಾನೆ. ತನ್ನನ್ನು ಕೆಕೆ ಅತಿಥಿ ಗೃಹದಲ್ಲಿ ಭೇಟಿಯಾಗಬೇಕೆಂದು 1996 ರ ಬ್ಯಾಚ್ ಅಧಿಕಾರಿಗೆ ಆತ ಸೂಚಿಸುತ್ತಾನೆ ಎಂದು ಕುಮಾರಸ್ವಾಮಿ ಹೇಳಿದ್ದರು. ಸ್ಯಾಂಟ್ರೋ ರವಿ ಪ್ರಕರಣದ ನಂತರ ಸರ್ಕಾರ ಬಾಲಬ್ರೂಯಿ ಅತಿಥಿ ಗೃಹಕ್ಕೆ ನಿರ್ಬಂಧ ವಿಧಿಸಿದೆ. ಪ್ಯಾಲೇಸ್ ರಸ್ತೆ ನಿವಾಸಿ ಶೃತಿ ಎಂಬುವರು ತಮ್ಮ ಕುಟುಂಬಸ್ಥರ ಜೊತೆ ಬಾಲಬ್ರೂಯಿಯನ್ನು ಅಡ್ಡಾಡಲು ಬಂದಿದ್ದರು. ಈ ವೇಳೆ ಐಡಿ ಕಾರ್ಡ್ ತೋರಿಸುವಂತೆ ಕೇಳಿದ ಪೊಲೀಸರು ಅವರನ್ನು ಒಳಗೆ ಬಿಡದೆ ವಾಪಸ್ ಮನೆಗೆ ಕಳುಹಿಸಿದ್ದಾರೆ.

40 ವರ್ಷಗಳ ಕಾಲ ಭೂಮಿಯನ್ನು ಸುತ್ತಿದ್ದ ನಾಸಾದ ಸಿಷ್ಕ್ರಿಯ ಉಪಗ್ರಹ ಸುರಕ್ಷಿತ ಪತನ

ಕೇಪ್ ಕ್ಯಾನವೆರಲ್, ಅಮೆರಿಕ(ಎಪಿ): ಸುಮಾರು 40 ವರ್ಷಗಳ ಕಾಲ ಭೂಮಿಯನ್ನು ಸುತ್ತಿದ್ದ ನಾಸಾದ ನಿಷ್ಕ್ರಿಯ ಉಪಗ್ರಹವೊಂದು ಅಲಾಸ್ಕಾ ಕರಾವಳಿಯಲ್ಲಿ ಸುರಕ್ಷಿತವಾಗಿ ಪತನಗೊಂಡಿದೆ. 1984ರಲ್ಲಿ ಕಕ್ಷೆಗೆ ಕಳುಹಿಸಲಾಗಿದ್ದ 2,450 ಕೆ.ಜಿ. ತೂಕದ ಉಪಗ್ರಹವು ಭಾನುವಾರ ತಡರಾತ್ರಿ ಬೇರಿಂಗ್ಸಮುದ್ರದಲ್ಲಿ ಪತನಗೊಂಡಿತು. ಇದರಿಂದ ಯಾವುದೇ ಹಾನಿಯಾದ ಬಗ್ಗೆ ಅಥವಾ ಭಗ್ನಾವಶೇಷಗಳು ಲಭ್ಯವಾದ ಬಗ್ಗೆ ವರದಿ ಇಲ್ಲ ಎಂದು ನಾಸಾದ ಪ್ರಕಟಣೆ ತಿಳಿಸಿದೆ.

ನಾಪತ್ತೆ



ಮೈಸೂರು, ಜ.10– ವ್ಯಕ್ತಿಯೊಬ್ಬರು ನಾಪತ್ತೆಯಾಗಿರುವ ಘಟನೆ ಮೇಟಗಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ರಂಗನಾಯಕ (65) ನಾಪತ್ತೆಯಾದವರು. ಕಣ್ಣಿನ ಚಿಕಿತ್ಸೆಗೆ ಒಳಗಾಗಿ ಮನೆಯಲ್ಲಿಯೇ ವಿಶ್ರಾಂತಿ ಪಡೆಯುತ್ತಿದ್ದ ಇವರು 2022ರ ಡಿ.23ರಂದು ಸಂಜೆ 7 ಗಂಟೆ ಸುಮಾರಿಗೆ ಮನೆಯಿಂದ ಹೊರ ಹೋದವರು ಇಲ್ಲಿಯವರೆಗೆ ವಾಪಸ್ ಬಂದಿಲ್ಲ. ಸ್ನೇಹಿತರು ಮತ್ತು ಕುಟುಂಬಸ್ಥರ ಬಳಿ ವಿಚಾರಿಸಿದರು ತಿಳಿದು ಬಂದಿಲ್ಲ ಎಂದು ರಂಗನಾಯಕ ಅವರ ಪುತ್ರ ಮಣಿಕಂಠ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಮೇಟಗಳ್ಳಿ ಪೊಲೀಸ್ ಠಾಣೆ ದೂ.ಸಂ. 0821–2418339/2148115, ಮೊ.ನಂ.9480802239, 9696343271 ಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಜ.15ಕ್ಕೆ ರೇಸ್‌ಕೋರ್ಸ್‌ನಲ್ಲಿ ಯೋಗಥಾನ್‌ಗೆ ಸಿದ್ಧತೆ

ಮೈಸೂರು, ಜ.10(ಎಸ್‌ಬಿಡಿ)– ಮೈಸೂರಿನ ರೇಸ್‌ಕೋರ್ಸ್‌ನಲ್ಲಿ ಜ.15ರಂದು ಆಯೋಜಿಸಿರುವ ಯೋಗಥಾನ್‌ಗೆ ಸಕಲ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜ.15 ರಂದು ಬೆಳಗ್ಗೆ 8 ಗಂಟೆಯಿಂದ ರೇಸ್‌ಕೋರ್ಸ್ ಮೈದಾನದಲ್ಲಿ ಯೋಗಥಾನ್ ನಡೆಯಲಿದ್ದು, ಸುಮಾರು 80 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಹಾಗಾಗಿ ಎಲ್ಲಾ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದರು.

ಯೋಗಥಾನ್‌ನಲ್ಲಿ ಭಾಗವಹಿಸುವವರು www.yogathon2022.comನಲ್ಲಿ ನೊಂದಣಿ ಮಾಡಿಕೊಂಡು ಪಡೆದಿರುವ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿಸಿ ಪ್ರವೇಶಿಸಬೇಕು. ಶಾಲಾ, ಕಾಲೇಜು, ವಸತಿ ಶಾಲೆಗಳಿಂದ ನೊಂದಣಿ ಮಾಡಿಕೊಳ್ಳುವ ವಿದ್ಯಾರ್ಥಿಗಳಿಗೆ ಸಮರ್ಪಕ ಮಾಹಿತಿ ನೀಡಿ, ಅವರನ್ನು ಕಾರ್ಯಕ್ರಮಕ್ಕೆ ಕರೆದುಕೊಂಡು ಬರಲು ವ್ಯವಸ್ಥೆ ಮಾಡಿ. ವಾಹನಗಳ ಪಾರ್ಕಿಂಗ್, ಕುಡಿಯುವ ನೀರು, ಶೌಚಾಲಯ, ವೇದಿಕೆ ಸೇರಿದಂತೆ ಎಲ್ಲಾ ವ್ಯವಸ್ಥೆಗಳ ಜವಾಬ್ದಾರಿಯನ್ನು ಅಧಿಕಾರಿಗಳಿಗೆ ವಹಿಸಿ. ಜನದಟ್ಟಣೆಯಾಗದಂತೆ ಪ್ರವೇಶ ದ್ವಾರ ನಿರ್ಮಿಸಿ. ಶಿಷ್ಟಾಚಾರ, ಭದ್ರತೆ ಹಾಗೂ ಸಾರಿಗೆ ವ್ಯವಸ್ಥೆಯ ಬಗ್ಗೆ ಸೂಕ್ತ ಕ್ರಮವಹಿಸಿ. ವೇದಿಕೆ, ಸ್ವಚ್ಛತೆ, ಉಪಹಾರ ಹಾಗೂ ಆಂಬುಲೆನ್ಸ್ ವ್ಯವಸ್ಥೆ ಮಾಡುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಿ. ಚಿಕ್ಕ ಮಕ್ಕಳು ಭಾಗವಹಿಸದಂತೆ ನಿಗಾವಹಿಸಿ. ಒಟ್ಟಾರೆ ಯಾವುದೇ ಲೋಪವಾಗದಂತೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು.

ಮೈಸೂರು ಮಿತ್ರ ಬುಧವಾರ 11 ಜನವರಿ 2023

ಫೆ. 23ರಿಂದ ವಿ.ಬಾಡಗದಲ್ಲಿ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ



ಪೊನ್ನಂಪೇಟೆ, ಜ.10– ಬಿಟ್ಟಂಗಾಲ ಸಮೀಪದ ವಿ. ಬಾಡಗದ ಹೈ ಫ್ಲೈಯರ್ಸ್ ತಂಡದ ವತಿಯಿಂದ ಫೆ.23ರಿಂದ ದಕ್ಷಿಣ ಕೊಡಗಿನ ಮೂರು ನಾಡು ವ್ಯಾಪ್ತಿಯ ತಂಡಗಳಿಗಾಗಿ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಹೈಫ್ಲೈಯರ್ಸ್ ತಂಡದ ಅಧ್ಯಕ್ಷ ಅಮ್ಮಣಿ ಚಂಡ ರಂಜಿ ಪೂಣಚ್ಚ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಬೇರಳಿನಾಡು, ಕುತ್ತುನಾಡು ಮತ್ತು ಬೊಟ್ಟಿಯತ್ ನಾಡು ವ್ಯಾಪ್ತಿಯ ಕೊಡವ ಕುಟುಂಬ ತಂಡಗಳಿಗಾಗಿ ಆಯೋಜಿಸಲಾಗಿರುವ ಈ ಹಾಕಿ ಪಂದ್ಯಾವಳಿಯು ವಿ. ಬಾಡಗ ಗ್ರಾಮದಲ್ಲಿ ಮೊಟ್ಟ ಬಾರಿಗೆ ಜರುಗುತ್ತಿದೆ. ವಿ.ಬಾಡಗದ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ ಒಟ್ಟು 4 ದಿನಗಳ ಕಾಲ ನಡೆಯುವ ಈ ಕೌಟುಂಬಿಕ ಹಾಕಿ ಪಂದ್ಯಾವಳಿಗಾಗಿ ಈಗಾಗಲೇ ಸಿದ್ಧತೆಗಳು ಆರಂಭಗೊಂಡಿದ್ದು, ಹೆಚ್ಚಿನ ತಂಡಗಳ ನೋಂದಣಿಯನ್ನು ನಿರೀಕ್ಷಿಸಲಾಗಿದೆ ಎಂದರು.

ಹಾಕಿ ಕೂರ್ಗ್ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಲು ಉದ್ದೇಶಿಸಿರುವ ಈ ಹಾಕಿ ಪಂದ್ಯಾವಳಿಯು ಹಾಕಿ ಕರ್ನಾಟಕ ಸಂಸ್ಥೆಯ ನಿಯಮಾವಳಿಗೆ ಬದ್ಧವಾಗಿ ನಡೆಯಲಿದೆ. ನಾಕ್‌ಔಟ್ ಮಾದರಿಯಲ್ಲಿ ಈ ಪಂದ್ಯಾವಳಿಯನ್ನು ಆಯೋಜಿಸಲಾಗುತ್ತದೆ. ಪಂದ್ಯಾವಳಿಯು ಸಂಪೂರ್ಣವಾಗಿ ದಾನಿಗಳ ನೆರವಿನಿಂದಲೇ ನಡೆಯುತ್ತದೆ. ಇದರ ಫೈನಲ್ ಪಂದ್ಯದ ಭಾಗವಾಗಿ ನಡೆಯುವ ಸಮಾರೋಪ ಸಮಾರಂಭದಂದು ಬೇರಳಿನಾಡು, ಕುತ್ತುನಾಡು ಮತ್ತು ಬೊಟ್ಟಿಯತ್ ನಾಡು ವ್ಯಾಪ್ತಿಯ ಸಾರ್ವಜನಿಕ ಮಹಿಳೆಯರಿಗಾಗಿ ಹಗ್ಗ ಜಗ್ಗಾಟ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಈ ಸ್ಪರ್ಧೆಯಲ್ಲಿ 3 ನಾಡಿನ ಗ್ರಾಮ ವ್ಯಾಪ್ತಿಯ ತಂಡಗಳು ಮುಕ್ತವಾಗಿ ಭಾಗವಹಿಸಬಹುದಾಗಿದೆ ಎಂದು ಅವರು ಹೇಳಿದರು.

ಪಂದ್ಯಾವಳಿ ಕುರಿತ ಹೆಚ್ಚಿನ ಮಾಹಿತಿಗಾಗಿ ಕ್ರೀಡಾ ಸಮಿತಿ ಮುಖ್ಯಸ್ಥರಾದ ದಿಲನ್ ಬೋಪಣ್ಣ– 9448188378, ಪದಾಧಿಕಾರಿಗಳಾದ ಮಚ್ಚಾರಂಡ ಪ್ರವೀಣ್–9740196318 ಅಥವಾ ಕಂಜಿತಂಡ ಪೂವಣ್ಣ–7022356456 ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದರು.

ಗೋಷ್ಠಿಯಲ್ಲಿ ಉಪಸ್ಥಿತರಿದ್ದ ಸಂಸ್ಥೆಯ ಸಲಹಾ ಸಮಿತಿ ಮುಖ್ಯಸ್ಥರಾದ ಮಳವಂಡ ಗಿರೀಶ್ ಮುದ್ದಯ್ಯ ಮಾತನಾಡಿ, ಗ್ರಾಮಾಂತರ ಪ್ರದೇಶದಲ್ಲಿ ಹಾಕಿ ಪಂದ್ಯಾವಳಿಯನ್ನು ನಿರಂತರವಾಗಿ ಆಯೋಜಿಸುವುದರಿಂದ ಹಾಕಿ ಕ್ರೀಡೆಗೆ ಮತ್ತಷ್ಟು ಉತ್ತೇಜನ ದೊರೆತಂತಾಗುತ್ತದೆ ಎಂದರು.

ಗೋಷ್ಠಿಯಲ್ಲಿ ಸಂಸ್ಥೆಯ ಪದಾಧಿಕಾರಿಗಳಾದ ಕೊಂಗಂಡ ಕಾಶಿ ಕಾರ್ಯಪ್ಪ, ಚೇಮಿರ ನಂದಾ ನಂಜಪ್ಪ, ಕೊಂಗಂಡ ಬೋಪಣ್ಣ ಮತ್ತು ಚೇಮಿರ ಪ್ರಭು ಉಪಸ್ಥಿತರಿದ್ದರು.

ಪೇಯಿಂಟ್ ಅಂಗಡಿಗೆ ಬೆಂಕಿ: 2 ಕೋಟಿ ರೂ.ನಷ್ಟ

ಅಕ್ಕ-ಪಕ್ಕದ ಅಂಗಡಿಗೂ ವ್ಯಾಪಿಸಿದ ಬೆಂಕಿ, ತಪ್ಪಿದ ಅನಾಹುತ



ಗೋಣಿಕೊಪ್ಪ, ಜ.10– ಪೇಯಿಂಟ್ ಮಳಿಗೆಯೊಂದರಲ್ಲಿ ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿದ ಪರಿಣಾಮ ಲಕ್ಷಾಂತರ ಮೌಲ್ಯದ ವಸ್ತುಗಳು ಬೆಂಕಿಗೆ ಆಹುತಿಯಾದ ಘಟನೆ ಗೋಣಿಕೊಪ್ಪಲಿನಲ್ಲಿ ನಡೆದಿದೆ.

ಗೋಣಿಕೊಪ್ಪಲಿನ ಮುಖ್ಯ ರಸ್ತೆಯಲ್ಲಿರುವ ಇಂತರಾಮ್ ಎಂಬುವರಿಗೆ ಸೇರಿದ ಭೇರು ಪೇಯಿಂಟ್ಸ್ ಮಳಿಗೆಯಲ್ಲಿ ಮಂಗಳವಾರ ಬೆಳಗ್ಗೆ ಸುಮಾರು 6.40ರ ಸಮಯದಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ನೋಡು ನೋಡುತ್ತಿದ್ದಂತೆ ದಟ್ಟಹೊಗೆಯೊಂದಿಗೆ ಬೆಂಕಿಯ ಕೆನ್ನಾಲಿಗೆ ಇಡಿ ಕಟ್ಟಡವನ್ನೇ ಆವರಿಸಿಕೊಂಡಿತ್ತು. ಪರಿಣಾಮ ಗೋದಾಮು ಮತ್ತು ಫ್ಯಾನ್ಸಿ ವಸ್ತುಗಳ ಮಳಿಗೆಗೂ ಬೆಂಕಿ ವ್ಯಾಪಿಸಿದೆ. ಅಕ್ಕಪಕ್ಕದಲ್ಲಿದ್ದ ಬಟ್ಟೆ ಸೇರಿದಂತೆ ಇತರ ಅಂಗಡಿಗಳಿಗೂ ಬೆಂಕಿ ಹರಡುವ ಆತಂಕ ಎದುರಾಗಿತ್ತು ಇದರಿಂದಾಗಿ ಮುನ್ನೆಚ್ಚರಿಕೆ ವಹಿಸಿದ ಅಕ್ಕಪಕ್ಕದ ಅಂಗಡಿ ಮಳಿಗೆಗಳ ವರ್ತಕರು ಕೂಡಲೇ ಅಂಗಡಿಯಲ್ಲಿದ್ದ ವಸ್ತುಗಳನ್ನು ಇತರೆಡೆಗೆ ಸಾಗಿಸುವಲ್ಲಿ ಯಶಸ್ವಿಯಾದರು.

ಮಾಹಿತಿ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಅಧಿಕಾರಿ ಪಳಂಗಪ್ಪ ಮತ್ತು ಸಿಬ್ಬಂದಿಗಳು ಹರಸಾಹಸದಿಂದ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾದರು. ಆದರೆ ಮಳಿಗೆಯಲ್ಲಿದ್ದ ಲಕ್ಷಾಂತರ ಮೌಲ್ಯದ ವಸ್ತುಗಳ ಸಹಿತ ಇಡೀ ಕಟ್ಟಡವೇ ಬೆಂಕಿಗೆ ಆಹುತಿಯಾಗಿದೆ. ಈ ಘಟನೆಯಿಂದ ಒಟ್ಟು 80 ಲಕ್ಷ ರೂ. ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಪೇಯಿಂಟ್ಸ್ ಮಳಿಗೆ ಮಾಲೀಕ ಇಂತರಾಮ್ ಮೂಲತಃ ರಾಜಸ್ಥಾನದವರಾಗಿದ್ದು ಕಳೆದ 35 ವರ್ಷಗಳಿಂದ ಗೋಣಿಕೊಪ್ಪಲಿನ ಸ್ವಂತ ಕಟ್ಟಡದಲ್ಲಿ ವ್ಯಾಪಾರ ನಡೆಸುತ್ತಿದ್ದರು. ಈ ಕುರಿತು ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಕಿ ಅನಾಹುತದಿಂದ ಸುಮಾರು ಎರಡು ಕೋಟಿ ರೂ. ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಬೆಂಕಿಗೆ ನಿಖರ ಕಾರಣ ತಿಳಿದು ಬಂದಿಲ್ಲವಾದರೂ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಅನಾಹುತ ಸಂಭವಿಸಿರಬಹುದು ಎಂದು ಹೇಳಲಾಗುತ್ತಿದೆ. ಬೆಂಕಿ ಅನಾಹುತದಿಂದ ಗಂಟೆಗಟ್ಟಲೆ ಇಡೀ ಪ್ರದೇಶದಲ್ಲಿ ದಟ್ಟ ಹೊಗೆ ಕಾಣಿಸಿಕೊಂಡು ಸಾರ್ವಜನಿಕರು, ವಾಹನ ಸವಾರರು ಪರದಾಡಬೇಕಾಯಿತು.

ಪ್ಯಾರಾ ಮೆಡಿಕಲ್ ವಿದ್ಯಾರ್ಥಿನಿ ಆತ್ಮಹತ್ಯೆ

ಕುಶಾಲನಗರ, ಜ.10– ಪಟ್ಟಣದ ನೇತಾಜಿ ಬಡಾವಣೆ ನಿವಾಸಿ ಪ್ಯಾರ ಮೆಡಿಕಲ್



ವಿದ್ಯಾರ್ಥಿನಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಗಳವಾರ ನಡೆದಿದೆ.

ನೇತಾಜಿ ಬಡಾವಣೆ ನಿವಾಸಿ ಸಂತೋಷ್ ಎಂಬುವರ ಪುತ್ರಿ ಜಸ್ಮಿತಾ(19) ಆತ್ಮಹತ್ಯೆಗೆ ಶರಣಾದ ದುರ್ದೈವಿ. ಈಕೆ ಮಡಿಕೇರಿ ವೈದ್ಯಕೀಯ ಕಾಲೇಜಿನಲ್ಲಿ ಪ್ಯಾರ ಮೆಡಿಕಲ್ ಕೋರ್ಸ್ ವ್ಯಾಸಂಗ ಮಾಡುತ್ತಿದ್ದಳು. ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಸ್ಥಳಕ್ಕೆ ಕುಶಾಲನಗರ ಟೌನ್ ಪೊಲೀಸ್ ಪಿಎಸ್‌ಐ ಅಪ್ಪಾಜಿ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈಕೆಯ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಈ ಕುರಿತು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬಲ್ಯಮಂಡೂರಿನಲ್ಲಿ ಹುಲಿ ದಾಳಿ: ಎಮ್ಮೆ ಬಲಿ

ಮಡಿಕೇರಿ, ಜ.10– ದಕ್ಷಿಣ ಕೊಡಗಿನಲ್ಲಿ ಮತ್ತೆ ಹುಲಿ ದಾಳಿಯಾಗಿದ್ದು, ಪೊನ್ನಂಪೇಟೆ ತಾಲೂಕಿನ ಬಲ್ಯಮಂಡೂರು ಗ್ರಾಮದಲ್ಲಿ ಎಮ್ಮೆಯೊಂದನ್ನು ಹುಲಿ ಬಲಿ ಪಡೆದಿದೆ.



ಬಲ್ಯಮಂಡೂರು ಗ್ರಾಮದ ಚೇಂದೀರ ಸುರೇಶ್ ಎಂಬುವರಿಗೆ ಸೇರಿದ ಸುಮಾರು 40 ಸಾವಿರ ಬೆಲೆ ಬಾಳುವ ಎಮ್ಮೆಯನ್ನು ಮಂಗಳವಾರ ಮುಂಜಾನೆ ಹುಲಿ ಕೊಂದು ಹಾಕಿದೆ. ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದ ಎಮ್ಮೆಯ ಮೇಲೆ ದಾಳಿ ನಡೆಸಿದ ವ್ಯಾಘ್ರ ದೂರದ ಗದ್ದೆಯವರೆಗೂ ಎಳೆದೊಯ್ದಿದೆ ಹುಲಿ ದಾಳಿಯ ಘಟನೆಯಿಂದ ಗ್ರಾಮದಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದ್ದು, ಸ್ಥಳಕ್ಕೆ ಆರ್‌ಎಫ್‌ಓ ಶಂಕರ್, ಡಿಆರ್‌ಎಫ್‌ಓ ದಿವಾಕರ್ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಎಮ್ಮೆಯ ಕಳೇಬರ ಬಿದ್ದಿದ್ದ ಸ್ಥಳದಲ್ಲಿ ಬೋನು ಅಳವಡಿಸುವ ಮೂಲಕ ಹುಲಿಯನ್ನು ಸೆರೆಹಿಡಿಯಲು ಅರಣ್ಯ ಇಲಾಖೆ ಮುಂದಾಗಿದೆ. ಸ್ಥಳಕ್ಕೆ ಬಿಜೆಪಿ ಕೃಷಿ ಮೋರ್ಚಾದ ತಾಲೂಕು ಅಧ್ಯಕ್ಷ ಕಟ್ಟೆರ ಈಶ್ವರ, ಕಾರ್ಯದರ್ಶಿ ಕೊಟ್ಟಂಗಡ ಅಯ್ಯಪ್ಪ, ಕೊಟ್ಟಂಗಡ ದರ್ಶನ್, ಮಧು, ಅಯ್ಯಪ್ಪ, ಸದಾಶಿವ, ಮಾಚಯ್ಯ, ಕಿಸು, ಸಿದ್ದುಮಣಿ, ನಾಣಯ್ಯ, ಸೂರಜ್, ದಿಲೀಪ್, ರಂಜು ಸೇರಿದಂತೆ ಬಿಜೆಪಿ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಸ್ಥಳಕ್ಕೆ ಭೇಟಿ ನೀಡಿ, ಕೂಡಲೇ ಹುಲಿಯನ್ನು ಸೆರೆ ಹಿಡಿಯುವಂತೆ ಆಗ್ರಹಿಸಿದರು.

ಬಿಜೆಪಿ ಕೃಷಿ ಮೋರ್ಚಾದ ತಾಲೂಕು ಕಾರ್ಯದರ್ಶಿ ಕೊಟ್ಟಂಗಡ ಅಯ್ಯಪ್ಪ ಮಾತನಾಡಿ, ಕಳೆದ ನಾಲ್ಕೈದು ವರ್ಷಗಳಿಂದ ಈ ವ್ಯಾಪ್ತಿಯಲ್ಲಿ ನಿರಂತರವಾಗಿ ಹುಲಿ ಜಾನುವಾರುಗಳನ್ನು ಬಲಿ ಪಡೆಯುತ್ತಿದೆ. ಜಾನುವಾರುಗಳನ್ನು ಕಳೆದುಕೊಂಡ ರೈತರಿಗೆ ಅರಣ್ಯ ಇಲಾಖೆಯಿಂದ ನೀಡುತ್ತಿರುವ ಪರಿಹಾರ ಸಾಲದಾಗಿದ್ದು, ಜಾನುವಾರಿಗೆ 70 ಸಾವಿರ ರೂಪಾಯಿಗಳ ಪರಿಹಾರವನ್ನು ನೀಡುವಂತೆ ಆಗ್ರಹಿಸಿದರು. ಆರ್‌ಎಫ್‌ಓ ಶಂಕರ್ ಮಾತನಾಡಿ, ಬಲ್ಯಮಂಡೂರು, ಹರಿಹರ, ಬೆಕ್ಕೆಸೊಡ್ಲೂರು, ಕೋಟೂರು, ಕುಮಟೂರು ಗ್ರಾಮಗಳ ವ್ಯಾಪ್ತಿಯಲ್ಲಿ ಹುಲಿ ದಾಳಿಯಿಂದ ಜಾನುವಾರುಗಳು ಸಾವನ್ನಪ್ಪಿರುವ ಪ್ರಕರಣಗಳು ಕಂಡು ಬರುತ್ತಿದೆ. ಹುಲಿದಾಳಿ ನಡೆಸಿದ ಸ್ಥಳದಲ್ಲಿ ಟ್ರ್ಯಾಕಿಂಗ್ ಕ್ಯಾಮರ ಮತ್ತು ಬೋನು ಅಳವಡಿಸುವ ಮೂಲಕ ಹುಲಿ ಸೆರೆಗೆ ಕಾರ್ಯಾಚರಣೆ ನಡೆಸಲಾಗುತ್ತದೆ ಎಂದರು.

ಮಾಕುಟ್ಟ ಚೆಕ್‌ಪೋಸ್ಟ್‌ನಲ್ಲಿ ತಪಾಸಣೆ ನೆಪದಲ್ಲಿ ಅಯ್ಯಪ್ಪ ಭಕ್ತರಿಗೆ ಕಿರುಕುಳ

ವಿರಾಜಪೇಟೆ ತಾಲೂಕು ಜೆಡಿಎಸ್ ಅಧ್ಯಕ್ಷ ಗಂಭೀರ ಆರೋಪ

ವಿರಾಜಪೇಟೆ, ಜ.10– ಶಬರಿಮಲೆಗೆ ತೆರಳುವ ಭಕ್ತರಿಗೆ ಗಡಿ ಭಾಗದಲ್ಲಿ ವಾಹನ ತಪಾಸಣೆಯ ನೆಪದಲ್ಲಿ ಆರ್‌ಟಿಓ ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ ಎಂದು ತಾಲೂಕು ಜೆಡಿಎಸ್ ಅಧ್ಯಕ್ಷ ಪಿ.ಎ. ಮಂಜುನಾಥ್ ಗಂಭೀರ ಆರೋಪ ಮಾಡಿದ್ದಾರೆ.

ವಿರಾಜಪೇಟೆ ಮತ್ತು ಮಾಕುಟ್ಟ ಗಡಿಭಾಗದಲ್ಲಿರುವ ಚೆಕ್‌ಪೋಸ್ಟ್‌ನಲ್ಲಿ ಇಲ್ಲಿಂದ ಶಬರಿಮಲೆಗೆ ತೆರಳುವ ಮತ್ತು ಶಬರಿಮಲೆಯಿಂದ ಹಿಂದಿರುಗುವ ವಾಹನಗಳನ್ನು ತಡೆದು ನಿಲ್ಲಿಸಿ ದಾಖಲಾತಿಗಳನ್ನು ಪರಿಶೀಲಿಸುವ ನೆಪವೊಡ್ಡಿ ಮಾನಸಿಕ ವಾಗಿ ಕಿರುಕುಳ ನೀಡುತ್ತಿದ್ದು, ಇದರಿಂದ ಅಯ್ಯಪ್ಪನ ದರ್ಶನಕ್ಕೆ ತೆರಳುವ ಭಕ್ತರಿಗೆ ನೆಮ್ಮದಿಯಿಲ್ಲದಂತಾಗಿದೆ ಎಂದು ಅವರು ದೂರಿದ್ದಾರೆ.

ಕೇರಳದಿಂದ ಎಂ ಸ್ಯಾಂಡ್, ಕೆಂಪು ಕಲ್ಲು ಮತ್ತು ಹುಲ್ಲಿನ ಲಾರಿಗಳು ಯದ್ವಾ–ತದ್ವಾ ಲೋಡ್ ಮಾಡಿಕೊಂಡು ಓಡಾಡುತ್ತಿದ್ದರೂ ಅದನ್ನು ತಪಾಸಣೆ ಇರಲಿ ತಡೆದು ನಿಲ್ಲಿಸುವ ಧೈರ್ಯ ತೋರದ ಆರ್‌ಟಿಓ ಅಧಿಕಾರಿಗಳು ಅಯ್ಯಪ್ಪ ಭಕ್ತರ ವಾಹನಗಳ ಮೇಲೆ ಕೆಂಗಣ್ಣು ಬಿಟ್ಟಿರುವುದು ಯಾವ ನ್ಯಾಯ ಎಂದು ಅವರು ಪ್ರಶ್ನಿಸಿದ್ದಾರೆ. ಜಿಲ್ಲೆಯಲ್ಲಿರುವ ಇಬ್ಬರು ಶಾಸಕರುಗಳಾದ ಕೆ.ಜಿ. ಬೋಪಯ್ಯ ಮತ್ತು ಅಪ್ಪಚ್ಚು ರಂಜನ್ ಅವರುಗಳು ಈ ಕೂಡಲೇ ಇದರತ್ತ ಗಮನ ಹರಿಸಿ, ಗಡಿಭಾಗದಲ್ಲಿ ಅಯ್ಯಪ್ಪ ಭಕ್ತರಿಗೆ ನೀಡುತ್ತಿರುವ ಕಿರುಕುಳ ತಪ್ಪಿಸಬೇಕು ಎಂದು ಅವರು ತಮ್ಮ ಪತ್ರಿಕಾ ಹೇಳಿಕೆ ಮೂಲಕ ಆಗ್ರಹಿಸಿದ್ದಾರೆ.

ಇಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆ

ಮಡಿಕೇರಿ, ಜ.10– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವೇದಿಕೆ ಹಾಗೂ ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರ (ಕುಶಾಲನಗರ) ಸಂಯುಕ್ತ ಆಶ್ರಯದಲ್ಲಿ 'ರಾಷ್ಟ್ರೀಯ ಗ್ರಾಹಕರ ದಿನಾಚರಣೆ'ಯು ಜನವರಿ 11 ರಂದು ಮಧ್ಯಾಹ್ನ 3 ಗಂಟೆಗೆ ನಗರದ ವೈದ್ಯಕೀಯ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ.

ಜ.18, ಜಿಪಂ ಕೆಡಿಪಿ ಸಭೆ

ಮಡಿಕೇರಿ, ಜ.10– ಪ್ರಸಕ್ತ(2022–23) ಸಾಲಿನ ಡಿಸೆಂಬರ್ ಅಂತ್ಯದವರೆಗಿನ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶಗಳ ಕಾರ್ಯಕ್ರಮ ಸೇರಿದಂತೆ) ಜಿಲ್ಲಾ ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆಯು ಪ್ರಾಥಮಿಕ, ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಅವರ ಅಧ್ಯಕ್ಷತೆಯಲ್ಲಿ ಜ.18 ರಂದು ಮಧ್ಯಾಹ್ನ 3 ಗಂಟೆಗೆ ಜಿಪಂ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿಪಂ ಸಿಇಓ ಡಾ.ಎಸ್.ಆಕಾಶ್ ಅವರು ತಿಳಿಸಿದ್ದಾರೆ.

ಕುಶಾಲನಗರದಲ್ಲಿ ವೇಶ್ಯಾವಾಟಿಕೆ: ಮಹಿಳೆಯ ಬಂಧನ

ಕುಶಾಲನಗರ, ಜ.10– ಪಟ್ಟಣದ ಟೌನ್ ಪೊಲೀಸ್ ಠಾಣೆ ವ್ಯಾಪ್ತಿಯ ಸುಂದರನಗರ ರಸ್ತೆ ಮನೆಯೊಂದರಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂಬ ಮಾಹಿತಿ ಮೇರೆಗೆ ಪೊಲೀಸರು ದಾಳಿ ಮಾಡಿ ಇಬ್ಬರು ಯುವತಿಯರನ್ನು ರಕ್ಷಣೆ ಮಾಡಿದ್ದಾರೆ.

ಎಸ್ಪಿ ಕ್ಯಾಪ್ಟನ್ ಎಂ.ಎ.ಅಯ್ಯಪ್ಪ ಹಾಗೂ ಡಿವೈಎಸ್ಪಿ ಗಂಗಾಧರಪ್ಪ ಅವರ ಮಾರ್ಗದರ್ಶನದಲ್ಲಿ ವೃತ್ತ ನಿರೀಕ್ಷಕ ಮಹೇಶ್ ಹಾಗೂ ಸಿಬ್ಬಂದಿಗಳು ಮಂಗಳವಾರ ಸಂಜೆ ವೇಶ್ಯಾವಾಟಿಕೆ ದಂಧೆ ಮೇಲೆ ದಾಳಿ ಮಾಡಿ ವೇಶ್ಯಾವಾಟಿಕೆಗೆ ಪ್ರೇರೇಪಿಸುತ್ತಿದ್ದರು ಎನ್ನಲಾದ ಮಹಿಳೆಯನ್ನು ಬಂಧಿಸಿ, ಕಾನೂನು ಕ್ರಮ ಕೈಗೊಂಡಿದ್ದಾರೆ.

ಸುಪ್ರೀಂ ಕೋರ್ಟ್ ಈಚೆಗೆ ವೇಶ್ಯಾವಾಟಿಕೆ ಕಾನೂನುಬದ್ಧ, ಪೊಲೀಸರು ಮಧ್ಯ ಪ್ರವೇಶಿಸುವಂತಿಲ್ಲ ಎಂಬ ಮಹತ್ವದ ಆದೇಶ ಹೊರಡಿಸಿದ್ದು, ಪೊಲೀಸರು ವೇಶ್ಯಾವಾಟಿಕೆ ಹೆಸರಿನಲ್ಲಿ ಮನೆ ಮೇಲೆ ದಾಳಿ ಮಾಡಿ ಮಹಿಳೆಯನ್ನು ಬಂಧಿಸಬಹುದೆ ಎಂಬುದು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿರುವ ಪ್ರಶ್ನೆಯಾಗಿದೆ.

ಜಾನಕಿ ನಿಧನ

ನಾಪೋಕ್ಲು, ಜ.10– ಕೊಳಕೇರಿ ನಿವಾಸಿ ದಿ. ಚೋಯಿ ಅವರ ಧರ್ಮಪತ್ನಿ ಟಿ.ಸಿ. ಜಾನಕಿ (75) ಸೋಮವಾರ ದೈವಾಧೀನರಾಗಿದ್ದಾರೆ.



ಅಂತ್ಯಕ್ರಿಯೆ ಮಂಗಳವಾರ ಕೊಳಕೇರಿಯಲ್ಲಿ ನೆರವೇರಿಸ ಲಾಯಿತು. ಶ್ರೀಯುತರು ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಹುಲಿಯಾದ ನಾಯಿ....

ಕಾಡು ಪ್ರಾಣಿಗಳಿಂದ ಬೆಳೆ ಕಾಪಾಡಲು ನಾಯಿಗೆ ಹುಲಿ ಬಣ್ಣ ಬಳಿದ ರೈತ

ಓಡಿದರು, ಬಿದ್ದರು, ಎದ್ದರು, ನಕ್ಕರು



ಹನೂರು, ಜ.10– ರೈತರು ತಮ್ಮ ಜಮೀನಿನಲ್ಲಿ ಬೆಳೆದಿರುವ ಬೆಳೆಗಳನ್ನು ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳುವ ಸಲುವಾಗಿ ನಾನಾ ತಂತ್ರಗಳನ್ನು ಮಾಡುತ್ತಾರೆ. ಅದರಲ್ಲಿ ಮನುಷ್ಯನು ನಿಂತಿರುವಂತಹ ರೂಪದ ಮಾದರಿ (ಪೆಂಜು) ನಿರ್ಮಿಸುವುದು, ಪ್ರಾಣಿಗಳನ್ನು ಓಡಿಸುವ ರೀತಿಯಲ್ಲಿ ವಾಯ್ಸ್ ರೆಕಾರ್ಡ್ ಮೂಲಕ ಕೂಗುವುದು, ಜಮೀನಿನ ಬೇಲಿಯ ಸುತ್ತ ಪ್ಲಾಸ್ಟಿಕ್ ಹಾಗೂ ಇನ್ನಿತರೆ ಸಾಧನ ಸಲಕರಣೆಗಳಿಂದ ಶಬ್ದ ಮಾಡುವುದು ಸೇರಿದೆ.

ಆದರೆ ಇಲ್ಲೊಬ್ಬ ಚಾಣಾಕ್ಷ ರೈತ ವಿಭಿನ್ನ ಪ್ರಯತ್ನ ನಡೆಸಿ ಸುತ್ತಮುತ್ತಲ ಗ್ರಾಮಗಳಲ್ಲಿ ಫೇಮಸ್ ಆಗಿದ್ದಾರೆ. ಈತ ತನ್ನ ಸಾಕು ನಾಯಿಗೆ ಹುಲಿಯ ಬಣ್ಣವನ್ನು ಬಳಿಯುವ ಮೂಲಕ ಕಾಡು ಪ್ರಾಣಿಗಳಿಂದ ಬೆಳೆ ಕಾಪಾಡಲು ಮುಂದಾಗಿದ್ದಾನೆ. ಇದರಿಂದ ವನ್ಯಜೀವಿಗಳು ಹೆದರುತ್ತವೋ, ಇಲ್ಲವೋ ಗೊತ್ತಿಲ್ಲ ಆದರೇ ಸಾರ್ವಜನಿಕರು ಭಯಭೀತರಾಗುವುದರ ಜೊತೆಗೆ ನಗೆಗಡಲಿನಲ್ಲಿ ತೇಲುವಂತ ಪ್ರಸಂಗ ತಾಲೋಕಿನ ಅಜ್ಜಿಪುರ ಗ್ರಾಮದಲ್ಲಿ ಬೆಳಕಿಗೆ ಬಂದಿದೆ.

ಸಾರ್ವಜನಿಕರು ದಾರಿಹೋಕರ ಪಡಿಪಾಟಲು: ನಾಯಿ ತನಗೆ ಹುಲಿ ರೂಪದ ಬಣ್ಣ ಬಳಿದಿರುವುದು ತಿಳಿಯದೆ ರಾಜಾರೋಷವಾಗಿ ಊರು–ಕೇರಿ ಮತ್ತು ಹೊಲಗಳಲ್ಲಿ ಓಡಾಡಿಕೊಂಡಿದೆ. ಈ ಭಾಗದಲ್ಲಿ ಓಡಾಡುವ ಸಾರ್ವಜನಿಕರು ಹಾಗೂ ದಾರಿಹೋಕರು ಹುಲಿ ರೂಪದ ನಾಯಿಯನ್ನು ಕಂಡು ಭಯ ಬೀಳುವುದರ ಜೊತೆಗೆ ವಿಚಲಿತರಾಗುತ್ತಿದ್ದಾರೆ. ಹೇ ಹುಲಿ ಹುಲಿ ಎಂದು ಹೌಹಾರಿ ಎದ್ದು, ಬಿದ್ದು ಓಡುತ್ತಿದ್ದಾರೆ. ಇದು ದಿಟವಾದ ವ್ಯಾಘ್ರವಲ್ಲ ಎಂದು ಅರಿಯುತ್ತಿದ್ದಂತೆ ಬದುಕಿದೆಯಾ ಬಡ ಜೀವವೇ ಎಂಬಂತೆ ನಿಟ್ಟುಸಿರು ಬಿಡುತ್ತಾ, ಇದು ಹುಲಿಯಲ್ಲ ನಾಯಿ ಎಂದು ನಗುತ್ತಿರುವುದು ಕಂಡುಬರುತ್ತಿದೆ. ವಿಪರ್ಯಾಸವೆಂದರೆ ಕಾಡುಪ್ರಾಣಿಗಳಿಗಿಂತ ಮನುಷ್ಯರೇ ಕೆಲಕಾಲ ನಾನು ಹುಲಿ ನೋಡಿದೆ ಎಂದು ಭಯ ಬೀಳುವ ವಾತಾವರಣ ಸೃಷ್ಟಿಯಾಗಿರುವುದು ಸದ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ತಾನು ನಾಯಿ ಎಂದೇ ಮುಕ್ತವಾಗಿ ಓಡಾಡುತ್ತಿರುವ ಮೂಕ ಮುಗ್ಧ ಶ್ವಾನ: ಮನುಷ್ಯರ ಕೈಚಳಕದಿಂದ ಹುಲಿಯ ರೂಪವನ್ನು ಪಡೆದಿರುವ ಮೂಕ ಮುಗ್ಧ ನಾಯಿಯು ತನ್ನ ನಡೆಯಲ್ಲಿ ಯಾವುದೇ ಬದಲಾವಣೆ ಇಲ್ಲದೇ ಎಂದಿನಂತೆ ಓಡಾಡಿಕೊಂಡಿದೆ.

ರೈತರಿಗೆ ಉಪಟಳ ನೀಡುತ್ತಿದ್ದ ಪುಂಡಾನೆ ಸೆರೆ

ಸತತ ಪ್ರಯತ್ನದ ಮೂಲಕ ಅರಣ್ಯ ಇಲಾಖೆಯ ಕಾರ್ಯಾಚರಣೆ



ಗುಂಡ್ಲುಪೇಟೆ, ಜ.10– ಹಲವಾರು ದಿನಗಳಿಂದ ಬಂಡೀಪುರದ ಕಾಡಂಚಿನ ಗ್ರಾಮಗಳಲ್ಲಿ ರೈತರು ಬೆಳೆದ ಬೆಳೆಗಳನ್ನು ತಿಂದು ನಷ್ಟ ಮಾಡುವುದರೊಂದಿಗೆ ಆತಂಕವನ್ನುಂಟು ಮಾಡುತ್ತಿದ್ದ ಪುಂಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿಗಳು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ನೆರೆ ರಾಜ್ಯ ತಮಿಳುನಾಡಿನ ಅರಣ್ಯದಿಂದ ಬಂಡೀಪುರಕ್ಕೆ ಆಗಮಿಸಿದ್ದ ಸುಮಾರು 20 ವರ್ಷ ವಯಸ್ಸಿನ ಪುಂಡಾನೆ ಬಂಡೀಪುರ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಕುಂದಕೆರೆ, ಗೋಪಾಲಸ್ವಾಮಿಬೆಟ್ಟ ಹಾಗೂ ಮದ್ದೂರು ವಲಯಗಳ ಕಾಡಂಚಿನ ಜಮೀನುಗಳಲ್ಲಿ ದಾಂಧಲೆ ನಡೆಸುವ ಜತೆಗೆ ಒಂಟಿ ಮನೆಗಳನ್ನು ಗುರಿಯಾಗಿಸಿ ದಾಳಿ ನಡೆಸುತ್ತಿತ್ತು. ಇದರಿಂದ ರೈತರಲ್ಲಿ ಬೆಳೆ ಹಾನಿಯೊಂದಿಗೆ ಜೀವ ಭಯವೂ ಉಂಟಾಗಿತ್ತು.

ಈ ಬಗ್ಗೆ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಕಳೆದ ಹಲವು ದಿನಗಳಿಂದ ಕೂಂಬಿಂಗ್ ಸ್ಪೆಷಲಿಸ್ಟ್ ಎಂದೇ ಪ್ರಸಿದ್ಧಿ ಪಡೆದಿರುವ ಸಾಕಾನೆ ಅಭಿಮನ್ಯು ನೇತೃತ್ವದಲ್ಲಿ ಮಹೇಂದ್ರ, ಭೀಮ ಹಾಗೂ ಗಣೇಶ ಆನೆಗಳನ್ನು ಬಳಸಿಕೊಂಡು ಸತತ ಕಾರ್ಯಾಚರಣೆ ನಡೆಸಿತ್ತು ಆದರೂ ಸಹ ಪತ್ತೆಯಾಗಿರಲಿಲ್ಲ. ಮಂಗಳವಾರ ಬೆಳ್ಳಂ ಬೆಳಗ್ಗೆ ಪತ್ತೆ ಕಾರ್ಯಕ್ಕೆ ಮುಂದಾದ ಸಿಬ್ಬಂದಿಗೆ ಪುಂಡಾನೆಯು ಗೋಪಾಲಸ್ವಾಮಿ ಬೆಟ್ಟ ವಲಯದ ಕಡ್ಯೆಕೋಟೆ ಪ್ರದೇಶದಲ್ಲಿರುವುದು ಕಂಡುಬಂದಿತು. ಕೂಡಲೇ ಕುಮ್ಕಿ ಆನೆಗಳೊಂದಿಗೆ ಪಶುವೈದ್ಯರಾದ ಡಾ. ರಮೇಶ್, ಡಾ.ವಿರ್ಜಾವಾಸಿಂ, ಡಾ.ಮುಜೀಬ್ ರೆಹಮಾನ್ ಹಾಗೂ ತಂಡ ಸುತ್ತುವರೆದು ಅರಿವಳಿಕೆ ಮದ್ದು ನೀಡಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾದರು.

ರಾಂಪುರ ಸಾಕಾನೆ ಶಿಬಿರ: ಸೆರೆಸಿಕ್ಕ ಪುಂಡಾನೆಯನ್ನು ಕಲ್ಕೆರೆ ವಲಯದ ರಾಂಪುರ ಸಾಕಾನೆ ಶಿಬಿರಕ್ಕೆ ಕೊಂಡೊಯ್ಯಲಾಗುತ್ತದೆ. ಕಳೆದ ವಾರ ಬೆಟ್ಟದ ಮಾದಹಳ್ಳಿ ಗ್ರಾಮದಲ್ಲಿ ರೈತರನ್ನು ಗಾಯಗೊಳಿಸಿದ್ದ ಮತ್ತೊಂದು ಆನೆಯನ್ನು ಕೆಲವೇ ಗಂಟೆಗಳ ಆಪರೇಷನ್‌ನಲ್ಲಿ ಆನೆ ಸೆರೆ ಹಿಡಿದು ಅದನ್ನೂ ರಾಂಪುರ ಶಿಬಿರಕ್ಕೆ ಕಳುಹಿಸಲಾಗಿದೆ. ಅಲ್ಲಿ ಎರಡನ್ನೂ ಸಾಕಾನೆಗಳ ನೆರವಿನಿಂದ ಪಳಗಿಸಲಾಗುವುದು ಎಂದು ಬಂಡೀಪುರ ಹುಲಿ ಯೋಜನೆಯ ನಿರ್ದೇಶಕ ಡಾ.ರಮೇಶ್ ಕುಮಾರ್ ತಿಳಿಸಿದ್ದಾರೆ.



ನಿರಂತರ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಕಿಸಾನ್ ಸಂಘ ಪ್ರತಿಭಟನೆ



ಚಾಮರಾಜನಗರ, ಜ.10– ನಿರಂತರ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ನಗರದಲ್ಲಿ ಭಾರತೀಯ ಕಿಸಾನ್ ಸಂಘದ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಶ್ರೀ ಭುವನೇಶ್ವರಿ ತಾಯಿ ವೃತ್ತದಲ್ಲಿ ರಸ್ತೆ ತಡೆ ನಡೆಸಿದರು. ಬಳಿಕ, ಬಿ.ರಾಚಯ್ಯ ಜೋಡಿ ರಸ್ತೆಯ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಇಂಧನ ಸಚಿವರು, ಸೆಸ್ಕ್ ಇಲಾಖೆ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಹಗಲಿನಲ್ಲಿ ಏಳು ಗಂಟೆಗಳ ಕಾಲ ಹಾಗೂ ರಾತ್ರಿ ವೇಳೆ ಸಂಪೂರ್ಣವಾಗಿ ಸಿಂಗಲ್ ಫೇಸ್ ವಿದ್ಯುತ್ ನೀಡಬೇಕು. ಆದರೆ, ರಾತ್ರಿ ವೇಳೆ ಸಂಪೂರ್ಣವಾಗಿ ವಿದ್ಯುತ್ ಕಡಿತಗೊಳಿಸಲಾಗುತ್ತಿದೆ. ಇದರಿಂದ ತೋಟದ ಮನೆಗಳಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ನಿರಂತರವಾಗಿ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಆಗ್ರಹಿಸಿದರು.

ಅಲ್ಲದೇ ರೈತರು ಪಡೆಯುವ ಪಹಣಿಗೆ 15 ರೂ.ಗಳಿಂದ 25ಕ್ಕೆ ಹೆಚ್ಚಳ ಮಾಡಲಾಗಿದೆ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಹಿಂದಿನ ದರದಲ್ಲಿಯೇ ಪಹಣಿ ನೀಡಲು ಕ್ರಮವಹಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸ್ಥಳಕ್ಕೆ ಆಗಮಿಸಿದ ಎಡಿಸಿ ಎಸ್. ಕಾತ್ಯಾಯಿನಿದೇವಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಭಾರತೀಯ ಕಿಸಾನ್ ಸಂಘದ ಜಿಲ್ಲಾಧ್ಯಕ್ಷ ಯಲಕ್ಕೂರು ಲಿಂಗರಾಜು, ಕಾರ್ಯದರ್ಶಿ ಬೋಸ್ಕೋ, ಚಾಮರಾಜನಗರ ತಾಲೂಕು ಕಾರ್ಯದರ್ಶಿ ಸತೀಶ್, ಹನೂರು ತಾಲೂಕು ಅಧ್ಯಕ್ಷ ಹರೀಶ್, ಪದಾಧಿಕಾರಿಗಳಾದ ನಟರಾಜು, ಶಾಂತಮಲ್ಲಪ್ಪ, ಗುಂಡ್ಲುಪೇಟೆ ನಂಜುಂಡಸ್ವಾಮಿ, ಜಯಕುಮಾರ್, ಪ್ರಶಾಂತ್, ಕೊಳ್ಳೇಗಾಲ ನಂಜುಂಡಸ್ವಾಮಿ ಸೇರಿದಂತೆ ಇತರರು ಹಾಜರಿದ್ದರು.

ಬಣ್ಣಾರಿ ಅಮ್ಮನ್ ದೇವಸ್ಥಾನದಲ್ಲಿ ಹುಂಡಿ ಕಳ್ಳತನ

ಚಾಮರಾಜನಗರ, ಜ.10– ಚಾಮರಾಜನಗರ– ಗುಂಡ್ಲುಪೇಟೆ ಮುಖ್ಯ ರಸ್ತೆ ವೀರನಪುರ ಕ್ರಾಸ್ ಸಮೀಪವಿರುವ ಬಣ್ಣಾರಿ ಅಮ್ಮನ್ ದೇವಾಲಯದಲ್ಲಿ ತಡರಾತ್ರಿ ಇಬ್ಬರು ಕಳ್ಳರು ನುಗ್ಗಿ ದೇವರ ಹುಂಡಿಯನ್ನು ಕಳವು ಮಾಡಿದ್ದಾರೆ. ಸೋಮವಾರ ತಡರಾತ್ರಿ ಸುಮಾರು 10.45 ರಿಂದ 11.30 ರ ವೇಳೆಯಲ್ಲಿ ದೇವಸ್ಥಾನದ ಬಾಗಿಲು ಮುರಿದು ದೇವರ ಹುಂಡಿಯನ್ನು ಹಾಗೂ ದೇವರ ತಾಳಿಯನ್ನು ಕಳವು ಮಾಡಿರುವುದು ಸಿ.ಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ದೇವಸ್ಥಾನದ ಅಧ್ಯಕ್ಷ ಸೆಲ್ವರಾಜ್ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಹುಂಡಿಯಲ್ಲಿ ಸುಮಾರು 65 ಸಾವಿರ ರೂ. ಇತ್ತು ಎಂದು ಹೇಳಿದ್ದು, ದೇವರ ತಾಳಿ, ನಾಲ್ಕು ಬೀಗ ಹಾಗೂ ಬಾಗಿಲನ್ನು ಮುರಿದು ಹಾಕಿದ್ದಾರೆ. ಕೇಬಲ್ ವೈರ್ ಕಟ್ ಮಾಡಿದ್ದು, ಸಿ.ಸಿ ಕ್ಯಾಮರಾವನ್ನು ಒಡೆದು ಹಾಕಿದ್ದಾರೆ

ಬೂತ್ ವಿಜಯ ಅಭಿಯಾನ ಬಿಜೆಪಿಗೆ ಸಹಕಾರಿ



ಚಾಮರಾಜನಗರ, ಜ.10– ಮುಂಬರುವ ವಿಧಾನಸಭಾ ಚುನಾವಣೆಗೆ ಮತಗಟ್ಟೆ ಹಂತದಲ್ಲಿ ಪಕ್ಷವನ್ನು ಸಶಕ್ತಗೊಳಿಸಲು ಬಿಜೆಪಿ ಹಮ್ಮಿಕೊಂಡಿರುವ ಬೂತ್ ವಿಜಯ ಅಭಿಯಾನ ಸಹಕಾರಿಯಾಗಿದೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಗಲ ಶಿವಕುಮಾರ್ ಹೇಳಿದರು.

ತಾಲೂಕಿನ ಜ್ಯೋತಿಗೌಡನಪುರ ಗ್ರಾಮದಲ್ಲಿ ಬೂತ್ ವಿಜಯ ಅಭಿಯಾನಕ್ಕೆ ಚಾಲನೆ ನೀಡಿ, ಬೂತ್ ಸಮಿತಿಗಳ ರಚನೆ ಮಾಡಿ, ಪರಿಶೀಲಿಸಿ, ಪೇಜ್ ಪ್ರಮುಖರನ್ನು ನೇಮಿಸಿ, ವಾಟ್ಸಾಪ್ ಗ್ರೂಪ್ ಮಾಡಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಬಿಜೆಪಿ ಸದೃಢವಾಗಿರುವ ಪಕ್ಷವನ್ನು ಬೂತ್ ಮಟ್ಟದಲ್ಲಿ ಮತ್ತಷ್ಟು ಸಶಕ್ತಗೊಳಿಸಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ನಾಲ್ಕು ವಿಧಾನ ಸಭಾ ಕ್ಷೇತ್ರಗಳಲ್ಲಿ ಗೆಲ್ಲುವ ಗುರಿಯೊಂದಿಗೆ ಜ.2 ರಿಂದ 12 ರವರೆಗೂ ಅಭಿಯಾನ ನಡೆಯಲಿದೆ ಎಂದರು.

ಬೂತ್ ಅಧ್ಯಕ್ಷರು, ಹಾಗೂ ಪದಾಧಿಕಾರಿಗಳು ತಮಗೆ ನಿಗದಿಪಡಿಸಿದ ಬೂತ್‌ಗಳಲ್ಲಿ ಮನೆಮನೆಗೆ ತೆರಳಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾಧನೆಗಳನ್ನು ತಿಳಿಸುವ ಮೂಲಕ ಬಿಜೆಪಿಯನ್ನು ಮತ್ತೊಮ್ಮೆ ರಾಜ್ಯದಲ್ಲಿ ಅಧಿಕಾರಕ್ಕೆ ತರಲು ಶ್ರಮಿಸಬೇಕು. ಬೂತ್ ಗೆದ್ದರೆ ವಿಧಾನಸಭಾ ಕ್ಷೇತ್ರ, ದೇಶ ಗೆದ್ದಂತೆ ಎನ್ನುವಂತೆ ಬೂತ್ ಮಟ್ಟದಲ್ಲಿ ಪಕ್ಷದ ಪರವಾಗಿ ಮತ ಚಲಾವಣೆಯಾಗುವಂತೆ ನೋಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಬೇಡರಪುರ ಬಸವಣ್ಣ, ಉಪಾಧ್ಯಕ್ಷ ನಲ್ಲೂರು ಶಿವರುದ್ರ, ಪ್ರಧಾನ ಕಾರ್ಯದರ್ಶಿ ನಲ್ಲೂರು ಶ್ರೀನಾಥ್, ಆಲೂರು ಮಹಾಶಕ್ತಿ ಕೇಂದ್ರ ಪ್ರಭಾರಿ ಶಿವಾನಂದ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಮಹದೇವಪ್ಪ, ಕೆಡಿಪಿ ಸದಸ್ಯ ಜೆ.ಬಿ.ದೊರೆಸ್ವಾಮಿ, ಗ್ರಾಪಂ ಸದಸ್ಯರಾದ ಮಂಜುನಾಥ್, ಲಿಂಗನಾಯಕ, ಮಾಜಿ ಸದಸ್ಯ ನಯನರಾಜ್, ಶಕ್ತಿಕೇಂದ್ರ ಅಧ್ಯಕ್ಷ ದೊರೆಸ್ವಾಮಪ್ಪ, ಮುಖಂಡರಾದ ವೆಂಕಟೇಶ್, ಕೃಷ್ಣನಾಯಕ, ದೊರೆಸ್ವಾಮಿ, ಗಂಗಾಧರ, ನಾಗರಾಜ್, ಮಲ್ಲೇಶ್ ಪ್ರಭು, ಕೃಷ್ಣಯ್ಯ, ಪ್ರದೀಪ, ಜವರಶೆಟ್ಟಿ ಚಿನ್ನಸ್ವಾಮಿ ನಲ್ಲೂರು, ವಾರ್ಡ್ ಅಧ್ಯಕ್ಷ ರಾಜು, ಲಿಂಗರಾಜು, ಬಿ.ಶಂಕರ್, ರುದ್ರೇಶ್, ಸೋಮಿ, ಹೊಂಡರಬಾಳು ಲೋಕೇಶ್, ಎನ್.ಕೆ. ಚಂದ್ರಶೇಖರ ಇತರರು ಹಾಜರಿದ್ದರು.

ನಡೆದಾಡುವ ದೇವರಿಗೆ 'ನುಡಿನಮನ'



ಚಾಮರಾಜನಗರ, ಜ.10– ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜನಗರ ತಾಲೂಕು ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ ಭವನದಲ್ಲಿ ನಾಡಿನ ಸಂತ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರಿಗೆ ಭಕ್ತಿ ಪೂರ್ವಕ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಚಾಮರಾಜನಗರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ್ ಎನ್ ಋಗ್ವೇದಿ ಮಾತನಾಡಿ ಶತಮಾನ ಕಂಡ ಶ್ರೇಷ್ಠ ಸಂತ, ಸರಳ ಸಜ್ಜನ, ಭಾರತೀಯ ಪರಂಪರೆಯ ಸರಳತೆಯ ಸಾಕಾರ ಮೂರ್ತಿಯಾಗಿ ಲಕ್ಷಾಂತರ ಹೃದಯಗಳಲ್ಲಿ ಸದಾ ಕಾಲ ಉಳಿದಿದ್ದಾರೆ. ಸಿದ್ದೇಶ್ವರರ ಚಿಂತನೆಗಳು ಅವರ ವಿಚಾರಪೂರಿತ ಜ್ಞಾನ ಪ್ರತಿಯೊಬ್ಬರಿಗೂ ಆದರ್ಶವಾಗಿದೆ. ಅವರ ಸರಳತೆ, ಅಧ್ಯಯನಶೀಲತೆ, ಸಾಮಾಜಿಕ ಜವಾಬ್ದಾರಿ, ಸಮಾಜ ಪ್ರೀತಿ, ಜೀವನ ಪ್ರೀತಿ, ನಮಗೆಲ್ಲ ಮಾರ್ಗದರ್ಶನವಾಗಿದೆ ಎಂದರು.

ಬರಹಗಾರ ಲಕ್ಷ್ಮಿನರಸಿಂಹ ಮಾತನಾಡಿ ಶ್ರೀ ಸಿದ್ದೇಶ್ವರರು ಚಾಮರಾಜನಗರಕ್ಕೆ ಹಲವಾರು ಬಾರಿ ಭೇಟಿ ನೀಡಿ ತಮ್ಮ ವಿದ್ವತ್ ಪೂರ್ಣ ಚಿಂತನೆಯ ಮೂಲಕ ಸಾವಿರಾರು ಜನರಲ್ಲಿ ಪ್ರಭಾವ ಬೀರಿದ್ದಾರೆ. ಸರಳ ಶ್ರೇಷ್ಠ ಜೀವನ ನಡೆಸಿದ ಸಿದ್ದೇಶ್ವರರು ಕೋಟ್ಯಾಂತರ ಜನರಲ್ಲಿ ಸದಾ ಉಳಿದಿದ್ದಾರೆ. ಸಂತರ ಜೀವನ ಕೋಟ್ಯಾಂತರ ಜನರಲ್ಲಿ ಬೆಳಕಾಗಿ, ಸ್ಪೂರ್ತಿಯುತ ಶಕ್ತಿಯಾಗಿ ಉಳಿದಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಕಾರ್ಯದರ್ಶಿ ಮಹಾಲಿಂಗ ಗಿರಿಗಿ ತಾಲೂಕು ಕಾರ್ಯದರ್ಶಿ ಕಲೆ ನಟರಾಜು, ಸದಸ್ಯರಾದ ಶಿಕ್ಷಕಿ ಸರಸ್ವತಿ, ವೆಂಕಟೇಶ್ ಮೂರ್ತಿ, ನಿವೃತ್ತ ಉಪನ್ಯಾಸಕ ವೆಂಕಟೇಶ್, ಉಪನ್ಯಾಸಕ ಮೂರ್ತಿ ಬಿಸಲ್ವಾಡಿ, ರವಿಚಂದ್ರ ಪ್ರಸಾದ್, ಹೇಮಂತ್ ರಾಜ್ ಉಪಸ್ಥಿತರಿದ್ದರು.

ಇಂದು ನಗರದಲ್ಲಿ ಜಿಲ್ಲಾ ಮಟ್ಟದ ಗ್ರಾಮೀಣ ಕ್ರೀಡಾಕೂಟ

ಚಾಮರಾಜನಗರ, ಜ.10– ಜಿಲ್ಲಾಡಳಿತ, ಜಿಪಂ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಚಾಮರಾಜನಗರ ಜಿಲ್ಲಾ ಮಟ್ಟದ ಗ್ರಾಮೀಣ ಕ್ರೀಡಾಕೂಟವನ್ನು ಜನವರಿ 11 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ. ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಕಾರ್ಯಕ್ರಮ ಉದ್ಘಾಟಿಸುವರು.

ಮೈಸೂರು ಮಿತ್ರ

ಒಂದನೇ ಪುಟದಿಂದ

ಹಗರಣಗಳ ಪಟ್ಟಿ ಬಿಡುಗಡೆ

ವಕ್ಕರಿಸಿಕೊಂಡಿದೆ. ಕೋಟ್ಯಾಂತರ ರೂಪಾಯಿ ಪಾಪದ ಹಣವನ್ನು ಖರ್ಚು ಮಾಡಿ, ಶಾಸಕರನ್ನು ಕೊಂಡುಕೊಂಡು ಸರ್ಕಾರ ರಚನೆ ಮಾಡಿದ್ದಾರೆ. ಇದಕ್ಕೆ ಖರ್ಚು ಮಾಡಿದ ಸಂಪೂರ್ಣ ಹಣ ಭ್ರಷ್ಟಾಚಾರದ್ದು. ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಭ್ರಷ್ಟಾಚಾರದ ಸಾಗರದಲ್ಲಿ ಮುಳುಗಿಹೋಗಿದ್ದಾರೆ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದ ಮೇಲಂತೂ ರಾಜ್ಯಕ್ಕೆ ದೊಡ್ಡ ಕಳಂಕವನ್ನು ತಂದಿದ್ದಾರೆ.

ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿರುವಾಗ ಕೊರೊನಾ ಸಂದರ್ಭದಲ್ಲಿ ಸುಮಾರು 2500 ಇಂದ 3000 ಕೋಟಿ ರೂಪಾಯಿ ಭ್ರಷ್ಟಾಚಾರ ಮಾಡಿದರು. ಇದನ್ನು ಸದನದಲ್ಲಿ ಪ್ರಸ್ತಾಪ ಮಾಡಿದಾಗ ಸರ್ಕಾರ ಉತ್ತರ ನೀಡದೆ ಜಾರಿಕೊಂಡಿತು. ಈ ವೇಳೆ ಸುಮಾರು 3.5 ಲಕ್ಷ ಜನ ಸತ್ತುಹೋದರು. ಇದರಲ್ಲೂ ಸುಳ್ಳು ಲೆಕ್ಕ ನೀಡಿದರು.

ರಾಜ್ಯ ಕಂಡಂತಹ ಅತ್ಯಂತ ದುರ್ಬಲ ಮುಖ್ಯಮಂತ್ರಿ ಎಂದರೆ ಬಸವರಾಜ ಬೊಮ್ಮಾಯಿ. ಇವರು ಬರೀ ಭ್ರಷ್ಟ ಮಾತ್ರವಲ್ಲ, ಕೇಂದ್ರ ಸರ್ಕಾರದ ಮುಂದೆ ಹೇಡಿತನದಿಂದ ವರ್ತಿಸುವ ದುರ್ಬಲ ವ್ಯಕ್ತಿ ಕೂಡ ಹೌದು ಎಂದರು. ರಾಜ್ಯದ ಎಲ್ಲ ವರ್ಗಗಳು ಬಿಜೆಪಿ ಸರ್ಕಾರದಿಂದ ಭಯಗೊಂಡಿದ್ದು ಈ ಹಿನ್ನೆಲೆಯಲ್ಲಿ ಅಧಿಕಾರದಿಂದ ಅದನ್ನು ಕೆಳಗಿಳಿಸಲು ನಮ್ಮ ಜೊತೆ ಕೈ ಜೋಡಿಸಿ ಎಂದು ಮನವಿ ಮಾಡಿಕೊಂಡರು.

ಹೊಸ ವರ್ಷ, ಹೊಸ ಪರ್ವ. ಬದಲಾವಣೆ ಹಾಗೂ ಕಾಂಗ್ರೆಸ್ ಪಕ್ಷದ ವಿಜಯ ಪರ್ವ ಆರಂಭವಾಗಿದೆ ಎಂದ ಅವರು, ಪವಿತ್ರವಾದ ಗಳಿಗೆಯಲ್ಲಿ ಜನರಿಗಾಗಿ ಪ್ರಜಾಧ್ವನಿ ಯಾತ್ರೆ ಕೈಗೊಂಡಿದ್ದೇವೆ. ಈ ಸಂದರ್ಭದಲ್ಲಿ ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಮತ್ತು ವೈಫಲ್ಯಗಳನ್ನು ಜನರ ಮುಂದಿಡುವುದಾಗಿ ಹೇಳಿದರು. ಜನರ ಭಾವನೆ ತಿಳಿಸಲು ಕಳೆದ ಎರಡು ಮೂರು ವರ್ಷಗಳಿಂದ ಕಾಂಗ್ರೆಸ್ ಪಕ್ಷ ಸತತವಾಗಿ ಪ್ರಯತ್ನಿಸಿದೆ. ಈ ಪ್ರಜಾಧ್ವನಿ ಯಾತ್ರೆ ಪ್ರಜೆಗಳ ಧ್ವನಿ, ಪ್ರಜೆಗಳ ಭಾವನೆಯೂ ಆಗಿದೆ. ನಾವು ಋಣಾತ್ಮಕತೆ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಸಕಾರಾತ್ಮಕತೆ ಬಗ್ಗೆ ಯೋಚಿಸುತ್ತಿದ್ದೇವೆ. ಕಳೆದ ಮೂರೂವರೆ ವರ್ಷಗಳಿಂದ ಬಿಜೆಪಿ ಸರ್ಕಾರದ ವೈಫಲ್ಯ, ನಾವು ಜನರ ಬದುಕಿಗಾಗಿ ಏನು ಮಾಡಲು ಸಿದ್ಧವಿದ್ದೇವೆ ಎಂದು ತಿಳಿಸಲು ನಾವು ಈ ಪ್ರಜಾಧ್ವನಿ ಯಾತ್ರೆ ಆರಂಭಿಸಿದ್ದೇವೆ.

ನಮ್ಮೊಂದಿಗೆ ಕೈಜೋಡಿಸಿ...

ಈ ಯಾತ್ರೆಯ ಲೋಗೋವನ್ನು ಅನಾವರಣ ಮಾಡುತ್ತೇವೆ. ಬಿಜೆಪಿ ಪಾಪದ ಪುರಾಣವನ್ನು ಜನರ ಮುಂದಿಟ್ಟು, ಜನರ ಹೃದಯ ಗೆದ್ದು ಬದಲಾವಣೆ ತರಲು ಮುಂದಾಗಿದ್ದೇವೆ. ರಾಜ್ಯದ ಎಲ್ಲ ಜನರು ತಮ್ಮ ಕೈಯ್ಯನ್ನು ನಮ್ಮ ಕೈ ಜತೆ ಜೋಡಿಸಿ. ಒಗ್ಗಟ್ಟಿನಿಂದ ಬದಲಾವಣೆ ಮಾಡೋಣ ಎಂದು ಕೇಳಿಕೊಳ್ಳುತ್ತೇನೆ. ಆ ಮೂಲಕ ಕೈ ಜೋಡಿಸಿ ಕರುನಾಡಿಗಾಗಿ. ನಿಮ್ಮ ಹಕ್ಕು ನಮ್ಮ ಹೋರಾಟ. ಈ ಬಗ್ಗೆ ವೆಬ್ ಸೈಟ್ ಆರಂಭಿಸಿದ್ದು, prajadhwani.comಗೆ ಹಾಗೂ ದೂರವಾಣಿ ಸಂಖ್ಯೆ 9537 224 224ಕ್ಕೆ ಕರೆ ಮಾಡಿ ನಿಮ್ಮ ಅಭಿಪ್ರಾಯವನ್ನು ಕಳುಹಿಸಿಕೊಡಿ.

ಬಿಜೆಪಿ ನೀಡಿದ 600 ಭರವಸೆಗಳಲ್ಲಿ 550 ಈಡೇರಿಸಿಲ್ಲ!

ಬಿಜೆಪಿ ತಾನು ಕೊಟ್ಟ 600 ಭರವಸೆಗಳ ಪೈಕಿ 550 ಭರವಸೆಗಳನ್ನು ಈಡೇರಿಸಲಿಲ್ಲ. ನಾವು ಈ ಬಗ್ಗೆ ಕಳೆದ ಎರಡು ತಿಂಗಳಿಂದ ಪ್ರತಿನಿತ್ಯ ನಿಮ್ಮ ಹತ್ತಿರ ಉತ್ತರ ಇದೆಯಾ ಎಂದು ಕೇಳುತ್ತಿದ್ದೇವೆ. ಬಿಜೆಪಿಯರಿಗೆ ಮಾತ್ರ ಉತ್ತರ ನೀಡಲಾಗುತ್ತಿಲ್ಲ. ರಾಜ್ಯದ 2 ಲಕ್ಷ ಯುವಕರು ತಮಗೆ ಆಗಿರುವ ಅನ್ಯಾಯದ ಬಗ್ಗೆ ಧ್ವನಿ ಎತ್ತಿದ್ದಾರೆ. ಈ ಬಗ್ಗೆಯೂ ಉತ್ತರ ನೀಡಿಲ್ಲ. 2 ಲಕ್ಷ ಗುತ್ತಿಗೆದಾರರು 40 % ಕಮಿಷನ್ ಕಿರುಕುಳ ತಾಳಲಾಗುತ್ತಿಲ್ಲ ಎಂದು ಧ್ವನಿ ಎತ್ತಿದ್ದಾರೆ. ಅದಕ್ಕೂ ಈ ಸರಕಾರ ಪರಿಹಾರ ನೀಡ ಲಿಲ್ಲ. ಎಲ್ಲ ವರ್ಗದ ಜನ ಭಯದಲ್ಲಿ ಬದುಕುತ್ತಿದ್ದಾರೆ.

ರಾಜ್ಯದಲ್ಲಿ 83,190 ಯುವಕರು ಉದ್ಯೋಗ ಕಳೆದು ಕೊಂಡಿದ್ದಾರೆ. 1258 ಕಂಪನಿಗಳು ಬಾಗಿಲು ಹಾಕುವ ಪರಿಸ್ಥಿತಿ ಬಂದಿದೆ. ಬಂಡವಾಳ ಹೂಡಿಕೆದಾರರು ನೆರೆ ರಾಜ್ಯಕ್ಕೆ ವಲಸೆ ಹೋಗುತ್ತಿದ್ದಾರೆ. ಇದು ರಾಜ್ಯಕ್ಕೆ ಅಪಮಾನಕರ ಸಂಗತಿ. ಪಿಎಸ್ಐ, ಜೆಇಇ, ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಹಗರಣ ಮಾಡಿ ಅನ್ಯಾಯ ಎಸಗಲಾಗಿದೆ. ಐಪಿಎಸ್, ಐಎಎಸ್ ಅಧಿಕಾರಿಗಳು ಜೈಲು ಸೇರುವ ಇತಿಹಾಸವನ್ನು ಬಿಜೆಪಿ ಸೃಷ್ಟಿಸಿದೆ. ರೈತರ ಆದಾಯ ಡಬಲ್ ಮಾಡುತ್ತೇವೆ, ಬೆಂಬಲ ಬೆಲೆ ನೀಡುತ್ತೇವೆ ಎಂದರು. ಆದರೆ ಏನಾಯ್ತು. ರೈತನಿಗೆ ಬೆಂಬಲ ಬೆಲೆ ನಿಗದಿ ಮಾಡಲಿಲ್ಲ. ಕೇಂದ್ರ ಸರ್ಕಾರ ಕರಾಳ ಕಾಯ್ದೆ ರದ್ದು ಮಾಡಿದರೂ ರಾಜ್ಯದಲ್ಲಿ ಮಾಡಲಿಲ್ಲ. ಇದರ ಬಗ್ಗೆ ಪ್ರಶ್ನೆ ಮಾಡಿ ಪ್ರತಿಭಟನೆ ಮಾಡಿದರೆ ನಮ್ಮ ಮೇಲೆ ಕೇಸ್ ಹಾಕುತ್ತಾರೆ. ನಾವು ಈ ಕೇಸ್‌ಗಳಿಗೆ ಹೆದರುವುದಿಲ್ಲ.

ಸಿದ್ದರಾಮಯ್ಯ, ಡಿಕೆಶಿ ನೇತೃತ್ವ

ಬಿಡುಗಡೆ ಮಾಡಿದ್ದೇವೆ ಎಂದ ಅವರು, ಬಿಜೆಪಿಯವರು ಅನೈತಿಕ ಮಾರ್ಗಗಳ ಮೂಲಕ ಸರ್ಕಾರ ರಚಿಸಿದರು. ಹೀಗಾಗಿ ಬೆಳಗಾವಿಯಿಂದ ಆರಂಭಗೊಂಡು ಎಲ್ಲಾ ಜಿಲ್ಲೆಗಳಲ್ಲಿ ಬಸ್ ಯಾತ್ರೆ ಕೈಗೊಳ್ಳಲಿದ್ದೇವೆ ಎಂದು ಸಿದ್ದರಾಮಯ್ಯ ಹೇಳಿದರು.

ಬಳಿಕ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, ಮಹಾತ್ಮಗಾಂಧಿ ಬೆಳಗಾವಿಯಲ್ಲಿ ತಂಗಿದ್ದ ಗಾಂಬಾವಿಯಿಂದ ನಾಳೆ ಪ್ರಜಾಧ್ವನಿ ರಥಯಾತ್ರೆ ಆರಂಭವಾಗಲಿದೆ. ಮೊದಲ ಹಂತದಲ್ಲಿ ನಾನು ಮತ್ತು ಸಿದ್ದರಾಮಯ್ಯ ಜೊತೆಯಾಗಿ 20 ಜಿಲ್ಲೆಗಳಲ್ಲಿ ಸಂಚರಿಸಲಿದ್ದೇವೆ. ಜನವರಿ 28ರವರೆಗೆ ನಿರಂತರವಾಗಿ ರಥಯಾತ್ರೆ ನಡೆಯಲಿದೆ. ಬಳಿಕ ನಾವಿಬ್ಬರು ಪ್ರತ್ಯೇಕ ತಂಡಗಳಲ್ಲಿ ಕ್ಷೇತ್ರವಾರು ಪ್ರವಾಸ ಮಾಡುತ್ತೇವೆ ಎಂದು ತಿಳಿಸಿದರು.

ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಸಲೀಂ ಅಹಮದ್, ಮಾಜಿ ಸಚಿವ ಜಮೀರ್ ಅಹಮದ್ ಖಾನ್, ಮಾಧ್ಯಮ ವಿಭಾಗದ ಅಧ್ಯಕ್ಷ ಪ್ರಿಯಾಂಕ ಖರ್ಗೆ, ಶಾಸಕರಾದ ಅಖಂಡ ಶ್ರೀನಿವಾಸ ಮೂರ್ತಿ, ದಿನೇಶ್ ಗೂಳಿಗೌಡ ಮತ್ತಿತರರು ಉಪಸ್ಥಿತರಿದ್ದರು. ಇದಕ್ಕೂ ಮೊದಲು ಡಿ.ಕೆ.ಶಿವಕುಮಾರ್ ರಥಯಾತ್ರೆಗೆ ಬಳಸಿಕೊಳ್ಳುವ ಬಸ್ ಅನ್ನು ಪರಿಶೀಲಿಸಿದರು. ಕಾರ್ಯಕ್ರಮದಲ್ಲಿ ಪ್ರಜಾಧ್ವನಿ ಯಾತ್ರೆಯ ಲಾಂಛನವನ್ನು ಬಿಡುಗಡೆ ಮಾಡಲಾಯಿತು.

ನಾಲ್ವರು ಕಳ್ಳರ ಬಂಧನ

ಈಶ್ವರ ದೇವಸ್ಥಾನ, ಕೆದಮಳ್ಳೂರು ಶ್ರೀ ಮಹಾದೇವ ದೇವಸ್ಥಾನ, ನಾಪೋಕ್ಲು ಮಕ್ಕಿ ಶಾಸ್ತಾವು ದೇವಸ್ಥಾನಗಳಿಂದ ನೂರಾರು ಗಂಟೆಗಳನ್ನು ಕಳವು ಮಾಡಲಾಗಿತ್ತು. ಸಿ.ಸಿ. ಕ್ಯಾಮರಾಗಳಿಗೆ ಹಾನಿ ಮಾಡಿ ದೇವಾಲಯಗಳ ಆವರಣದಲ್ಲಿದ್ದ ವಿವಿಧ ಲೋಹಗಳ ಗಂಟೆಗಳನ್ನು ಕದ್ದಿದ್ದರು. ಇದು ಭಕ್ತರ ಭಾವನೆಗೆ ಧಕ್ಕೆ ತಂದಿತ್ತಲ್ಲದೇ, ಆರೋಪಿಗಳ ಬಂಧನಕ್ಕೆ ತೀವ್ರ ಒತ್ತಡವಿತ್ತು.

ವಿಶೇಷ ತಂಡ ರಚನೆ: ದೇವಾಲಯಗಳ ಗಂಟೆಗಳನ್ನೇ ಟಾರ್ಗೆಟ್ ಮಾಡಿ ಕಳವು ನಡೆಸುತ್ತಿದ್ದ ಆರೋಪಿಗಳ ಬಂಧನಕ್ಕೆ ಒಂದು ವಿಶೇಷ ತಂಡವನ್ನು ರಚನೆ ಮಾಡಲಾಗಿತ್ತು. ಒಟ್ಟು 30 ಮಂದಿಯ ಈ ತಂಡ ಎಲ್ಲಾ ಮೂಲಗಳಿಂದ ಮಾಹಿತಿ ಕಲೆ ಹಾಕಿತ್ತಲ್ಲದೇ, ಘಟನೆ ನಡೆದ ಸ್ಥಳದಲ್ಲಿದ್ದ ಸಿ.ಸಿ. ಕ್ಯಾಮರಾ ಮತ್ತು ತಾಂತ್ರಿಕ ಸಾಕ್ಷಿಗಳನ್ನು ಸಂಗ್ರಹಿಸಿ ಆರೋಪಿಗಳ ಬೆನ್ನು ಹತ್ತಿತ್ತು.

3 ತಿಂಗಳ ಕ್ಯಾಂಪ್: ಟವರ್ ಲೊಕೇಶನ್, ಮೊಬೈಲ್ ಕರೆ ಮತ್ತಿತ್ತರ ಮಾಹಿತಿಗಳನ್ನು ಕಳೆದ 3 ತಿಂಗಳಿಂದ ಕಲೆ ಹಾಕಿದ್ದ ಪೊಲೀಸರ ವಿಶೇಷ ತಂಡ, ಇದಕ್ಕಾಗಿಯೇ ಮೈಸೂರಿನಲ್ಲಿ 3 ತಿಂಗಳಿಂದ ಕ್ಯಾಂಪ್ ಹೂಡಿತ್ತು. ಗಂಟೆ ಕಳವು ನಡೆದಿದ್ದ ಸ್ಥಳದಿಂದ ಮೈಸೂರುವರೆಗೆ ಅಳವಡಿಸಿದ್ದ ಎಲ್ಲಾ ಸಿ.ಸಿ. ಕ್ಯಾಮರಾಗಳ ಜಾಡು ಹಿಡಿದ ಪೊಲೀಸ್ ತಂಡ ಮಾಲು ಸಹಿತ ಆರೋಪಿಗಳನ್ನು ಬಂಧಿಸಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಮಲ್ಜೀರ ಅಯ್ಯಪ್ಪ ವಿವರಿಸಿದರು. ಆರೋಪಿಗಳು ಗಂಟೆಗಳನ್ನು ಕರಗಿಸಿ ಲೋಹವನ್ನು ಕೈಗಾರಿಕೆಗಳಿಗೆ ಮಾರಾಟ ಮಾಡುತ್ತಿದ್ದರು. ಗಂಟೆ ಕಳವು ನಡೆಸುವ ಮುನ್ನಾ ಆರೋಪಿಗಳು ಮಾಹಿತಿ ಕಲೆ ಹಾಕುತ್ತಿದ್ದರು. ತದನಂತರ ರಾತ್ರಿ ವೇಳೆ ಸಮಯ ಸಾಧಿಸಿ ದೇವಾಲಯದಲ್ಲಿ ಅಳವಡಿಸಿದ್ದ ಸಿ.ಸಿ. ಕ್ಯಾಮರಾಗಳಿಗೆ ಹಾನಿಪಡಿಸಿ ಗಂಟೆಗಳನ್ನು ಕಳವು ಮಾಡುತ್ತಿದ್ದರು. ಇದಕ್ಕಾಗಿ ಮೆಟಲ್ ಕಟ್ಟರ್ ಬಳಸುತ್ತಿದ್ದರು. ಬಳಿಕ ದೆಹಲಿ ನೋಂದಣಿ ಹೊಂದಿದ್ದ ಡಿಎಲ್.4ಸಿ–ಎಜಿ8070 ಹುಂಡೈ ಗೆಟ್ಸ್ ಕಾರಿನಲ್ಲಿ ಕಳವು ಮಾಡಿದ ಗಂಟೆಗಳನ್ನು ಸಾಗಿಸುತ್ತಿದ್ದರು ಎಂದು ಎಸ್.ಪಿ. ಅಯ್ಯಪ್ಪ ಮಾಹಿತಿ ನೀಡಿದರು.

ಅಂತರ ಜಿಲ್ಲಾ ಕಳ್ಳರು: ಬಂಧಿತ ಆರೋಪಿಗಳು ಪಿರಿಯಾಪಟ್ಟಣ, ಹಾಸನ, ಮೈಸೂರು, ಚಾಮರಾಜನಗರ ಸೇರಿದಂತೆ ವಿವಿಧ ಕಡೆಗಳಲ್ಲಿ ಗಂಟೆಗಳನ್ನು ಕದ್ದಿರುವ ಮಾಹಿತಿ ವಿಚಾರಣೆಯಿಂದ ತಿಳಿದು ಬಂದಿದೆ. ಈ ಕುರಿತು ಎಲ್ಲಾ ಪೊಲೀಸ್ ಠಾಣೆಗಳಿಗೆ ಮಾಹಿತಿ ರವಾನಿಸಲಾಗಿದ್ದು, ಆಯಾ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವ ಗಂಟೆ ಕಳುವಿನ ಕುರಿತು ಮಾಹಿತಿ ಕೇಳಲಾಗಿದೆ. ಆರೋಪಿಗಳು ಒಂದೇ ಕುಟುಂಬದವರಾಗಿದ್ದು, ಕೊಡಗು ಜಿಲ್ಲೆಯೊಂದಿಗೆ ಯಾವುದೇ ಸಂಪರ್ಕ ಹೊಂದಿಲ್ಲ. ಪ್ರಕರಣದ ಕುರಿತು ಹೆಚ್ಚಿನ ತನಿಖೆಯೂ ಪ್ರಗತಿಯಲ್ಲಿದೆ. ಗಂಟೆ ಕಳವು ಕೃತ್ಯಕ್ಕೆ ಬಳಸಲಾಗಿದ್ದ ಕಾರಿನ ಬಗ್ಗೆಯೂ ಸಂಶಯವಿದೆ. ಈ ಹಿನ್ನೆಲೆಯಲ್ಲಿ ಅದರ ದಾಖಲೆಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಅಯ್ಯಪ್ಪ ವಿವರಿಸಿದರು.

ನೂರಾರು ಕೆ.ಜಿ. ಗಂಟೆ: ಆರೋಪಿಗಳು ಜಿಲ್ಲೆಯ ವಿವಿಧ ದೇವಾಲಯಗಳಿಂದ ನೂರಾರು ಕೆ.ಜಿ. ತೂಕದ ಗಂಟೆಗಳನ್ನು ಕಳವು ಮಾಡಿದ್ದರು.

ಈ ಪೈಕಿ ಸಣ್ಣ ಗಾತ್ರದ ಗಂಟೆಯೊಂದಿಗೆ 80 ಕೆ.ಜಿ. ಹಾಗೂ 120 ಕೆ.ಜಿ. ತೂಕದ ಲೋಹದ ಗಂಟೆಗಳನ್ನು ಕಳವು ಮಾಡಿದ್ದರು. ಸುದ್ದಿಗೋಷ್ಠಿಗೆ ಕಳವು ಮಾಡಲಾಗಿದ್ದ 750 ಕೆ.ಜಿ. ತೂಕದ ಗಂಟೆಗಳನ್ನು ಮಿನಿ ಗೂಡ್ಸ್ ವಾಹನದಲ್ಲಿ ಪೊಲೀಸರು ತಂದಿದ್ದರು. ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟ ಪ್ರಕರಣಗಳ ಗಂಟೆಗಳನ್ನು ವಿಂಗಡಿಸಿ ಪ್ರತ್ಯೇಕ ಇಡಲಾಗಿತ್ತು. ಈ ಪೈಕಿ 80 ಮತ್ತು 120 ಕೆ.ಜಿ. ತೂಕದ ಗಂಟೆಗಳನ್ನು ವಾಹನದಿಂದ ಇಳಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು.

ಪ್ರಸಾದ ಯೋಜನೆಯಡಿ ಚಾಮುಂಡಿಬೆಟ್ಟ ಅಭಿವೃದ್ಧಿಗೆ ತೀವ್ರ ವಿರೋಧ

ಜನಜಾಗೃತಿ ಮೂಲಕ ಹೋರಾಟ ನಡೆಸಲು ವಿವಿಧ ಸಂಘ-ಸಂಸ್ಥೆಗಳು, ಚಾಮುಂಡಿಬೆಟ್ಟ ಹಿತಾಸಕ್ತಿಗಳ ನಿರ್ಧಾರ



ಮೈಸೂರು, ಜ.10(ಎಂಕೆ)– ಧಾರ್ಮಿಕ ಕ್ಷೇತ್ರವಾಗಿರುವ ಚಾಮುಂಡಿಬೆಟ್ಟದಲ್ಲಿ ಪ್ರಸಾದ ಯೋಜನೆ ಹೆಸರಿನಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ತಡೆಯುವುದಕ್ಕೆ ಸರಣಿ ಹೋರಾಟ ನಡೆಸಲು ಚಾಮುಂಡಿ ಬೆಟ್ಟ ಉಳಿಸಿ ಹೋರಾಟ ಸಮಿತಿ ಸೇರಿದಂತೆ ಹಲವು ಸಂಘ–ಸಂಸ್ಥೆಗಳಿಂದ ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಸಭೆ ಸೇರಿದ ಸಮಿತಿ ಸದಸ್ಯರು ಹಾಗೂ ಹಲವು ಸಂಘಟನೆಗಳ ಮುಖಂಡರು, ಚಾಮುಂಡಿಬೆಟ್ಟದ ಮೇಲೆ ನಡೆಯುತ್ತಿರುವ ಕಾಮಗಾರಿಗಳು ಇದೇ ರೀತಿ ಮುಂದುವರೆದರೆ ಬೆಟ್ಟದ ಪಾವಿತ್ರ್ಯತೆ ಹಾಳಾಗುವುದರ ಜೊತೆಗೆ ಸಾಕಷ್ಟು ಹಾನಿಯುಂಟಾಗಲಿದೆ. ಆದ್ದರಿಂದ ಧಾರ್ಮಿಕ ಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿರುವ ಚಾಮುಂಡಿಬೆಟ್ಟವನ್ನು ಇರುವಂತೆಯೇ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹೋರಾಟ ನಡೆಸಬೇಕಾಗಿದೆ ಎಂದು ನಿರ್ಧರಿಸಿದರು.

ಈಗಾಗಲೇ ದೇವಿಕೆರೆಗೆ ಹೊಸರೂಪ ನೀಡುತ್ತೇವೆಂದು ಜೆಸಿಬಿಗಳಿಂದ ಹೂಳೆತ್ತಿಸುತ್ತಿದ್ದಾರೆ. ಇದರಿಂದ ಬೆಟ್ಟ ಇನ್ನಷ್ಟು ಸಡಿಲವಾಗುವ ಸಾಧ್ಯತೆ ಇದೆ. ಬೃಹತ್ ಪಾರ್ಕಿಂಗ್ ಕಟ್ಟಡ ನಿರ್ಮಾಣವಾಗಿದೆ ಬೆಟ್ಟದ ಪಾದದಲ್ಲಿ ಆಗಬೇಕಾಗಿದ್ದ ಅಭಿವೃದ್ಧಿ ಕಾಮಗಾರಿಗಳು ಬೆಟ್ಟದ ಮೇಲಾಗುತ್ತಿದೆ. ಹಲವು ಭಾರೀ ಬೆಟ್ಟ ಕುಸಿದಿದ್ದರೂ ಎಚ್ಚೆತ್ತುಕೊಳ್ಳದೆ ಬೆಟ್ಟ ದಿನದಿಂದ ದಿನಕ್ಕೆ ಹಾಳಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಇನ್ನೆರಡು ದಿನದಲ್ಲಿ ಹೋರಾಟ ಆರಂಭ: ಚಾಮುಂಡಿಬೆಟ್ಟದ ಉಳಿವಿಗಾಗಿ ಪೂರ್ವ ತಯಾರಿಯೊಂದಿಗೆ ಇನ್ನೆರಡು ದಿನಗಳಿಂದ ಹೋರಾಟ ಆರಂಭಿಸಬೇಕಾಗಿದೆ. ಚಾಮುಂಡಿಬೆಟ್ಟ ಇತಿಹಾಸ, ಪ್ರಾಮುಖ್ಯತೆ ಹಾಗೂ ಪಾವಿತ್ರ್ಯತೆ ಕುರಿತು ಜನತೆಗೆ ತಿಳಿಸುವ ನಿಟ್ಟಿನಲ್ಲಿ ಬೆಟ್ಟದ ಸುತ್ತಲೂ ಜಾಥಾ ನಡೆಸುವುದು. ಚಿತ್ರ ಪ್ರದರ್ಶನ ಏರ್ಪಡಿಸುವುದು. ನಂತರ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸಲು ತೀರ್ಮಾನಿಸಲಾಯಿತು.

ಮೈಸೂರು ಗ್ರಾಹಕ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಭಾಮಿ ಶೆಣೈ ಮಾತನಾಡಿ, ಚಾಮುಂಡಿ ಬೆಟ್ಟ ಉಳಿಸಬೇಕಾದರೆ ನಿರಂತರ ಹೋರಾಟ ಅವಶ್ಯವಾಗಿದೆ. ನಗರದ ಪ್ರತೀ ಪಾರ್ಕ್‌ಗಳಲ್ಲಿಯೂ ಜಾಗೃತಿ ಅಭಿಯಾನ ನಡೆಸಬೇಕು. ಸಾರ್ವಜನಿಕರ ಬೆಂಬಲದೊಂದಿಗೆ ಜಾಥಾ, ಚಿತ್ರ ಪ್ರದರ್ಶನ ಹಾಗೂ ಅಂತಿಮವಾಗಿ ಉಪವಾಸ ಸತ್ಯಾಗ್ರಹ ನಡೆಸಬೇಕು ಎನ್ನುತ್ತಿದ್ದಂತೆ ಸಭೆಯಲ್ಲಿ ಎಲ್ಲರೂ ಬೆಂಬಲ ವ್ಯಕ್ತಪಡಿಸಿದರು.

ಪ್ರೊ.ಕೆ.ಕಾಳಚೆನ್ನೇಗೌಡ ಮಾತನಾಡಿ, ಪ್ರಸಾದ ಯೋಜನೆ ಹೆಸರಿನಲ್ಲಿ ಚಾಮುಂಡಿಬೆಟ್ಟದ ಮೇಲೆ ನಡೆಯುತ್ತಿರುವ ಕಟ್ಟಡ ನಿರ್ಮಾಣ ಕಾಮಗಾರಿಗಳು ನಿಲ್ಲಬೇಕು. ಜನಪ್ರತಿನಿಧಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸುವುದರಿಂದ ಯಾವುದೇ ಪ್ರಯೋಜನವಿಲ್ಲ ಅಧಿಕಾರಿಗಳಿಗೆ ಪರಿಸರ ಜ್ಞಾನ ಇರುವುದಿಲ್ಲ. ಆದ್ದರಿಂದ ಸಾಧ್ಯವಾದರೆ ಕಾನೂನು ಹೋರಾಟ ನಡೆಸಬೇಕು ಎಂದು ಸಲಹೆ ನೀಡಿದರು.

ಇತಿಹಾಸ ತಜ್ಞ ಪ್ರೊ.ರಂಗರಾಜು ಮಾತನಾಡಿ, ಧಾರ್ಮಿಕ ಕ್ಷೇತ್ರವಾದ ಚಾಮುಂಡಿ ಬೆಟ್ಟದ ಪಾವಿತ್ರ್ಯತೆ ಉಳಿಯಬೇಕಾದರೆ ಮೈಸೂರು ಬಂದ್ ಮಾದರಿಯಲ್ಲಿ ಪ್ರತಿಭಟನೆ ನಡೆಸಬೇಕು. ಬೆಟ್ಟದ ಇತಿಹಾಸ ಅರಿಯದೆ ಎಲ್ಲೆಡೆ ಕಾಂಕ್ರೀಟ್ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ತೀವ್ರ ಬೇಸರ ವ್ಯಕ್ತಪಡಿಸಿದರು.

ಹಾಗೆಯೇ ಸಭೆಯಲ್ಲಿ ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಪರಿಸರ ಬಳಗದ ಪರಶುರಾಮೇಗೌಡ, ಪ್ರೊ.ಕಾಳೇಗೌಡ ನಾಗವಾರ ಸೇರಿದಂತೆ ಕ್ಲೀನ್ ಮೈಸೂರು, ಮೈಸೂರು ಗ್ರಾಹಕ ಪರಿಷತ್ ಸೇರಿದಂತೆ ಹಲವು ಸಂಘ–ಸಂಸ್ಥೆಗಳ ಮುಖಂಡರು ಭಾಗವಹಿಸಿದ್ದರು.

ಮನೆಗಳ ಬಾಗಿಲು ಮೀಟಿ ಚಿನ್ನಾಭರಣ ದೋಚುತ್ತಿದ್ದ ಖದೀಮನ ಬಂಧನ



ಮೈಸೂರು, ಜ.10(ಎಂಕೆ)– ಮನೆಗಳ ಬಾಗಿಲು ಮೀಟಿ ನಗದು, ಚಿನ್ನಾಭರಣ ದೋಚುತ್ತಿದ್ದ ಖದೀಮನೋರ್ವನನ್ನು ಬಂಧಿಸಿರುವ ಕುವೆಂಪುನಗರ ಠಾಣೆ ಪೊಲೀಸರು ಬಂಧಿತನಿಂದ 2 ಲಕ್ಷ ರೂ. ಮೌಲ್ಯದ 40 ಗ್ರಾಂ ಚಿನ್ನಾಭರಣಗಳನ್ನು ವಶಕ್ಕೆ ಪಡೆದಿದ್ದಾರೆ.

ಹಾಸನದ ಹಳಸಿನಹಳ್ಳಿ ಗ್ರಾಮದ ನಿವಾಸಿ ಮಂಜ ಅಲಿಯಾಸ್ ಮಂಜುನಾಥ್(51) ಬಂಧಿತ ಆರೋಪಿ. ಕುವೆಂಪುನಗರ ಪೊಲೀಸ್ ಠಾಣೆ ವ್ಯಾಪ್ತಿಯ ವಾಸು ಬಡಾವಣೆಯ 10 ನೇ ಕ್ರಾಸ್‌ನ ಕುಶಾಲಪ್ಪ ಎಂಬುವರ ಮನೆಯಲ್ಲಿ 2022ರ ಡಿ.9ರಂದು ಕಳ್ಳತನವಾಗಿದ್ದು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಕುವೆಂಪುನಗರ ಠಾಣೆ ಪೊಲೀಸರು ಮನೆಗಳಲ್ಲಿ ಬಾಗಿಲು ಮೀಟಿ ಚಿನ್ನಾಭರಣ ದೋಚುತ್ತಿದ್ದ ಆರೋಪಿಯನ್ನು ಜ.1 ರಂದು ಶ್ರೀರಾಂಪುರದ ಭವ್ಯ ಭಾರತ್‌ನಗರದಲ್ಲಿ ಬಂಧಿಸಿದ್ದಾರೆ.

ಬಂಧಿತ ಆರೋಪಿ ವಿರುದ್ಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ 2 ಪ್ರಕರಣ ಹಾಗೂ ಅರಸೀಕೆರೆ, ಚಿಕ್ಕಮಗಳೂರಿನಲ್ಲಿ ಆರು ಮನೆ ಕಳವು ಪ್ರಕರಣಗಳು ದಾಖಲಾಗಿದ್ದು, ಈ ಹಿಂದೆಯೇ ಐದು ವರ್ಷ ಜೈಲುವಾಸ ಅನುಭವಿಸಿದ್ದಾನೆ ಎಂದು ವಿಚಾರಣೆ ವೇಳೆ ತಿಳಿದು ಬಂದಿದೆ.

ಡಿಸಿಪಿ ಗೀತಾ ಪ್ರಸನ್ನ, ಎಸಿಪಿ ಎಸ್.ಇ.ಗಂಗಾಧರಸ್ವಾಮಿ ಮಾರ್ಗದರ್ಶನದಲ್ಲಿ ನಡೆದ ಪತ್ತೆ ಕಾರ್ಯದಲ್ಲಿ ಕುವೆಂಪುನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎಲ್.ಅರುಣ್, ಪಿಎಸ್ಐ ಗೋಪಾಲ್, ಸಿಬ್ಬಂದಿಗಳಾದ ಹಜರತ್, ಸುರೇಶ್, ಎಂ.ಪಿ.ಮಂಜುನಾಥ್, ಎನ್.ಕೆ.ಪುಟ್ಟಪ್ಪ, ಚಿಕ್ಕಬಸವೇಗೌಡ ಭಾಗವಹಿಸಿದ್ದರು.

ಅಪರಿಚಿತ ಶವ ಪತ್ತೆ

ಮೈಸೂರು, ಜ.10– ಮೈಸೂರು ಮತ್ತು ಅಶೋಕಪುರಂ ರೈಲು ನಿಲ್ದಾಣಗಳ ನಡುವೆ ಸುಮಾರು 45–50 ವರ್ಷದ ವ್ಯಕ್ತಿ ಮೃತಪಟ್ಟಿರುತ್ತಾರೆ. ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

45–50 ವರ್ಷದವರಾಗಿದ್ದು, 5.5 ಅಡಿ ಎತ್ತರ, ಗೋಧಿ ಮೈ ಬಣ್ಣ, ದೃಢಕಾಯ ಶರೀರ, ಕೋಲುಮುಖ, ಕಪ್ಪು ಬಿಳಿ ಕೂದಲು ಬಿಟ್ಟಿರುತ್ತಾರೆ. ಹಸಿರು ನೀಲಿ ಬಣ್ಣದ ಚೆಕ್ಸ್ ಮಾದರಿಯ ಶರ್ಟ್ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ.

ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ದೂ.ಸಂ: 0821–2516579 ಅನ್ನು ಸಂಪರ್ಕಿಸಿ ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನಿಷ್ಠ ಪಿಂಚಣಿಗೆ ಇಪಿಎಸ್–95 ನಿವೃತ್ತ ನೌಕರರ ಆಗ್ರಹ



ಮೈಸೂರು,ಜ.10(ಪಿಎಂ)– 1995ರ ನೌಕರರ ಪಿಂಚಣಿ ಯೋಜನೆಯ (ಇಪಿಎಸ್–95) ನಿವೃತ್ತ ನೌಕರರಿಗೆ 7,500 ರೂ. ಕನಿಷ್ಠ ಪಿಂಚಣಿ ನೀಡಲು ಕರ್ನಾಟಕ ರಾಜ್ಯ ಇಪಿಎಸ್–95 ನಿವೃತ್ತ ನೌಕರರ ಒಕ್ಕೂಟದ ವತಿಯಿಂದ ಮೈಸೂರಿನಲ್ಲಿ ಮಂಗಳವಾರ ನಡೆದ ಮೈಸೂರು ವಿಭಾಗ ಮಟ್ಟದ ಸಮಾವೇಶದಲ್ಲಿ ಆಗ್ರಹಿಸಲಾಯಿತು.

ಜಗನ್ಮೋಹನ ಅರಮನೆಯಲ್ಲಿ ನಡೆದ ಸಮಾವೇಶದಲ್ಲಿ ಸಾವಿರಾರು ಇಪಿಎಸ್–95 ನಿವೃತ್ತ ನೌಕರರು ಪಾಲ್ಗೊಂಡು, ಸಮಾವೇಶ ಯಶಸ್ವಿಗೊಳಿಸಿದರು. ಉದ್ಯೋಗಿಗಳ ಮೂಲ ವೇತನಕ್ಕೆ ತಕ್ಕಂತೆ ಪಿಂಚಣಿ ನೀಡಬೇಕೆಂದು 2022ರ ನ.4ರಂದು ಸುಪ್ರಿಂಕೋರ್ಟ್ ಆದೇಶ ನೀಡಿದ್ದು, ಸದರಿ ಆದೇಶ ಜಾರಿಗೆ ಶೀಘ್ರ ಕ್ರಮ ವಹಿಸಲು ಆಗ್ರಹಿಸಲಾಯಿತು.

ಕನಿಷ್ಠ ಪಿಂಚಣಿ 7,500 ರೂ. ಜೊತೆಗೆ ಕಾಲಕಾಲಕ್ಕೆ ತಕ್ಕಂತೆ ತುಟ್ಟಿಭತ್ಯೆ ನೀಡಬೇಕು. ನಿವೃತ್ತ ಇಪಿಎಸ್ ನೌಕರರು ಮರಣ ಹೊಂದಿದರೆ ವಿಧವೆ, ವಿಧುರರಿಗೆ ಶೇ.50ರ ಬದಲು ಶೇ.100ರಷ್ಟು ಪಿಂಚಣಿ ನೀಡಬೇಕು. ಇಪಿಎಸ್ ನೌಕರರಿಗೂ ಇಎಸ್ಐ ಮತ್ತು ಬಿಪಿಎಲ್ ಕಾರ್ಡ್ ನೀಡಬೇಕು. ಜೊತೆಗೆ ಉಚಿತ ಬಸ್ ಮತ್ತು ರೈಲ್ವೆ ಪಾಸ್ ಸೌಲಭ್ಯದೊಂದಿಗೆ ವಯೋವೃದ್ಧತೆಯ ಪಿಂಚಣಿ ನೀಡಬೇಕು ಎಂದು ಒತ್ತಾಯಿಸಲಾಯಿತು.

ಹಲವು ವರ್ಷಗಳಿಂದ ಕನಿಷ್ಠ ಪಿಂಚಣಿಗೆ ಆಗ್ರಹಿಸಿ ಹೋರಾಟ ನಡೆಸುತ್ತಿದ್ದರೂ ಇಪಿಎಫ್‌ಓ (ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ) ಮತ್ತು ಕೇಂದ್ರ ಸರ್ಕಾರ ಸ್ಪಂದಿಸುತ್ತಿಲ್ಲ. ಶೀಘ್ರ ಬೇಡಿಕೆಗಳನ್ನು ಈಡೇರಿಸದಿದ್ದರೆ, ಮುಂಬರುವ ಚುನಾವಣೆಗಳಲ್ಲಿ ಮತದಾನ ಬಹಿಷ್ಕರಿಸಿ ತಕ್ಕಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಲಾಯಿತು.

ಭವಿಷ್ಯನಿಧಿ ಕುರಿತು ಮಾತನಾಡಿದ ಕೇಂದ್ರ ಭವಿಷ್ಯ ನಿಧಿ ಸದಸ್ಯ ಎ.ಕೆ.ಪದ್ಮನಾಭನ್, ಖಾಸಗಿ ಕಂಪನಿಗಳಲ್ಲಿ ಸೇವೆ ಸಲ್ಲಿಸುವ ಸಂದರ್ಭದಲ್ಲಿ ಉದ್ಯೋಗಿಗಳ ವೇತನದಲ್ಲಿ ಕಡಿತಗೊಳಿಸಿದ ಹಣದಲ್ಲಿ ಪಿಂಚಣಿ ನೀಡುವ ವ್ಯವಸ್ಥೆ ಇದ್ದು, ಈ ವ್ಯವಸ್ಥೆಯಡಿ ದೇಶದಲ್ಲಿ 60 ಲಕ್ಷಕ್ಕಿಂತಲೂ ಹೆಚ್ಚು ಪಿಂಚಣಿದಾರರು ಪಿಂಚಣಿ ಪಡೆಯುತ್ತಿದ್ದಾರೆ. ಈ ಪೈಕಿ ಶೇ.50ಕ್ಕಿಂತಲೂ ಹೆಚ್ಚು ಮಂದಿಗೆ ಸಾವಿರ ರೂ.ಗಿಂತ ಕಡಿಮೆ ಪಿಂಚಣಿ ದೊರೆಯುತ್ತಿದೆ. ಕಾನೂನುಗಳನ್ನು ತಿರುಚಿ ಮೊದಲಿಂದಲೂ ಪಿಂಚಣಿದಾರರನ್ನು ವಂಚಿಸುತ್ತ ಬರಲಾಗಿದೆ ಎಂದು ದೂರಿದರು.

ಈಗಾಗಲೇ ಪಿಂಚಣಿದಾರರ ಹೋರಾಟವು ಸರ್ಕಾರಕ್ಕೆ ಬಿಸಿ ಮುಟ್ಟಿಸಿದ್ದು, ಬೇಡಿಕೆಗಳು ಈಡೇರುವವರೆಗೂ ಹೋರಾಟ ನಿಲ್ಲಿಸಬಾರದು. ಆಯಾಯ ಕ್ಷೇತ್ರದ ಸಂಸದರನ್ನು ಪಿಂಚಣಿದಾರರು ಪ್ರಶ್ನಿಸಬೇಕು ಎಂದು ತಿಳಿಸಿದರು. ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಕಾಂಗ್ರೆಸ್ ಮುಖಂಡರಾದ ಹರೀಶ್‌ಗೌಡ, ವಿಕ್ರಾಂತ್ ಪಿ.ದೇವೇಗೌಡ, ನಗರ ಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಪೈ.ಶ್ರೀನಿವಾಸ್, ಎಸ್.ಬಿ.ಎಂ.ಮಂಜು, ಮಾಜಿ ಸದಸ್ಯ ಎಂ.ಶಿವಣ್ಣ, ಒಕ್ಕೂಟದ ಅಧ್ಯಕ್ಷ ಎಸ್.ಪಿ.ನಿಂಗೇಗೌಡ, ಉಪಾಧ್ಯಕ್ಷ ಎನ್.ರಾಜಣ್ಣ, ಸಹಕಾರ್ಯದರ್ಶಿ ಚಿಕ್ಕಮಂಚಯ್ಯ, ಖಜಾಂಚಿ ಕೆ.ವಿ.ಬಸವಣ್ಣ ಮತ್ತಿತರರು ಹಾಜರಿದ್ದರು.

ನಾಳೆಯಿಂದ ಕದಂಬ ಉತ್ಸವ




ಮೈಸೂರು, ಜ.10(ಎಂಟಿವೈ)– ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಜ.12ರಿಂದ 14ರವರೆಗೆ ನಾಟಕ ಕದಂಬ ಉತ್ಸವ ಆಯೋಜಿಸಲಾಗಿದೆ ಎಂದು ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಟಕೋತ್ಸವಕ್ಕೆ ಜ. 12 ರ ಸಂಜೆ 6.30ಕ್ಕೆ ಚಿತ್ರನಟ ಶಂಕರ್ ಅಶ್ವತ್ಥ್ ಚಾಲನೆ ನೀಡಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಸಭಾ ಕಾರ್ಯಕ್ರಮದ ಬಳಿಕ ಸಂಜೆ 7ಕ್ಕೆ ನೀಲಾಂಬಿಕೆ, ಜ.13ರಂದು ಸಂಜೆ 7ಕ್ಕೆ 'ಹಿಂಗ್ ಮಾಡಿದ್ರೆ ಹೆಂಗೆ', ಜ.14ರಂದು ಸಂಜೆ 7ಕ್ಕೆ 'ಪರಿಣಯ ಪ್ರಸಂಗ' ನಾಟಕ ಪ್ರದರ್ಶನಗೊಳ್ಳಲಿದೆ. ಈ ಮೂರು ನಾಟಕಗಳು ವಿಭಿನ್ನ ಮತ್ತು ಹೊಸ ಪ್ರಯೋಗಗಳಾಗಿದ್ದು, ನಾಟಕಾಸಕ್ತರ ಮನಸೂರೆಗೊಳ್ಳಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕದಂಬ ರಂಗವೇದಿಕೆಯ ಉಪಾಧ್ಯಕ್ಷ ಯು.ಎಸ್. ರಾಮಣ್ಣ, ಡಿ. ತಿಪ್ಪಣ್ಣ, ಪವಿತ್ರ ಫಣಿ ಇದ್ದರು.

ಆಸ್ಕರ್ ಪ್ರಶಸ್ತಿಗೆ ಕಾಂತಾರ ನಾಮನಿರ್ದೇಶನ

ಬೆಂಗಳೂರು, ಜ.10–ರಿಷಭ್‌ಶೆಟ್ಟಿ ನಿರ್ದೇಶಿಸಿ, ಅಭಿನಯಿಸಿರುವ ಕಾಂತಾರ ಸಿನಿಮಾ ಆಸ್ಕರ್‌ಪ್ರಶಸ್ತಿಯ ಎರಡು ವಿಭಾಗಗಳಿಗೆ ನಾಮನಿರ್ದೇಶನಗೊಂಡಿದೆ. ಈ ಬಗ್ಗೆ ಸಿನಿಮಾ ನಿರ್ಮಾಣ ಸಂಸ್ಥೆ ಹೊಂಬಾಳೆ ಫಿಲ್ಮ್ಸ್ ಅಧಿಕೃತವಾಗಿ ಮಾಹಿತಿ ಹಂಚಿಕೊಂಡಿದೆ.



'ಕಾಂತಾರ' ಚಿತ್ರ ಆಸ್ಕರ್ ಪ್ರಶಸ್ತಿಯ ಎರಡು ವಿಭಾಗಗಳಲ್ಲಿ ನಾಮನಿರ್ದೇಶನಗೊಂಡಿದೆ. ಈ ವಿಷಯ ಹಂಚಿಕೊಳ್ಳಲು ನಮಗೆ ಅತೀವ ಸಂತಸವಾಗುತ್ತಿದೆ. ನಮ್ಮನ್ನು ಬೆಂಬಲಿಸಿದ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು ಎಂದು ಸಂಸ್ಥೆ ಹೇಳಿದೆ. ಅಕಾಡೆಮಿ ಪ್ರಶಸ್ತಿಯ ಅತ್ಯುತ್ತಮ ಚಿತ್ರ ಮತ್ತು ಅತ್ಯುತ್ತಮ ನಟ ವಿಭಾಗಕ್ಕೆ ಕಾಂತಾರ ನಾಮನಿರ್ದೇಶನಗೊಂಡಿದೆ ಎಂಬ ಮಾಹಿತಿ ಲಭ್ಯವಾಗಿದೆ. ಈ ಹಿಂದೆ ಎಸ್‌ಎಸ್ ರಾಜಮೌಳಿ ಅವರ ಆರ್‌ಆರ್‌ಆರ್ ಸಿನಿಮಾ ಆಸ್ಕರ್‌ಪ್ರಶಸ್ತಿಗೆ ನಾಮನಿರ್ದೇಶನಗೊಂಡಿತ್ತು. ಈಗ ಕಾಂತಾರ ಚಿತ್ರ ಕೂಡ ನಾಮನಿರ್ದೇಶನ ಗೊಂಡಿದ್ದು, ಕನ್ನಡದ ಚಿತ್ರವೊಂದಕ್ಕೆ ಪ್ರಶಸ್ತಿ ಸಿಗಬಹುದೇ ಎಂಬ ನಿರೀಕ್ಷೆ ಮನೆ ಮಾಡಿದೆ.

ಜಾನಪದ ಉತ್ಸವದಲ್ಲಿ ಶಾಲಾ ಮಕ್ಕಳ ಜನಪದ ಗೀತೆ, ನಾಟಕ ಪ್ರದರ್ಶನ



ಮೈಸೂರು, ಜ.10(ಜಿಎ)– ಸಂಚಲನ ಜಾನಪದ ಉತ್ಸವದಲ್ಲಿ ವಿವಿಧ ಶಾಲೆಯ ವಿದ್ಯಾರ್ಥಿಗಳು ಜನಪದ ಗೀತೆ ಮತ್ತು ನಾಟಕ ಪ್ರದರ್ಶನ ಮೂಲಕ ರಂಜಿಸಿದರು.

ಮೈಸೂರು ಕಲಾಮಂದಿರದ ಕಿರು ರಂಗಮಂದಿರದ ಆವರಣದಲ್ಲಿ ಮೈಸೂರಿನ ಸಂಚಲನ ಸಂಸ್ಥೆ ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಂದಿಗೆ ಏರ್ಪಡಿಸಿರುವ ರಾಜ್ಯಮಟ್ಟದ ಮಕ್ಕಳ ನಾಟಕೋತ್ಸವ ಹಾಗೂ ಜಾನಪದ ಉತ್ಸವದ ಎರಡನೇ ದಿನವಾದ ಮಂಗಳವಾರ ಜಾನಪದ ಗೀತೆಗಳ ಜೊತೆಗೆ ಒಗಟಿನ ರಾಣಿ ನಾಟಕವನ್ನು ಪ್ರಸ್ತುತ ಪಡಿಸಲಾಯಿತು.

ಈ ವೇಳೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಮಿರ್ಲೇ ಶ್ರೀನಿವಾಸ್‌ಗೌಡ ಮಾತನಾಡಿ, ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಜನಪದ, ಕಲೆ, ಸಾಹಿತ್ಯ ಮತ್ತು ನಾಟಕಗಳಿಂದ ಉಳಿಸಲು ಮಾತ್ರ ಸಾಧ್ಯ. ಮನೆಯಲ್ಲಿ ಮಕ್ಕಳು ಕಲಿಯುವ ವಿಚಾರಗಳು ಬೇರೆ. ಮಕ್ಕಳು ಮಕ್ಕಳೊಂದಿಗೆ ಬೆರೆತು ಕಲಿಯುವ ವಿಚಾರಗಳಿಂದ ಮನೋವಿಕಾಸವಾಗುತ್ತದೆ. ಅದಕ್ಕೆ ಪೋಷಕರು ಸಾಥ್ ನೀಡಬೇಕು ಎಂದು ಸಲಹೆ ನೀಡಿದರು.

ನಂತರ ಅಪೂರ್ವ ಮತ್ತು ತನಿಸ್ವರ ಜೊತೆಗೂಡಿ ಹಸಿರು ಹಬ್ಬಲಿ ನೃತ್ಯ ಪ್ರಸ್ತುತ ಪಡಿಸಿದರೆ, ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯ ವಿದ್ಯಾರ್ಥಿಗಳು ಜಾನಪದ ಗೀತೆಗಳನ್ನು ಹಾಡಿದರು. ಮೈಸೂರಿನ ಸಿದ್ದಾರ್ಥ ಬಡಾವಣೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಕಲಾ ಮಂಟಪದ ಮಕ್ಕಳು ಒಗಟಿನ ರಾಣಿ ನಾಟಕ ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಗ್ಲೋಬಲ್ ಎಜುಕೇಷನ್ ಸಂಸ್ಥೆ ಅಧ್ಯಕ್ಷ ಪಿ. ಜಯಚಂದ್ರ ರಾಜು, ಹಿರಿಯ ರಂಗ ಕಲಾವಿದೆ ಇಂದಿರಾ ನಾಯರ್, ನಟ ಮನ್ವಿತ್ ಉಪಸ್ಥಿತರಿದ್ದರು.

ಅಡ್ಡಂಡ ಕಾರ್ಯಪ್ಪ ವಜಾಕ್ಕೆ ಮಹಿಳಾ ಕಾಂಗ್ರೆಸ್ ಆಗ್ರಹ



ಮೈಸೂರು, ಜ.10(ಎಂಟಿವೈ)– ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಅನ್ನಭಾಗ್ಯ ಯೋಜನೆ ಅವಹೇಳನ ಮಾಡುವ ನಾಟಕ ಪ್ರದರ್ಶನಕ್ಕೆ ಅವಕಾಶ ನೀಡುವ ಮೂಲಕ ಕೀಳು ಮಟ್ಟದ ಅಭಿರುಚಿ ಪ್ರದರ್ಶಿಸಿದ್ದಾರೆ ಎಂದು ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಡಾ. ಪುಷ್ಪಾ ಅಮರ್‌ನಾಥ್ ಕಿಡಿಕಾರಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಅನ್ನಭಾಗ್ಯದ ಮಹತ್ವ ಕೊರೊನಾ ವೇಳೆ ಎಲ್ಲರಿಗೂ ಅರಿವಾಗಿದೆ. ಈ ಕಾರ್ಯಕ್ರಮ ಇಲ್ಲದಿದ್ದಲ್ಲಿ ದೇಶದಲ್ಲಿ ಲಕ್ಷಾಂತರ ಜನರು ಹಸಿವಿನಿಂದಲೇ ಸಾಯಬೇಕಾಗಿತ್ತೆಂದು ವಿಶ್ವಸಂಸ್ಥೆ ಸಹ ಹೇಳಿರುವುದನ್ನು ಬಿಜೆಪಿಗರು ಮನಗಾಣಬೇಕು. ರಂಗಾಯಣವನ್ನು ಬಿಜೆಪಿ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಹೀಗಾಗಿಯೇ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಅವರನ್ನು ರಂಗಾಯಣದಲ್ಲಿ ತೇಜೋವಧೆ ಮಾಡುವ ಕೆಲಸ ನಡೆದಿದೆ. ಹೀಗಾಗಿ ಸಿದ್ದರಾಮಯ್ಯ ಅವರ ಬಗ್ಗೆ ಮಾತನಾಡುವ ನೈತಿಕತೆ ಬಿಜೆಪಿಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಡ್ಡಂಡ ಸಿ.ಕಾರ್ಯಪ್ಪ ಈಗಾಗಲೇ ಕ್ಷಮೆ ಯಾಚಿಸಬೇಕಾಗಿತ್ತು. ಅವರನ್ನು ನಿರ್ದೇಶಕ ಸ್ಥಾನದಿಂದ ವಜಾಗೊಳಿಸುವಂತೆ ಹೋರಾಟ ಮುಂದುವರೆಸುತ್ತೇವೆ ಎಂದರು.

ಸಿದ್ದರಾಮಯ್ಯ ಅವರ ಬಗ್ಗೆ 'ಸಿದ್ದು ನಿಜಕನಸು' ಹೆಸರಿನಲ್ಲಿ ಪುಸ್ತಕ ತಂದು ತೇಜೋವಧೆ ಮಾಡುವ ಕೆಲಸ ನಡೆದಿದೆ. ಸಿದ್ದರಾಮಯ್ಯ ಅವರ ಐದು ವರ್ಷಗಳ ಆಡಳಿತದ ಅವಧಿಯಲ್ಲಿನ ಕಾರ್ಯಕ್ರಮ, ಬಿಜೆಪಿ ಅವಧಿಯಲ್ಲಿನ ಕಾರ್ಯಕ್ರಮಗಳ ಬಗ್ಗೆ ತಿಳಿದುಕೊಳ್ಳಲಿ. ಇದು ಕೇವಲ ಶೇ.40 ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಆರೋಪಿಸಿದರು.

ಮಹಿಳೆಯರಲ್ಲಿ ನಾಯಕತ್ವ ಗುಣ ಉತ್ತೇಜಿಸುವ ಉದ್ದೇಶದಿಂದ ಜ. 16 ರಂದು ಬೆಂಗಳೂರಿನಲ್ಲಿ ಪಕ್ಷದ ವತಿಯಿಂದ 'ನಾ ನಾಯಕಿ' ಕಾರ್ಯಕ್ರಮ ಆಯೋಜಿಸಲಾಗಿದೆ. ಇದರಲ್ಲಿ ಪ್ರಿಯಾಂಕಾ ಗಾಂಧಿ ಸಹಾ ಪಾಲ್ಗೊಳ್ಳುತ್ತಿದ್ದಾರೆ. ಇದಲ್ಲದೆ, ಪಕ್ಷವನ್ನು ಮುಂಬರುವ ಚುನಾವಣೆಗೆ ಸಂಘಟನೆ ಉದ್ದೇಶದಿಂದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ರಾಜ್ಯದ ಎರಡೂ ಭಾಗಗಳಲ್ಲಿ ಪ್ರವಾಸ ಕೈಗೊಂಡು ಜನರಿಗೆ ಕಾಂಗ್ರೆಸ್ ಕಾರ್ಯಕ್ರಮ ಮನವರಿಕೆ ಮಾಡಿಕೊಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ಮಾಜಿ ಮೇಯರ್‌ಗಳಾದ ರಾಜೇಶ್ವರಿ ಪುಟ್ಟಸ್ವಾಮಿ, ಮೋದಾಮಣಿ, ಪುಷ್ಪಲತಾ ಜಗನ್ನಾಥ್, ಮಾಜಿ ಉಪಮೇಯರ್ ಪುಷ್ಪವಲ್ಲಿ, ಮಮತಾ ಪಾಲ್ಗೊಂಡಿದ್ದರು.

ಪ್ರಧಾನಿ ಮೋದಿ ಕಾರ್ಯಕ್ರಮಗಳು ವಿಶ್ವಕ್ಕೇ ಮಾದರಿ

ಬೂತ್ ವಿಜಯ ಅಭಿಯಾನದಲ್ಲಿ ಮಾಜಿ ಶಾಸಕ ಡಾ.ಎನ್.ಎಲ್.ಭಾರತೀಶಂಕರ್



ತಿ.ನರಸೀಪುರ, ಜ.10– ಪ್ರಧಾನಿ ಮೋದಿ ವಿಶ್ವ ಗುರುವಾಗಿ ಹೊರ ಹೊಮ್ಮಿದ್ದು, ಭಾರತವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದಿದ್ದಾರೆ ಎಂದು ಮಾಜಿ ಶಾಸಕ ಡಾ.ಎನ್.ಎಲ್.ಭಾರತೀಶಂಕರ್ ತಿಳಿಸಿದರು.

ಪಟ್ಟಣದಲ್ಲಿ ನಡೆದ ಬಿಜೆಪಿ ಬೂತ್ ವಿಜಯ ಅಭಿಯಾನ ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯ ಹಾಗೂ ಶಕ್ತಿ ಕೇಂದ್ರದ ಅಧ್ಯಕ್ಷರೂ ಆದ ಎಸ್.ಕೆ.ಕಿರಣ್ ನಿವಾಸದ ಮೇಲೆ ಪಕ್ಷದ ಬಾವುಟ ಕಟ್ಟಿ ಮಾತನಾಡಿದ ಅವರು, ಪ್ರಧಾನಿ ಮೋದಿ ದೇಶ ಹಾಗೂ ವಿಶ್ವ ಮೆಚ್ಚಿದ ನಾಯಕ. ಅವರು ಜಾರಿಗೆ ತಂದ ಜನೋಪಯೋಗಿ ಕಾರ್ಯಕ್ರಮಗಳು ಇಡೀ ವಿಶ್ವಕ್ಕೇ ಮಾದರಿ ಎಂದರು.

ಕೇಂದ್ರದಂತೆ ರಾಜ್ಯ ಸರ್ಕಾರವೂ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಉತ್ತಮ ಕೆಲಸ ಮಾಡುವ ಮೂಲಕ ರಾಜ್ಯದಲ್ಲಿ ಬಿಜೆಪಿ ಪರ ವಾತಾವರಣ ಸೃಷ್ಟಿಸಿದೆ. ಬಿಜೆಪಿ ಏಳಿಗೆ ಸಹಿಸದ ವಿರೋಧ ಪಕ್ಷಗಳು ಇಲ್ಲಸಲ್ಲದ ಆರೋಪ ಮಾಡುತ್ತಿವೆ. ಸರ್ಕಾರ ಶಾಲಾ ಮಕ್ಕಳ ವಿದ್ಯಾರ್ಥಿ ವೇತನ ಸ್ಥಗಿತಗೊಳಿಸಿಲ್ಲ. ಬದಲಿಗೆ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳ ಖಾತೆಗೆ ಜಮಾ ಮಾಡುತ್ತಿದೆ. ಇದನ್ನರಿಯದ ವಿರೋಧ ಪಕ್ಷಗಳು ಪ.ಜಾತಿ/ವರ್ಗದವರನ್ನು ಸರ್ಕಾರದ ವಿರುದ್ಧ ಎತ್ತಿಕಟ್ಟುವ ಕೆಲಸ ಮಾಡುತ್ತಿವೆ ಎಂದು ಆರೋಪಿಸಿದರು.

ವಿರೋಧ ಪಕ್ಷಗಳು ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸಬೇಕು. ಆಡಳಿತ ಪಕ್ಷದಲ್ಲಿ ಲೋಪ ದೋಷಗಳಿದ್ದರೆ ತಿದ್ದುವ ಕೆಲಸ ಮಾಡಬೇಕು. ಉತ್ತಮ ಕೆಲಸ ಮಾಡಿದಾಗ ಬೆನ್ನು ತಟ್ಟುವ ಮೂಲಕ ರಾಜ್ಯದ ಆಡಳಿತ ಯಶಸ್ವಿಯಾಗಿ ನಡೆಸಲು ಸಹಕರಿಸಬೇಕಿದೆ. ಆದರೆ ವಿರೋಧ ಪಕ್ಷಗಳು ತಮ್ಮ ಜವಾಬ್ದಾರಿ ಮರೆತು ಜನರಿಗೆ ಆಸಕ್ತಿ ಇಲ್ಲದ ಸ್ವಾರ್ಥರಹಿತವಾದ ವಿಷಯಗಳನ್ನು ಎಳೆದು ತಂದು ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿವೆ ಎಂದು ಕಿಡಿಕಾರಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಮಾತನಾಡಿ, ಬೂತ್ ವಿಜಯ ಅಭಿಯಾನ ಜ.12ರವರೆಗೆ ನಡೆಯಲಿದ್ದು, ಸಕ್ರಿಯ ಕಾರ್ಯಕರ್ತರನ್ನು ಗಟ್ಟಿಗೊಳಿಸಬೇಕು. ಪಂಚರತ್ನ ಬೂತ್ ಕಮಿಟಿಯಲ್ಲಿರುವ 12 ಸದಸ್ಯರು ಬೂತ್‌ನ ಎಲ್ಲಾ ಮತದಾರರನ್ನು ಭೇಟಿ ಮಾಡಿ ಬಿಜೆಪಿ ಸರ್ಕಾರದ ಜನೋಪಯೋಗಿ ಕಾರ್ಯಕ್ರಮಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಆ ಮೂಲಕ ಮುಂಬರುವ ಚುನಾವಣೆಯಲ್ಲಿ ಪಕ್ಷದ ಕಾರ್ಯಕರ್ತರು, ಬೂತ್ ಮಟ್ಟದ ಪದಾಧಿಕಾರಿಗಳು ಒಮ್ಮತದಿಂದ ಕೆಲಸ ಮಾಡಿ ಮತ್ತೊಮ್ಮೆ ಕ್ಷೇತ್ರದಲ್ಲಿ ಕಮಲ ಅರಳಿಸಲು ಶ್ರಮಿಸಬೇಕು ಎಂದರು.

ಹಿಂದುಳಿದ ವರ್ಗಗಳ ಅಧ್ಯಕ್ಷ ಗೂಳಿ ಮಹೇಶ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಜಿಲ್ಲಾ ರೈತ ಮೋರ್ಚಾ ಕಾರ್ಯದರ್ಶಿ ಶಿವಕುಮಾರ್, ನಂದನ್ ಕುಮಾರ್, ಬೂತ್ ಅಧ್ಯಕ್ಷ ಮಂಜುನಾಥ್, ಜಿಲ್ಲಾ ಕಾರ್ಯದರ್ಶಿ ಕೆ.ಎಸ್. ಬಸವರಾಜು, ಯುವ ಮೋರ್ಚಾ ಕಾರ್ಯದರ್ಶಿ ವಿಜಯ ಕುಮಾರ್, ರಮೇಶ್, ಸೋಮಶೇಖರ್, ಎಸ್ಸಿ ಮೋರ್ಚಾ ಅಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಅನಿಲ್ ಮತ್ತಿತರರಿದ್ದರು.

> ಈ ಬಾರಿ ವರಿಷ್ಠರು ಸ್ಥಳೀಯರಿಗೆ ಅವಕಾಶ ಮಾಡಿಕೊಡಬೇಕು. ಪಕ್ಷಕ್ಕೆ ಬೂತ್ ಬಲವೇ ಆಧಾರ. ಸ್ಥಳೀಯ ಮತದಾರರು ಮತ್ತು ಜನ ಸಮುದಾಯಗಳ ಜೊತೆ ಬೂತ್ ಸದಸ್ಯರು ಸಕ್ರಿಯ ಮತ್ತು ನಿರಂತರ ಸಂಪರ್ಕ ಹೊಂದಿರಬೇಕು.
> – ಎಸ್‌ಕೆಕಿರಣ್, ಕೇಂದ್ರದ ಅಧ್ಯಕ್ಷ

ಮೂಗೂರಲ್ಲಿ ವೈಭವದ ವೈಮಾಳಿಗೆ ಉತ್ಸವ



ಮೂಗೂರು, ಜ.10– ಶ್ರೀತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ವೈಮಾಳಿಗೆ ಉತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವೈಭವದಿಂದ ನಡೆಯಿತು.

ಚಿಗುರು ಕಡಿಯುವ ಕಾರ್ಯಕ್ರಮದ ಮಾರನೇ ದಿನ ಬೆಳಿಗ್ಗೆ ದೇವಾಲಯದ ಎದುರಿನ ಮಂಟಪದಲ್ಲಿ ಅಮ್ಮನವರ ಉಯ್ಯಾಲೆ ಉತ್ಸವ ನಡೆಸಲಾಯಿತು. ಆರ್ಥಿಸಿ ಗ್ರಾಮದ ಬಂಡಿ ಬೀದಿ ನಿವಾಸಿ ಎಂ.ಎಸ್.ಬಸವಣ್ಣ ಸುಕಂದಮ್ಮ ಕುಟುಂಬದವರು, ಗ್ರಾಮಸ್ಥರ ಸಹಕಾರದಿಂದ ಪಲ್ಲಕ್ಕಿ ಉತ್ಸವ ನೆರವೇರಿಸಲಾಯಿತು. ಬೆಳಿಗ್ಗೆ 10 ಗಂಟೆಗೆ ಹೂವಿನಿಂದ ಅಲಂಕೃತಗೊಂಡ ಪಲ್ಲಕ್ಕಿಯಲ್ಲಿ ಅಮ್ಮನವರನ್ನು ಪ್ರತಿಷ್ಠಾಪಿಸಿ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಗೊರವನ ಕುಣಿತ, ಮಂಗಳವಾದ್ಯಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಮಂಗಳವಾರ ಜಾತ್ರೆ ಕಡೆ ದಿನವಾಗಿದ್ದರಿಂದ ಗ್ರಾಮಸ್ಥರು ಅಲ್ಲಲ್ಲ ಬೆಲ್ಲದಾರತಿ ಪೂಜೆ ಸಲ್ಲಿಸಿದರು. ನಂತರ ಅಮ್ಮನವರ ಉತ್ಸವ ಮೂರ್ತಿಯನ್ನು ದೇವಾಲಯಕ್ಕೆ ಕೊಂಡೊಯ್ಯಲಾಯಿತು.

ಮಧ್ಯಾಹ್ನ 3.30ಕ್ಕೆ ಅಮ್ಮನವರ ಉತ್ಸವ ಮೂರ್ತಿಯನ್ನು ದೇವಾಲಯದ ಸುತ್ತ 9 ಸುತ್ತು ಪ್ರದಕ್ಷಿಣೆ ಹಾಕಲಾಯಿತು. ಈ ವೇಳೆ ದೇವಾಲಯದ ಆವರಣದಲ್ಲಿ ಸೇರಿದ್ದ ಭಕ್ತರು ನೆಮ್ಮದಿ, ಸಮೃದ್ಧಿ ಕೋರಿ ವೀಳ್ಯದೆಲೆ, ಹೂ, ಹಣ್ಣನ್ನು ಅಮ್ಮನವರಿಗೆ ಅರ್ಪಿಸಿ ಧನ್ಯತೆ ಮೆರೆದರು. ವೈಮಾಳಿಗೆ ಉತ್ಸವದ ವೇಳೆ ದಕ್ಷಿಣ ದ್ವಾರದ ಮೂಲಕ ಅಮ್ಮನವರು ಒಳ ಪ್ರವೇಶಿಸುವಾಗ ಭಕ್ತರು ಈಡುಗಾಯಿ ಒಡೆದರು. ರಾತ್ರಿ ನಡೆದ ಅಭಿಷೇಕ ಹಾಗೂ ವಿಶೇಷ ಪೂಜೆಗೆ ಶಾಸಕ ಸಿ.ಎಸ್.ಪುಟ್ಟರಾಜು ಹಾಗೂ ಅವರ ಕುಟುಂಬ ವರ್ಗದವರು ಆಗಮಿಸಿದ್ದರು. ಇದರೊಂದಿಗೆ ಮೂಗೂರು ಜಾತ್ರಾ ಮಹೋತ್ಸವಕ್ಕೆ ತೆರೆ ಬಿದ್ದಿತು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ




ಪಿರಿಯಾಪಟ್ಟಣ, ಜ.10– ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ಅಧಿಕಾರದಲ್ಲಿ ಇಲ್ಲದಿದ್ದರೂ, ಬಿಜೆಪಿ ಸರ್ಕಾರದ ಮಂತ್ರಿಗಳ ಮನೆ ಬಾಗಿಲಿಗೆ ತಿರುಗಿ ಅನುದಾನ ತಂದು ತಾಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತಿರುವುದಾಗಿ ಶಾಸಕ ಕೆ.ಮಹದೇವ್ ತಿಳಿಸಿದರು.

ತಾಲೂಕಿನ ಪಾರಕೊಪ್ಪಲು ಗ್ರಾಮದಿಂದ ಜವರಿಕೊಪ್ಪಲು ಗ್ರಾಮದವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಮತ್ತಷ್ಟು ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

2 ಬಾರಿ ನನ್ನ ವಿರುದ್ಧ ಅಪಪ್ರಚಾರ ನಡೆಸಿ ನನ್ನ ಸೋಲಿಗೆ ವಿರೋಧ ಪಕ್ಷಗಳು ಸಂಚು ಮಾಡಿದರೂ ನೀವು ನನ್ನ ಮೇಲೆ ನಂಬಿಕೆ ಇಟ್ಟು ಅಧಿಕಾರ ನೀಡಿದ್ದೀರಿ. ನಿಮ್ಮ ನಂಬಿಕೆಗೆ ನಾನು ಚ್ಯುತಿ ಬಾರದ ಹಾಗೆ ಕರ್ತವ್ಯ ನಿರ್ವಹಿಸಿದ್ದೇನೆ. ಅದೇ ರೀತಿ ಮುಂದಿನ ದಿನಗಳಲ್ಲೂ ತಾಲೂಕಿನ ಸಮಸ್ಯೆಗಳನ್ನು ಬಗೆಹರಿಸಲು ಶ್ರಮಿಸುತ್ತೇನೆ ಎಂದರು.

ಸಮಾರಂಭದಲ್ಲಿ ಮುಖಂಡರಾದ ಚಂದ್ರು ದೇವರಾಜ್ ಸೇರಿದಂತೆ ಗ್ರಾಮದ ಪ್ರಮುಖರಿದ್ದರು.



ಹೆಚ್.ಡಿ.ಕೋಟೆಯ ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬಿರ್ಸಾಮುಂಡ ಬುಡಕಟ್ಟು ಸಮಾಜ ಅಭಿವೃದ್ಧಿ ಮತ್ತು ಸೇವಾ ಒಕ್ಕೂಟ, ಗ್ರಾಪಂ ಸದಸ್ಯರ ರಾಜ್ಯ ಮಹಾ ಒಕ್ಕೂಟದ ಸಹಯೋಗದೊಂದಿಗೆ ಭಗವಾನ್ ಬಿರ್ಸಾಮುಂಡ ಅವರ 147ನೇ ಜಯಂತಿ ನಡೆಯಿತು. ಈ ವೇಳೆ ಬಿರ್ಸಾಮುಂಡಾ ಒಕ್ಕೂಟದ ಮಹಾಪೋಷಕ ಜಿ.ಎನ್.ದೇವದತ್ತ ಗ್ರಾಪಂ ರಾಜ್ಯ ಒಕ್ಕೂಟದ ಅಧ್ಯಕ್ಷ ಸತೀಶ್, ನಾಗರಾಜು, ರಂಗಸ್ವಾಮಿ, ಮಹೇಶ್, ಗುರುಸ್ವಾಮಿ, ಚಂದ್ರಶೇಖರ್, ಚಿಕ್ಕಣ್ಣ, ರಾಜು, ಅಣ್ಣೇಗೌಡ, ಲಾವಣ್ಯ, ಒಕ್ಕೂಟದ ಅಧ್ಯಕ್ಷ ಶೇಖರ್, ಉಪಾಧ್ಯಕ್ಷೆ ಯಶೋಧಮ್ಮ, ಪ್ರಧಾನ ಕಾರ್ಯದರ್ಶಿ ಬಿ.ಎಂ.ನಟರಾಜ್, ನಿರ್ದೇಶಕರಾದ ಜೆ.ವಿ.ಕಾಳಪ್ಪ, ಭಾಸ್ಕರ್, ಚೆನ್ನಪ್ಪ, ಶಾಂತಿ, ರಾಧಾದೇವಿ, ಕುಮಾರಿ, ಮಹದೇವ, ರಾಜ್, ನಾಗಮ್ಮ ಹಾಜರಿದ್ದರು.

ಶ್ರೀಧರ್ಮಸ್ಥಳ ಸಂಸ್ಥೆಯಿಂದ ರಾಜ್ಯ ಅಭಿವೃದ್ಧಿ: ಹೆಚ್‌ಪಿಎಂ



ಹನಗೋಡು, ಜ.10– ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅನೇಕ ಜನಕಲ್ಯಾಣ ಕಾರ್ಯಕ್ರಮ ಅನುಷ್ಠಾನಗೊಳಿಸುವ ಮೂಲಕ ರಾಜ್ಯದ ಅಭಿವೃದ್ಧಿಗೆ ಶ್ರಮಿಸುತ್ತಿದೆ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ಹನಗೋಡಿನಲ್ಲಿ ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹನಗೋಡು ಎ ಮತ್ತು ಬಿ ವಲಯದ ಒಕ್ಕೂಟಗಳ ಪದಗ್ರಹಣ ಹಾಗೂ ಸಾಮೂಹಿಕ ಸತ್ಯನಾರಾಯಣ ಪೂಜೆ ಧಾರ್ಮಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ಮಾಡಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತನ್ನ ಸಂಘಗಳ ಮೂಲಕ ಮಾಡುತ್ತಿದೆ. ಮದ್ಯವರ್ಜನ, ದೇವಾಲಯಗಳ ಜೀರ್ಣೋದ್ಧಾರ, ಹಾಲಿನ ಡೇರಿ ನಿರ್ಮಾಣಕ್ಕೆ ಸಹಾಯ ಧನ, ಸತ್ಯನಾರಾಯಣ ಪೂಜೆ, ಕೃಷಿಮೇಳ, ಕೃಷಿಯಂತ್ರ ಧಾರೆ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ವಸತಿ ನಿರ್ಮಾಣ ಸೇರಿದಂತೆ ಹಲವು ಕಾರ್ಯಗಳ ಮೂಲಕ ಗ್ರಾಮಗಳ ಅಭಿವೃದ್ಧಿಗೆ ಮುಂದಾಗಿದೆ. ಅಲ್ಲದೆ, ಮಹಿಳಾ ಸಬಲೀಕರಣಕ್ಕೆ ಆರ್ಥಿಕ ನೆರವು ನೀಡಿ ಅತೀ ಹೆಚ್ಚು ಉಳಿತಾಯ ಮಾಡುವುದರೊಂದಿಗೆ ಹಣ ಗಳಿಕೆಯಲ್ಲಿ ದಾಖಲೆ ನಿರ್ಮಿಸಿದೆ ಎಂದರು.

ಕಾರ್ಯಕ್ರಮದಲ್ಲಿ ಗಾವಡಗೆರೆ ಮಠದ ಶ್ರೀ ನಟರಾಜ ಸ್ವಾಮೀಜಿ ಆಶೀರ್ವಚನ ನೀಡಿ ಒಕ್ಕೂಟದ ನೂತನ ಪದಾಧಿಕಾರಿಗಳಿಗೆ ಅಧಿಕಾರ ಹಸ್ತಾಂತರ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ನಿರ್ದೇಶಕ ಮುರಳೀಧರ್, ಜಿಲ್ಲಾ ಜನ ಜಾಗೃತಿ ಸಮಿತಿ ಅಧ್ಯಕ್ಷ ಸೋಮಶೇಖರ್, ಹನಗೋಡು ಗ್ರಾಪಂ ಅಧ್ಯಕ್ಷೆ ಜಯಲಕ್ಷ್ಮಿ, ತಾಪಂ ಮಾಜಿ ಸದಸ್ಯೆ ರೂಪ, ಜನ ಜಾಗೃತಿ ಸಮಿತಿ ಸದಸ್ಯ ದಾ ರಾ ಮಹೇಶ್, ಮಹದೇವ್, ತಾಲೂಕು ಯೋಜನಾಧಿಕಾರಿ ಪಿ.ಕೆ.ರಮೇಶ್, ಮೇಲ್ವಿಚಾರಕಿ ಪುಷ್ಪಲತಾ ಸೇರಿದಂತೆ ಪೂಜಾ ಸಮಿತಿ ಸದಸ್ಯರು ಹಾಗೂ ಸಂಘಗಳ ಪದಾಧಿಕಾರಿಗಳು ಮತ್ತು ಸದಸ್ಯರು ಭಾಗವಹಿಸಿದ್ದರು.

ಜ.14, ಸಂವಿಧಾನದ ಸಂರಕ್ಷಣೆ ಜಾಗೃತಿ ಸಮಾವೇಶ



ನಂಜನಗೂಡು, ಜ.10– ಭೀಮಾ ಕೊರೆಗಾಂವ್ ವಿಜಯೋತ್ಸವ ಅಂಗವಾಗಿ ದಲಿತ ಸಂಘಟನೆಗಳ ಒಕ್ಕೂಟದಿಂದ ಜ.14 ರಂದು ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಪ್ರಬುದ್ಧ ಭಾರತ ಮತ್ತು ಪ್ರಜಾಪ್ರಭುತ್ವ ಉಳಿವಿಗಾಗಿ ಸಂವಿಧಾನದ ಸಂರಕ್ಷಣೆ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಸುರೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ನಗರದ ಜೂನಿಯರ್ ಕಾಲೇಜು ಮೈದಾನದಿಂದ ವಿವಿಧ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಯಲಿದ್ದು, ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಚಾಲನೆ ನೀಡುವರು. 11 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಶಶಿಧರ್ ಭಟ್ ಉದ್ಘಾಟಿಸುವರು. ಮುಖ್ಯ ಭಾಷಣಕಾರರಾಗಿ ಡಾ.ಎಸ್.ತುಕಾರಾಂ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಮಲ್ಲಹಳ್ಳಿ ನಾರಾಯಣ ಮಾತನಾಡಿದರು. ಗೋಷ್ಠಿಯಲ್ಲಿ ಮಲ್ಲೇಶ್, ಬಸವಣ್ಣ, ವಿಜಯ್ ಕುಮಾರ್, ಅಭಿನಾಗಭೂಷಣ್, ಕುಮಾರ್, ಇದ್ದರು.

ಮೇಲೂರು ಗ್ರಾಪಂಗೆ ಮಧುಕುಮಾರ್ ಅಧ್ಯಕ್ಷ



ಭೇರ್ಯ, ಜ.10– ಸಾಲಿಗ್ರಾಮ ತಾಲೂಕಿನ ಮೇಲೂರು ಗ್ರಾಪಂ ಅಧ್ಯಕ್ಷರಾಗಿ ಮಧುಕುಮಾರ್ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ನರೇಂದ್ರ ಕುಮಾರ್ ಅವರಿಂದ ತೆರವಾದ ಸ್ಥಾನಕ್ಕೆ ಮಧುಕುಮಾರ್ ಹಾಗೂ ಗವಿರಂಗೇಗೌಡ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಮಧುಕುಮಾರ್ 8 ಮತ ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೆ, ಪ್ರತಿಸ್ಪರ್ಧಿ ಗವಿರಂಗೇಗೌಡ 7 ಮತ ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿ ಕೃಷಿ ಸಹಾಯಕ ನಿರ್ದೇಶಕ ಗುರುಪ್ರಸಾದ್ ನೂತನ ಅಧ್ಯಕ್ಷರ ಆಯ್ಕೆಯನ್ನು ಪ್ರಕಟಿಸಿದರು. ಈ ವೇಳೆ ಪಿಡಿಓ ಗೋಪಾಲಕೃಷ್ಣ, ಉಪಾಧ್ಯಕ್ಷೆ ಭಾರತಿ, ಸದಸ್ಯರಾದ ನರೇಂದ್ರ, ಕೆ.ವಿ.ಕುಮಾರ, ದೀಪಿಕಾ, ನೀಲಾವತಿ, ಮಹದೇವಮ್ಮ, ವಿಜಯ, ಕುಮಾರ, ಪವಿತ್ರ, ಪ್ರೇಮ, ಪುಟ್ಟಸ್ವಾಮಿಗೌಡ, ವೆಂಕಟೇಶ್, ಹೇಮಲತಾ, ಕಾರ್ಯದರ್ಶಿ ಚಲುವೇಗೌಡ, ಕ್ಲರ್ಕ್ ಮಹೇಶ್ ಹಾಜರಿದ್ದರು.

ನೂತನ ಅಧ್ಯಕ್ಷರನ್ನು ಸಾಲಿಗ್ರಾಮ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯ್ ಶಂಕರ್, ತಾಪಂ ಮಾಜಿ ಅಧ್ಯಕ್ಷ ಚಂದ್ರಶೇಖರ್, ಮಾಜಿ ಉಪಾಧ್ಯಕ್ಷ ನಟರಾಜು, ಜಿಲ್ಲಾ ಕಾಂಗ್ರೆಸ್ ಸದಸ್ಯ ಅಶ್ವಥ್ ನಾರಾಯಣ್, ಕಾಂಗ್ರೆಸ್ ಮುಖಂಡರಾದ ನಾಗೇಶ್, ಟೀಕಿ, ರಾಮರಾಜು, ಮಂಜುನಾಥ್, ಪಟೇಲ್ ಹರೀಶ್, ನಾಗೇಶ್, ಸಂತೋಷ್, ಚುಂಚನಕಟ್ಟೆ ಹೋಬಳಿ ಯುವ ಕಾಂಗ್ರೆಸ್ ಅಧ್ಯಕ್ಷ ಸಚ್ಚಿನ್, ಮುಖಂಡ ರಮೇಶ್ ಅಭಿನಂದಿಸಿದರು.



ಹುಣಸೂರು ತಾಲೂಕಿನ ಟೈಲರ್ ಕ್ಷೇಮಾಭಿವೃದ್ಧಿ ಸಂಘದ ಕ್ಯಾಲೆಂಡರ್ ಅನ್ನು ಶಾಸಕ ಹೆಚ್.ಪಿ.ಮಂಜುನಾಥ್ ಬಿಡುಗಡೆಗೊಳಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಲೋಕೇಶ್, ಗೌರವಾಧ್ಯಕ್ಷ ದಿನೇಶ್, ಉಪಾಧ್ಯಕ್ಷ ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಶಂಕರಮೂರ್ತಿ, ಸಹ ಕಾರ್ಯದರ್ಶಿ ಚಂದ್ರಶೇಖರ್, ಖಜಾಂಚಿ ಮಹದೇವರಾವ್, ಸಂಘಟನಾ ಕಾರ್ಯದರ್ಶಿ ಸ್ವಾಮಿ, ಕಾರ್ಯಕಾರಿ ಸಮಿತಿ ಸದಸ್ಯ ನವೀನ್, ಅನಂತ ಪದ್ಮನಾಭ ನಟರಾಜ್, ಶಿವಕುಮಾರ್, ವೆಂಕಟೇಶ್ ಹಾಜರಿದ್ದರು.

ಕ್ರೀಡೆಯಿಂದ ಆರೋಗ್ಯ ಸುಧಾರಣೆ ಸಾಧ್ಯ: ಜಿ.ಡಿ.ಹರೀಶ್‌ಗೌಡ



ಹುಣಸೂರು, ಜ.10– ಕ್ರೀಡೆಯಿಂದ ಆರೋಗ್ಯ ಸುಧಾರಣೆ ಸಾಧ್ಯ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಗೌಡ ತಿಳಿಸಿದರು. ತಾಲೂಕಿನ ಹನಗೋಡಿನಲ್ಲಿ ಜಿಟಿಡಿಹೆಚ್ ಗ್ರೂಪ್ ಸ್ನೇಹಿತರು ಆಯೋಜಿಸಿದ್ದ ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು, ಆಟದಲ್ಲಿ ಸೋಲು–ಗೆಲುವು ಮುಖ್ಯವಲ್ಲ. ಸ್ಪರ್ಧಾ ಮನೋಭಾವದಿಂದ ಕ್ರೀಡೆಯಲ್ಲಿ ಭಾಗವಹಿಸುವುದು ಮುಖ್ಯ. ಸೋಲೇ ಗೆಲುವಿನ ಮೊದಲ ಮೆಟ್ಟಿಲು ಎಂಬುದನ್ನು ಅರಿತು ಆಟಗಳಲ್ಲಿ ಭಾಗವಹಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಗ್ರಾಮೀಣ ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದರು.

ಈ ವೇಳೆ ಜೆಡಿಎಸ್ ಮುಖಂಡರಾದ ರಂಜಿತಾ ಚಿಕ್ಕಮಾದು, ಹನಗೋಡು ಗ್ರಾಪಂ ಅಧ್ಯಕ್ಷೆ ಜಯಲಕ್ಷ್ಮಿ, ದೊಡ್ಡಹೆಜ್ಜೂರು ಗ್ರಾಪಂ ಅಧ್ಯಕ್ಷ ಸುಭಾಷ್, ಜಿಪಂ ಮಾಜಿ ಸದಸ್ಯ ಕಟ್ಟನಾಯ್ಕ, ತಾಪಂ ಮಾಜಿ ಸದಸ್ಯ ರಮೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜ್, ಹನಗೋಡು ಹೋಬಳಿ ಒಕ್ಕಲಿಗರ ಸಂಘದ ಅಧ್ಯಕ್ಷ ಪ್ರಭಾಕರ್, ಹನುಮ, ರಾಜೇಗೌಡ, ಶ್ರೀನಿವಾಸ್‌ಗೌಡ, ರಾಮಚಂದ್ರು, ಶಫಿವುಲ್ಲಾ ಇನ್ನಿತರರಿದ್ದರು.

ಓವರ್‌ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಭೂಮಿ ಪೂಜೆ



ತಿ.ನರಸೀಪುರ, ಜ.10– ರಾಷ್ಟ್ರೀಯ ಜಲಜೀವನ್ ಮಿಷನ್ ಯೋಜನೆಯಡಿ ತಾಲೂಕಿನ ಎಸ್.ದೊಡ್ಡಪುರದಲ್ಲಿ 40 ಲಕ್ಷ ರೂ. ವೆಚ್ಚದ ಓವರ್‌ಹೆಡ್ ಟ್ಯಾಂಕ್ ನಿರ್ಮಾಣ ಕಾಮಗಾರಿಗೆ ಶಾಸಕ ಎಂ.ಅಶ್ವಿನ್ ಕುಮಾರ್ ಮಂಗಳವಾರ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಗ್ರಾಮದಲ್ಲಿ ನೀರಿನ ಅಭಾವ ನಿವಾರಿಸುವ ಹಾಗೂ ಜನರಿಗೆ ಸ್ವಚ್ಛ ನೀರನ್ನು ಪೂರೈಸುವ ಸದುದ್ದೇಶದೊಂದಿಗೆ ಓವರ್‌ಹೆಡ್ ಟ್ಯಾಂಕ್ ನಿರ್ಮಿಸಲಾಗುತ್ತಿದೆ. ಗ್ರಾಮಸ್ಥರು ಕಾಮಗಾರಿ ನಡೆಯುವ ವೇಳೆ ಯಾವುದೇ ಗೊಂದಲಕ್ಕೆ ಅವಕಾಶ ನೀಡದೆ ಸಹಕರಿಸಬೇಕೆಂದು ಮನವಿ ಮಾಡಿದರು.

ಉದ್ದೇಶಿತ ಕಾಮಗಾರಿ ಮೊದಲೇ ಆರಂಭಗೊಳ್ಳಬೇಕಿತ್ತಾದರೂ, ಜಾಗದ ಸಮಸ್ಯೆಯಿಂದ ಸ್ಥಗಿತಗೊಂಡಿತ್ತು. ಈಗ ಸಮಸ್ಯೆ ಬಗೆಹರಿದಿದ್ದು, ಶೀಘ್ರ ಕೆಲಸ ಮುಗಿದು ಉದ್ಘಾಟನೆಯಾಗಲಿದೆ ಎಂದರು.

ಓವರ್‌ಹೆಡ್ ಟ್ಯಾಂಕ್ ಅಕ್ಕಪಕ್ಕ ಅಂಗನವಾಡಿ ಮತ್ತು ಶಾಲೆ ಇರುವುದರಿಂದ ಕಾಮಗಾರಿ ಉತ್ಕೃಷ್ಟವಾಗಿರಬೇಕು. ಗುತ್ತಿಗೆದಾರರು ಹಾಗೂ ಇಂಜಿನಿಯರ್‌ಗಳು ಗುಣಮಟ್ಟದ ಕಾಮಗಾರಿ ನಡೆಸುವಂತೆ ಸೂಚಿಸಿದ ಅವರು, ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯಗಳಿಗೆ ಕೊರತೆಯಾಗದಂತೆ ಅನುದಾನ ತಂದು ಸಮಗ್ರ ಅಭಿವೃದ್ಧಿ ಮಾಡಲಾಗುವುದು ಎಂದರು.

ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ಧಾರ್ಥ, ಮಾಜಿ ಸದಸ್ಯ ಜಯಪಾಲ್ ಭರಣಿ, ಗ್ರಾಪಂ ಅಧ್ಯಕ್ಷ ರವಿ, ಸದಸ್ಯ ಜಗದೀಶ್, ನವೀನ್, ನಾಗೇಶ್, ಮಲ್ಲೇಶಪ್ಪ, ಚಿದರವಳ್ಳಿ ಸೊಸೈಟಿ ಉಪಾಧ್ಯಕ್ಷ ನಾಗರಾಜ ಅರಸ್, ಎಪಿಎಂಸಿ ಮಾಜಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಮುಖಂಡರಾದ ಚಂದ್ರಪ್ಪ, ಸಾಲೂರು ಸ್ವಾಮಿ, ಹೊಸಕೊಪ್ಪಲು ಮಹದೇವ, ಬೇವಿನಹಳ್ಳಿ ಸತೀಶ್, ಸೋಸಲೆ ರಾಜೇಶ್ ಸೇರಿದಂತೆ ಇತರರಿದ್ದರು.

ಮೈಸೂರು ಚಳಿಗಾಲದ ರೇಸುಗಳು

9ನೇ ದಿನ, ಬುಧವಾರ 11–1–2023

ಇಂದಿನ ರೇಸಿಗೆ ನಮ್ಮ ಆಂಶ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಬಾಬಾ ಬುಡನ್‌ಗಿರಿ ಪ್ಲೇಟ್–1200 ಮೀ. 3 ವರ್ಷದ (ಟರ್ಮ್ಸ್).	ಮ.2.00ಕ್ಕೆ
1. ಸ್ವಾಗತಮ್ 2. ಟಾಮ್ ಕ್ರೂಸಿಯರ್ 3. ಡೇ ಆಫ್ ಕಾಮ್‌ಬಾಟ್	
II. ಹಂಪಿ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45.	ಮ.2.30ಕ್ಕೆ
1 ಸ್ಪಿರಿಚ್ಯುಯಲ್ ಫೋರ್ಸ್ 2. ಲೌಲಿ ಥಾಟ್ಸ್ 3. ಡಿ ಫೈರ್	
III. ಅಜಂತ ಪ್ಲೇಟ್– 1400 ಮೀ. ರೇಟೆಡ್ 00 ರಿಂದ 25.	ಮ.3.00ಕ್ಕೆ
1 ವಿಜಯ ಸುರಭಿ 2 ಕಂಟ್ರೀಸ್ ಫೇಸ್ 3. ಯೂನಿಟಿ	
IV. ಊಟಿ ಪ್ಲೇಟ್– 1600 ಮೀ. ರೇಟೆಡ್ 20 ರಿಂದ 45.	ಮ.3.30ಕ್ಕೆ
1. ಕೊಯೊಟ್ ಗರ್ಲ್ 2. ಕುಶಾಕ್ 3. ಸನ್‌ಲೈಟ್ ಸ್ಟಾರ್ಮ್	
V. ಏರ್‌ಫೋರ್ಸ್ ಟ್ರೋಫಿ–1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ.	ಸಂ.4.00ಕ್ಕೆ
1. ಡೌಗ್ಲಾಸ್ 2. ಪ್ರಿನ್ಸ್ ಕಾರ್ಪೊರೇಟ್ 3. ಕೊಸ್ಟಲ್ ಕ್ರೂಸ್	
VI. ಕೊಚ್ಚಿನ್ ಪ್ಲೇಟ್– 1600 ಮೀ. ರೇಟೆಡ್ 40 ರಿಂದ 65.	ಸಂ.4.30ಕ್ಕೆ
1. ಅಚೂಕ್ 2. ಅಮೆಝೋನಿಯಾ 3. ಥಿಯಾಮಾರಿಯ	
VII. ಸಂಕ್ರಾಂತಿ ಪ್ಲೇಟ್ – 1400 ಮೀ. ರೇಟೆಡ್ 40 ರಿಂದ 65.	ಸಂ.5.00ಕ್ಕೆ
1. ಆರ್ಟಿಕಲ್ ಫಿಫ್ಟೀನ್ 2. ವಿವಾ ಲಾ ವಿಡಾ 3. ರೈಸಿಂಗ್ ಸನ್	

ದಿನದ ಅತ್ಯುತ್ತಮ............	: ಡೌಗ್ಲಾಸ್
ಡಬ್ಬಲ್............	: ಅಚೂಕ್, ಆರ್ಟಿಕಲ್ ಫಿಫ್ಟೀನ್
ಜಾಕ್‌ಪಾಟ್............	: 3, 4, 5, 6 ಮತ್ತು 7
I ಟ್ರಿಬಲ್............	: 2, 3 ಮತ್ತು 4
II ಟ್ರಿಬಲ್............	: 5, 6 ಮತ್ತು 7
ಎಕ್ಸ್‌ಆಕ್ಟ್............	: 6 ಮತ್ತು 7

ಟಿಪ್‌ಸ್ಟರ್ ಪಿಜಿಸಿ

ಸೋಮಶೇಖರಪ್ಪ ನಿಧನ



ಹುಣಸೂರು, ಜ.10– ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹಾಗೂ ತಾಲೂಕಿನ ಉಯಿಗೌಡನಹಳ್ಳಿ ಗ್ರಾಮದ ನಿವಾಸಿ ಶ್ರೀಸೋಮಶೇಖರಪ್ಪ(74) ಮಂಗಳವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ಮೃತರ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

8TH YEAR REMEMBRANCE



L. MALLAIAH
1932-2015
Proprietor
SUNLIGHT
CLEANERS & DYERS
K.R. Circle, Mysore
Son: Shankar.M & Family


ಮೊದಲನೇ ವರ್ಷದ ಪುಣ್ಯಸ್ಮರಣೆ



ಸದಾ ನಿಮ್ಮ ನೆನಪಿನಲ್ಲಿರುವ ನಿಮ್ಮ ಪತಿ ಕೆ.ಪ್ರಶಾಂತ್ ಮಕ್ಕಳಾದ ಪಿ.ಶಾಲಿನಿ, ಪಿ.ಮೋಹನ ಹಾಗೂ ಕುಟುಂಬವರ್ಗದವರು ಮೂಡರಹಳ್ಳಿ, ಶ್ರೀರಂಗಪಟ್ಟಣ ತಾ॥

ಶ್ರೀಮತಿ ಯಶೋಧರವರು
ನಿಧನ : 11.01.2022


ವೈಕುಂಠ ಸಮಾರಾಧನೆ



ಇವರು ದಿ. 31.12.2022ರಂದು ವೈಕುಂಠನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪ್ರಯುಕ್ತ ದಿ. 11.1.2023, ಬುಧವಾರ ಬೆಳಿಗ್ಗೆ 10.30 ಗಂಟೆಗೆ ವೈಕುಂಠ ಸಮಾರಾಧನೆ ಕಾರ್ಯವನ್ನು #102, 3ನೇ ಅಡ್ಡರಸ್ತೆ, ಮಹದೇವಪುರ ಬಡಾವಣೆ, ಗ್ರೀ ಸ್ಕೂಲ್ ಹಿಂಭಾಗ ಕುಂಬಾರ ಕೊಪ್ಪಲು, ಮೈಸೂರಿನ ಸ್ವಗೃಹದಲ್ಲಿ ನೆರವೇರಿಸಲಾಗುವುದು. ಭೋಜನ: ಮಧ್ಯಾಹ್ನ 1 ಕ್ಕೆ

ಶ್ರೀ ಕೆ.ಜಿ.ನಂಜಯ್ಯ
ನಿಧನ: 31-12-2022

ದುಃಖತಪ್ತರು: ಶ್ರೀಮತಿ ಬೆಟ್ಟಮ್ಮ, ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬ ವರ್ಗ ಹಾಗೂ ಬಂಧು–ಮಿತ್ರರು





ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ

ಆರ್.ದಿನೇಶ್ ರವರಿಗೆ



ಹುಟ್ಟುಹಬ್ಬದ ಶುಭಾಶಯಗಳು
ತಾಯಿ ಚಾಮುಂಡೇಶ್ವರಿ ದೇವಿಯು ಇವರಿಗೆ ಸುಖ, ಶಾಂತಿ, ನೆಮ್ಮದಿ, ಆರೋಗ್ಯ, ಐಶ್ವರ್ಯ, ಕರುಣಿಸಲೆಂದು ಪ್ರಾರ್ಥಿಸುತ್ತಾ


ಶುಭಕೋರುವವರು :
ಗಂಗಾಧರ, ಗೋಪಾಲಯ್ಯ, ವಕೀಲರುಗಳಾದ : ಮಹೇಶ್, ಸಿ.ಗಣೇಶ್, ಹರದೂರು ಜವರೇಗೌಡ, ಮಹದೇವ, ನಾಗರಾಜು, ದಿನೇಶ್, ಮಂಜು, ವಿಶ್ವ, ಪ್ರಾಣೇಶ್, ರವಿ, ನಂದೀಶ್, ಮಧು, ಗಿರಿ, ಕುಮಾರ್ ಹಾಗೂ ಹಿರಿಯರು, ಹಿತೈಷಿಗಳು ಮತ್ತು ಸ್ನೇಹಿತರ ಬಳಗ

22ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ತಿಪ್ಪಕ್ಕ & ಶ್ರೀ ಪಕೀರಪ್ಪ
ನಿಧನ: 4/4/2001 - 14/1/2001
11-01-2023
ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮನ್ನು ಹೆಮ್ಮೆಯಿಂದ ಸ್ಮರಿಸುವೆವು.
ಇಂತಿ ದುಃಖತಪ್ತರು: ಮಕ್ಕಳಾದ: ಪಿ.ತಿಪ್ಪಣ್ಣ & ಪಿ.ಮಾದಪ್ಪ, ಪಿ.ಮರಿಸ್ವಾಮಿ, ಮೊಮ್ಮಕ್ಕಳಾದ: ಟಿ.ರಂಗನಾಥ, ಟಿ.ಮಂಜುನಾಥ್, ಟಿ.ಆರತಿ, ಸೊಸೆಯಂದಿರು & ಮೊಮ್ಮಕ್ಕಳು

21ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಬಿ. ಹೊನ್ನೇಗೌಡರು
ನಿಧನ : 11-01-2002
ನಿಮ್ಮ ನೆನಪಿನಲ್ಲಿ
ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಹೂಟಗಳ್ಳಿ ಗ್ರಾಮಸ್ಥರು, ಹೊನ್ನೇಗೌಡ ಬ್ಲಾಕ್, ಹೂಟಗಳ್ಳಿ

